"**CHINNADA BERALU**" A Novel written by Sudarshan Desai Published by **GAGANA Prakashana**.
No. 32, Ist Cross, VIth Main Road, Chamaraja Pet,
Bangalore - 560 018.

FIRST PRINT
ಪ್ರಥಮ ಮುದ್ರಣ - 1995

No. Pages
ಪುಟಗಳ ಸಂಖ್ಯೆ - IV + 80

ಕೃತಿಯ ಹೆಸರು : ಚಿನ್ನದ ಬೆರಳು

ಲೇಖಕರು : ಸುದರ್ಶನ್ ದೇಸಾಯಿ

ಹಕ್ಕುಗಳು : ಶ್ರೀಮತಿ ಸುಜಾತ ಸುದರ್ಶನ ದೇಸಾಯಿ

ಬೆಲೆ : 22-00

ಕಲೆ : ಕಲಾಶ್ರೀ

ಅಕ್ಷರ ಜೋಡಣೆ : ದಿಲೀಪ್ ಎಂಟರ್ ಪ್ರೈಸಸ್

ಮುದ್ರಣ

ಜಗನ್ನಾಥ್ ಆಫ್‌ಸೆಟ್ ಪ್ರಿಂಟರ್ಸ್

ಬೆಂಗಳೂರು - 53.

ಆತ್ಮೀಯ ಓದುಗರೆ,

ಚಿನ್ನ ನಮ್ಮ ಭಾರತೀಯರಿಗೆ ತುಂಬಾ ಅಚ್ಚುಮೆಚ್ಚು. ಅದು ಮೈ ಮೇಲಿದ್ದರೆ ಒಂದು ಬಗೆಯ ಹೆಮ್ಮೆ. ಪ್ರತಿಯೊಬ್ಬರೂ ಎಷ್ಟು ಸಾಧ್ಯವೋ ಅಷ್ಟು ಚಿನ್ನ ಪಡೆಯಲು ಹಾತೊರೆಯುತ್ತ ಬಂದಿದ್ದಾರೆ. ಇದರಿಂದಾಗಿ ಚಿನ್ನದ ಕಳ್ಳ ಸಾಗಾಣಿಕೆ ಭಾರತದಲ್ಲಿ ಮೊದಲಿನಿಂದಲೂ ನಡೆದು ಬಂದ ಕ್ರಮ. ಈಗದು ತನ್ನ ಪರಾಕಾಷ್ಠೆ ತಲುಪಿದೆ. ಚಿನ್ನ ಸಂಪಾದಿಸಲು ಯಾವದಕ್ಕೂ ಹೇಸದ ಜನ ನಮ್ಮಲ್ಲಿದ್ದಾರೆ. ತಮ್ಮೆಲ್ಲ ತಂತ್ರಗಳು ವಿಫಲವಾದಾಗ ಅವರ ದೃಷ್ಟಿ ಮುಗ್ಧ ಮಕ್ಕಳ ಮೇಲೆ ಬಿದ್ದಿತು. ಅವರ ವಿವಶತೆ ನೋಡಿ ಅದರ ದುರುಪಯೋಗ ಪಡೆದುಕೊಂಡು ಅವರಿಗೆ ತಿಳಿಯದಂತೆ ಅವರನ್ನು ಚಿನ್ನದ ಕಳ್ಳ ಸಾಗಾಣಿಕೆಗೆ ತೊಡಗಿಸಿದರು.

ಇಂದು ನಮ್ಮ ದೇಶದ ಬಾಲಾಪರಾಧಿಗಳ ಶಾಲೆಯಲ್ಲಿ ಇಂಥ ಮಕ್ಕಳೇ ಹೆಚ್ಚಿದ್ದಾರೆ. ತಮ್ಮ ತಿಳುವಳಿಕೆಗೆ ಬಾರದಂತೆ ತಾವು ಅಪರಾಧಿಗಳಾಗಿ ಸೆರೆ ಸೇರಿದ್ದಾರೆ.

ಅಂಥವರ ಕತೆ " ಚಿನ್ನದ ಬೆರಳು "

ಸುಪ್ರಸಿದ್ಧ ವಾರಪತ್ರಿಕೆ ಇದನ್ನು ಪ್ರಕಟಿಸಿದ ಸಂಪಾದಕರಾದ ಕೃಷ್ಣಮೂರ್ತಿ ಅವರಿಗೆ, ಅವರ ಸಿಬ್ಬಂದಿಗೆ ಪುಸ್ತಕ ರೂಪದಲ್ಲಿ ತರುತ್ತಿರುವ ಮಿತ್ರ ವಿಜಯಕುಮಾರ ಇವರಿಗೆ ನಾನು ಆಭಾರಿ.

ವಂದನೆಗಳು

ತಮ್ಮ

ಸುದರ್ಶನ ದೇಸಾಯಿ.

"ಹಳದಿ ಚೇಳು "
ಸುದರ್ಶನ ದೇಸಾಯಿ ಕಾಲೋನಿ,
ಸರಸ್ವತಿಪುರ, ಧಾರವಾಡ -580 002.

## ಸುದರ್ಶನ ದೇಸಾಯಿ ಅವರ ಇತರ ಕೃತಿಗಳು

ತಿರುವು
ಹಳದಿ ಚೇಳು
ಕೆರಳಿದ ಸರ್ಪ
ಹಾವಿನ ಕಣ್ಣು
ಸಂಜೆ ಮಲ್ಲಿಗೆ
ನೀರ ಮೇಲಿನ ಹೆಜ್ಜೆಗಳು
ಹಾಲಿನ ಕಡಲು ಜೇನಿನ ಒಡಲು
ಚೋಬ್ರಾ ಸೇನ
ನೀಲಿ ಕಣ್ಣುಗಳು
ಹೊಲಿದ ತುಟಿಗಳು
ಬ್ರೌನ್ ಶುಗರ್
ವೈಪರ್
ಐರಾವತ
ಬೆಕ್ಕಿನ ಹೆಜ್ಜೆ
ರಿಂಗೋ
ಬಣ್ಣದ ಬೆಕ್ಕು
ಎಂಟೆದೆ ಬಂಟ
ಅಪೂರ್ವ ಕನಸುಗಾರ
ಅಪಹರಣ
ಸೇವಕ
ಕೆಲ್ಲಿ
ಸೂರ್ಯಚಂದ್ರ ಸಾಕ್ಷಿ
ಅಗ್ನಿ ಪರ್ವತ
ಕಪ್ಪುಗಂಟೆ
ಬೆಂಕಿಮಡಿಲಲ್ಲಿ ಮೇಜರ್

ಹೇಮಂತ
ವಿಚಿತ್ರ ಅಪರಾಧಿ
ಯಮದೂತರು
ದೇಶದ್ರೋಹಿ
ಸೀಳುನಾಲಿಗೆ
ಸಿಡಿಮದ್ದು
ಪೋಲಿಸ್ ಡಾಗ್
ಮಹಾಮಾನವ
ಪ್ರೇಮಲೋಕದ ಮಕರಾಕ್ಷ
ಮೃತ್ಯುವಿಗೆ ಮುತ್ತಿಟ್ಟವರು
(ಲೇಖನ)
ಕನ್ನಡದಲ್ಲಿ ಪತ್ತೇದಾರಿ ಸಾಹಿತ್ಯ
ಅಮಾವಾಸ್ಯೆ ಚಂದಿರ
(ಫೋಟೋ ಕಾಮಿಕ್ಸ್)
ಕರಿನಾಯಿ (ನಾಟಕ)
ಬಂಡೆಗಲ್ಲಿನ ರಾಜಕುಮಾರಿ
(ಮಕ್ಕಳ ಕಥೆ)
ಕೆಂಪು ಜೇಡ
ಅಮರ ದೀಪ
ವಿಷ ಮಂಥನ
ಮೃತ್ಯುಬಂಧನ
ಆರನೇ ವ್ಯಕ್ತಿ
ಚಿನ್ನದ ಬೆರಳು
ಕಾಡು ಗುಲಾಬಿ

# ಚಿನ್ನದ ಬೆರಳು

**ಮೇ**ಜರ ಹೇಮಂತನ ಬರುವಿಗಾಗಿ ನಿರೀಕ್ಷಣಾಲಯದ ಮಕ್ಕಳು ಉತ್ಸುಕತೆಯಿಂದ ಕಾದಿದ್ದರು. ಭಾರತೀಯರಿಗೆ ಚಿರಪರಿಚಿತ, ಧೀಮಂತ, ದೇಶಕ್ಕಾಗಿ ಪ್ರಾಣ ಅರ್ಪಿಸಲು ಹಿಂದೆ ಮುಂದೆ ನೋಡದ, ಸಿಂಹದೆದೆಯ, ಶತ್ರುಗಳ ಪಾಲಿಗೆ ಯಮಸದೃಶನಾದ ಜಗದ್ವಿಖ್ಯಾತ ಮೇಜರ ಹೇಮಂತನ ಬಗ್ಗೆ ರಿಮಾಂಡಹೋಮ್ ನಿರೀಕ್ಷಕರಾದ ಕೆಂಗಪ್ಪನವರು ವಿವರವಾಗಿ ಮಕ್ಕಳಿಗೆ ತಿಳಿಸಿ ಹೇಳಿದ್ದರು. ಹೀಗಾಗಿ ಅವರೆಲ್ಲರೂ ಆ ವೀರಪುರುಷನನ್ನು ಪ್ರತ್ಯಕ್ಷವಾಗಿ ಕಾಣಲು ಚಡಪಡಿಸತೊಡಗಿದ್ದರು. ಸ್ವತಃ ಕೆಂಗಪ್ಪನವರೂ ಸಹ ಹೇಮಂತನನ್ನು ಕಾಣಲು ಚಡಪಡಿಸತೊಡಗಿದ್ದರು. ಹೇಮಂತನ ಖ್ಯಾತಿ ಕೇಳಿ ಅರಿತಿದ್ದ ಅವರು ನವ್ಹೆಂಬರ ಹದಿನಾಲ್ಕರಂದು ತಮ್ಮ ನಿರೀಕ್ಷಣಾಲಯಕ್ಕೆ ಭೆಟ್ಟಿ ಕೊಟ್ಟು, ಮಕ್ಕಳಿಗೆ ಆಶೀರ್ವದಿಸಬೇಕೆಂದು ಪತ್ರ ಬರೆದಿದ್ದರು. ಅವರ ವಿನಂತಿಯನ್ನು ಸ್ವೀಕರಿಸಿದ ಹೇಮಂತ ಮರುಟಪಾಲಿಗೆ ಉತ್ತರಿಸಿ ತಾನು ಬರುವದಾಗಿ ತಿಳಿಸಿದ್ದ. ಅವನ ಪ್ರೀತಿ, ವಿಧೇಯತೆ, ದೊಡ್ಡಗುಣಕ್ಕೆ ಮನಸೋತ ಕೆಂಗಪ್ಪನವರು ತಮ್ಮ ಮಕ್ಕಳೊಂದಿಗೆ ಹೇಮಂತನನ್ನು ಸ್ವಾಗತಿಸಲು ಸಂಭ್ರಮದ ಸಿದ್ಧತೆ ಮಾಡಿದ್ದರು. ಎಲ್ಲಕ್ಕಿಂತ ಹೆಚ್ಚಿನ ಸಂತಸದ ವಿಷಯವೆಂದರೆ ಹೇಮಂತ ಒಬ್ಬನೇ ಬಾರದೇ ಆತ ತನ್ನ ಜೊತೆಗೆ ಜೀವಕ್ಕಿಂತಲೂ ಹೆಚ್ಚಿನ ಸಂಗಾತಿಗಳಾದ ಸುಷಮಾ ಹಾಗೂ ಅಶೋಕರನ್ನೂ ಸಹ ಕರೆತರುವವನಿದ್ದ.

ನಿರೀಕ್ಷೆ ಮತ್ತು ಕಾತರಗಳ ನಡುವೆ ಸಿಕ್ಕಿ ವಿಚಿತ್ರ ಹಿಂಸೆ ಅನುಭವಿಸುತ್ತಿದ್ದ ಕೆಂಗಪ್ಪನವರಿಗೆ ಸಮಯ ಮುಂದೆ ಓಡುತ್ತಾನೇ ಇಲ್ಲ ಅನಿಸುತ್ತಿತ್ತು. ಅವರು ಪದೇಪದೇ ಹಾಲಿನಲ್ಲಿದ್ದ ಗಡಿಯಾರದತ್ತ ನೋಡುತ್ತಿದ್ದರು. ಹತ್ತು ಗಂಟೆಗೆ ತಾನು ಬರುವದಾಗಿ ತಿಳಿಸಿದ್ದ ಹೇಮಂತ. ಹತ್ತಕ್ಕಿನ್ನೂ ಹತ್ತು ನಿಮಿಷಗಳಿದ್ದವು. ಅಂತೂ ಕೊನೆಗೊಮ್ಮೆ ಆ ಹತ್ತು ನಿಮಿಷಗಳು ಕೊನೆಗೊಂಡವು. ಗಡಿಯಾರ ಸಮಧುರ ಶಬ್ದದೊಂದಿಗೆ ಹತ್ತು ಬಾರಿ ಬಾರಿಸಿ ಮೌನತಾಳಿತು. ಹೊರಗಡೆ ರಸ್ತೆ ತಿರುವಿನಲ್ಲಿ ಹೇಮಂತನ ಕಾರು ಕಾಣಿಸಿಕೊಂಡಿತು.

ನಿರೀಕ್ಷಣಾಲಯದ ಗೇಟಿಗೆ ಕಾರು ಬರುತ್ತಿದ್ದಂತೆ ತಮ್ಮ ಭಾವನೆಗಳನ್ನು ಹತ್ತಿಕ್ಕಿಕೊಳ್ಳಲಾರದ ಮಕ್ಕಳು ಹರ್ಷೋದ್ಗಾರ ಮಾಡಿದರು. ಗೇಟಿಗೇ ತನ್ನ ಕಾರು ನಿಲ್ಲಿಸಿದ ಹೇಮಂತ ಸುಷಮಾ ಮತ್ತು ಅಶೋಕರೊಂದಿಗೆ ಕಾರಿನಿಂದಿಳಿದು ನಿರೀಕ್ಷಣಾಲಯದ ಕಡೆಗೆ ನಡೆದು ಬಂದಾಗ ಕೆಂಗಪ್ಪನವರ ಕಣ್ಣುಗಳು ಹನಿಗೂಡಿದವು. ತನ್ನ ಶ್ರೀಮಂತಿಕೆ, ದರ್ಪ ತೋರಿಸಲು ಒಪ್ಪದ ಆ ಕರ್ಮಪುರುಷ ಕಾಲ್ನಡಿಗೆಯಿಂದ ರಿಮಾಂಡ್‌ಹೋಮ್ ಪ್ರವೇಶಿಸಿದ್ದ. ಅವನನ್ನು ಸ್ವಾಗತಿಸಲು ಕೆಂಗಪ್ಪನವರು ಮುಂದಾದಾಗ ಅವರನ್ನು ಎಪ್ಪತ್ತು ಎಂಭತ್ತು ಮಕ್ಕಳು ಅನುಸರಿಸಿದರು. ತನ್ನೆಡೆಗೆ ಕೆಂಪು ಗುಲಾಬಿಗಳನ್ನು ಚಾಚಿದ ಮೂರು ನಾಲ್ಕು ಮಕ್ಕಳನ್ನು ಅಪ್ಪಿ ಅವರ ಮೇಲೆ ಪ್ರೀತಿಯ ಮಳೆಗರೆದ ಹೇಮಂತ. ಕೆಂಗಪ್ಪನವರು ಮುಂದೆ ಬಂದು ತಮ್ಮ ಪರಿಚಯ ಮಾಡಿಕೊಟ್ಟರು. ಪ್ರೇಮದಿಂದ ಅವರನ್ನು ಅಪ್ಪಿಕೊಂಡು ಅವರಿಗೆ ಸುಷಮಾ ಹಾಗೂ ಅಶೋಕರ ಪರಿಚಯ ಮಾಡಿಕೊಟ್ಟ ಹೇಮಂತ. ಅವರೆಲ್ಲರೂ ಮಾತನಾಡುತ್ತ ಆಫೀಸಿಗೆ ಬಂದರು. ಕುರ್ಚಿಯಲ್ಲಿ ಕುಳಿತುಕೊಳ್ಳುತ್ತ ಹೇಮಂತ ನುಡಿದ. "ಕೆಂಗಪ್ಪನವರೆ, ನಾವಿಲ್ಲಿ ಯಾರ ಒತ್ತಾಯಕ್ಕೂ ಬಂದಿಲ್ಲ, ನಮ್ಮ ನಮ್ಮ ಸ್ವಾರ್ಥಕ್ಕಾಗಿ ಬಂದಿದ್ದೇವೆ. ಒಂದಿಲ್ಲೊಂದು ಕೆಲಸದಲ್ಲಿ ಸದಾಕಾಲ ವ್ಯಸ್ತರಾಗಿರುವ ನಾವು ಕನಿಷ್ಠಪಕ್ಷ ಒಂದು ದಿನವಾದರೂ ಈ ಮಕ್ಕಳೊಂದಿಗೆ ಕಳೆದು ಧನ್ಯತೆ ಅನುಭವಿಸಲು ಬಂದಿರುವೆವು. ಅದಕ್ಕಾಗಿ ಇಂದಿನ ಎಲ್ಲಾ ಖರ್ಚು ನಮಗೆ ಸೇರಿದ್ದು. ನಮಗಾಗಿ ನೀವು ಒಂದು ಪೈಸೆಯನ್ನೂ ಖರ್ಚು ಮಾಡಬೇಕಿಲ್ಲ. ಹಾಂ ಒಂದು ಮಾತು. ನೀರನ್ನು ಮಾತ್ರ ಬೇಕಾದಷ್ಟು ಕುಡಿಸಬಹುದು. ಅದನ್ನು ನಿರಾಕರಿಸಲಾರೆವು."

ಕೆಂಗಪ್ಪನವರಿಗೆ, ಶುದ್ಧ ಅಂತಃಕರಣದಿಂದ ಬಂದ ಹೇಮಂತನ ಮಾತುಗಳನ್ನು ತಿರಸ್ಕರಿಸಲು ಆಗಲಿಲ್ಲ. ಒಪ್ಪಿಕೊಂಡರು. ಕಾಫಿ ಕುಡಿದಾದ ಮೇಲೆ ಭರಭರ

ಎದ್ದು ಹೊರಗೆ ಹೋದ ಸುಷಮಾ ಮತ್ತು ಅಶೋಕ ಜವಾನರ ಕೈಯಲ್ಲಿ ಹತ್ತಾರು ಪ್ಯಾಕೆಟ್, ನಾಲ್ಕಾರು ಬಿದಿರು ಬುಟ್ಟಿಗಳನ್ನು ತಂದು ಮುಂದಿರಿಸಿದರು. ಅವುಗಳ ಕಡೆ ನೋಡುತ್ತ ಕೆಂಗಪ್ಪ "ಇವೆಲ್ಲಾ ಏನು?" ಎಂದು ಕೇಳಿದರು. "ದೊಡ್ಡ ದೊಡ್ಡ ಪ್ಯಾಕೆಟ್‌ಗಳಲ್ಲಿ ಒಂದು ನೂರು ಜೊತೆ ಬಟ್ಟೆಗಳಿವೆ. ಬುಟ್ಟಿಗಳಲ್ಲಿ ಮಿಠಾಯಿ ಹಾಗೂ ಹಣ್ಣುಗಳಿವೆ...ಎಲ್ಲಾ ಮಕ್ಕಳಿಗಾಗಿ. ಮಕ್ಕಳಿಗೆ ಯಾವ ಅಳತೆಯ ಬಟ್ಟೆಗಳು ಬೇಕೆಂದು ನನಗೆ ತಿಳಿಯದು...ಇಷ್ಟೇ ಇರಬೇಕೆಂದು ಅನುಮಾನದಿಂದ ತಂದಿರುವೆ. ಹೆಚ್ಚು ಕಡಿಮೆಯಾದರೆ ದಯವಿಟ್ಟು ಕ್ಷಮಿಸಿ."

"ಅಯ್ಯಯ್ಯೋ ಹಾಗೆನ್ನಬೇಡಿ. ನಿಮ್ಮಂಥವರು ಇಲ್ಲಿಯವರೆಗೂ ಬಂದು ಈ ದುರ್ದೈವಿ ಮಕ್ಕಳನ್ನು ಪ್ರೀತಿಯಿಂದ ಕಾಣುತ್ತಿದ್ದೀರಲ್ಲ ಅದೇ ದೊಡ್ಡದು ನಮಗೆ..."

ಅರ್ಧಗಂಟೆಯಲ್ಲಿ ಎಲ್ಲ ಮಕ್ಕಳ ಮೈ ಮೇಲೆ ಹೊಸ ಬಟ್ಟೆಗಳು ಕಂಗೊಳಿಸತೊಡಗಿದವು. ತಮಗಾದ ಹರ್ಷ ತಾಳಲಾರದೇ ಕುಣಿದು ಕುಪ್ಪಳಿಸುತ್ತಿದ್ದ ಮಕ್ಕಳನ್ನು ಕಂಡು ಗದ್ಗದಿತನಾದ ಮೇಜರ್. ಅವನ ಕಣ್ಣುಗಳಿಂದ ಉದುರುತ್ತಿದ್ದ ಆನಂದಬಾಷ್ಪಗಳನ್ನು ಕಂಡು ಅಚಂಭಿತನಾದ ಕೆಂಗಪ್ಪ ಕೇಳಿದರು.

"ನೀವೇಕೆ ಕಣ್ಣೀರು ಮಿಡಿಯುತ್ತಿದ್ದೀರಿ?"

"ಕೆಂಗಪ್ಪನವರೆ ನನಗೆ ನನ್ನ ಬಾಲ್ಯದ ದಿನಗಳು ನೆನಪಾದವು. ಈ ರೀತಿ ಬಟ್ಟೆ ತಂದು ಕೊಡುವವರು ನಮಗಿದ್ದಿಲ್ಲ. ಸರಕಾರದಿಂದ ಬಂದ ಎರಡು ಜೊತೆ ಬಟ್ಟೆಗಳು ಹರಿದು ಚಿಂದಿಯಾದ ಮೇಲೆಯೇ ಬೇರೆ ಬಟ್ಟೆಗಳು ದೊರೆಯುತ್ತಿದ್ದವು. ಬಣ್ಣಬಣ್ಣದ ಬಟ್ಟೆಗಳಂತೂ ನಮಗೆ ಗಗನ ಕುಸುಮವಾಗಿದ್ದವು"

"ಅಂದರೆ.... ಅಂದರೆ...." ಅರ್ಧಕ್ಕೆ ನಿಲ್ಲಿಸಿದರು ಕೆಂಗಪ್ಪ.

"ಈ ಮಕ್ಕಳಂತೆ ನಾನೂ ಅನಾಥ, ಕೆಂಗಪ್ಪನವರೆ, ನನ್ನ ಬಾಲ್ಯ ಈ ಮಕ್ಕಳಂತೆ ಅನಾಥಾಲಯದಲ್ಲಿ ಕಳೆದಿದೆ."

"ಓಹ್ ನನಗೆ ಗೊತ್ತಿರಲಿಲ್ಲ. ನಿಮ್ಮ ಮನಸ್ಸು ನೋಯಿಸಿದೆ. ನನ್ನನ್ನು ದಯವಿಟ್ಟು ಕ್ಷಮಿಸಿ."

"ಛೆಛೆ ಇದೆಂಥ ಮಾತು. ಕ್ಷಮೆ ಕೇಳುವಂತಹದೇನಿದೆ ಇದರಲ್ಲಿ? ಒಂದು ದೃಷ್ಟಿಯಿಂದ ನೀವು ನನಗೆ ಮಹದುಪಕಾರವನ್ನೇ ಮಾಡಿರುವಿರಿ. ಕಷ್ಟಮಯವಾದ ನನ್ನ ಬಾಲ್ಯದ ದಿನಗಳನ್ನು ಮೆಲುಕು ಹಾಕುವ ಸದವಕಾಶ ತಂದು ಕೊಟ್ಟಿದ್ದೀರಿ."

"ಹೋಗಲಿ ಬಿಡಿ. ಆ ಕಷ್ಟದ ದಿನಗಳ ನೆನಪೇ ಬೇಡ. ಮರೆತುಬಿಡಿ"

"ಕೂಡದು ಕೆಂಗಪ್ಪನವರೆ, ಯಾವುದನ್ನು ಮರೆತರೂ ಕಷ್ಟದ ದಿನಗಳನ್ನು, ಕಷ್ಟದಲ್ಲಿ ನೆರವಾದವರನ್ನು ಎಂದೆಂದೂ ಮರೆಯಬಾರದು. ಸುಖಜೀವನಕ್ಕೆ ಕಷ್ಟದ ದಿನಗಳೇ ಮೊದಲ ಸೋಪಾನ.. ನನ್ನನ್ನೇ ನೋಡಿ. ಆಗ ಕಷ್ಟಪಟ್ಟೆ. ಈಗ ಸುಖವಾಗಿ ಹಾಯಾಗಿರುವೆ. ಕುಲುಮೆಯಲ್ಲಿ ಬೆಂದ ಕಬ್ಬಿಣದಂತೆ. ನಾನಿಂದು ಎಲ್ಲವನ್ನೂ ಸಹಿಸಿ ಉಕ್ಕಿನ ಮನುಷ್ಯನಾಗಿ ನಿಂತಿರುವೆ. ಏನನ್ನಾದರೂ ಎದುರಿಸಲು ಸಿದ್ಧ ನಾನೀಗ. ಹೇಳಿ ಇದು ಸಾಮಾನ್ಯ ಮಾತೇ?"

ಮಹಾದಾರ್ಶನಿಕನಂತೆ ನುಡಿದ ಹೇಮಂತನೆಡೆ ಆಚ್ಚರಿಯಿಂದ ನೋಡಿದರು ಕೆಂಗಪ್ಪ. ಸಿಂಹಗರ್ಜನೆಯೊಂದಿಗೆ ಶತ್ರುಗಳ ಎದೆ ಸೀಳುವ ಸಾಹಸಿ ಹೇಮಂತನ ಹೃದಯದಿಂದ ಇಂಥ ದಾರ್ಶನಿಕ ಸತ್ಯ ನುಡಿಗಳು! ಅವರಿಗೆ ನಂಬಿಕೆಯೇ ಆಗದು.

ಮುಂದೆ ರಾತ್ರಿಯಾಗುವವರೆಗೂ ಸಮಯ ಸರಿದದ್ದೇ ತಿಳಿಯಲಿಲ್ಲ. ಭರ್ಜರಿ ಊಟ ಮಾಡಿದ ನಂತರ ಮಕ್ಕಳು ಹೇಮಂತ ತರಿಸಿದ ಟಿ.ವಿ.ಯಲ್ಲಿ ವಿ.ಸಿ.ಪಿ. ಮೂಲಕ ಎರಡು ಮೂರು ಸಿನೆಮಾ ನೋಡಿದರು. ಅವರ ಆನಂದಕ್ಕೆ ಪಾರವೇ ಇರಲಿಲ್ಲ.... ಅವರೆಲ್ಲರನ್ನೂ ಹಾಲ್‌ನಲ್ಲೇ ಬಿಟ್ಟು ಹೇಮಂತ ಮೇಲೆದ್ದು ಹೊರಬಂದ. ಅವನ ಸಂಗಡಿಗರು ಹಿಂಬಾಲಿಸಿದರು. ಅವರ ಹಿಂದೆ ಕೆಂಗಪ್ಪನವರೂ ಬಂದರು. ನಾಲ್ವರೂ ಹೊರಗೆ ಪಾರ್ಕಿಗೆ ಬಂದು ಸಿಮೆಂಟ್ ಬೆಂಚ್ ಮೇಲೆ ಆಸೀನರಾದರು.

ಮೇಲೆ ಆಕಾಶದಲ್ಲಿ ಮುಕ್ಕಾಲು ಭಾಗ ಅರಳಿ ನಿಂತ ಚಂದಿರ, ಅವನ ಹಾಲು ಬೆಳಕು. ಕೆಳಗೆ ಹಸಿರು ಹುಲ್ಲಿನ ಮೆತ್ತನೆ ಹಾಸಿಗೆ. ಮೇಜರನೇ ಮಾತು ಆರಂಭಿಸಿದ.

"ಕೆಂಗಪ್ಪನವರೆ ನಿಮ್ಮ ನಿರೀಕ್ಷಣಾಲಯದಲ್ಲಿ ಮಾತ್ರವಲ್ಲ ನನಗೆ ತಿಳಿದ ಮಟ್ಟಿಗೆ ಪ್ರತಿಯೊಂದು ನಿರೀಕ್ಷಣಾಲಯದಲ್ಲೂ ಇಂಥ ಮಕ್ಕಳು ಇದ್ದೇ ಇದ್ದಾರೆ. ಅನಾಥರಾಗಿ ಅತ್ತಿತ್ತ ತಿರುಗುತ್ತಿರುವ ಇಂಥ ಮಕ್ಕಳ ಮೇಲೆ ಸಮಾಜದ್ರೋಹಿಗಳ ಕಣ್ಣು ಸುಲಭವಾಗಿ ಬೀಳುತ್ತದೆ. ಆಶೆ-ಆಮಿಷ ಒಡ್ಡಿ ಅವರ ಮೂಲಕ ಚಿನ್ನದ ಬಿಸ್ಕೆಟ್, ಮಾದಕ ದ್ರವ್ಯ ಅಥವಾ ಪದಾರ್ಥಗಳನ್ನು ಸಾಗಿಸಲು ಪ್ರಯತ್ನಿಸುತ್ತಾರೆ. ಕೆಲವೊಂದು ಕಡೆ ಕೆಲವೊಂದು ಸಾರಿ ಕರ್ತವ್ಯಚ್ಯುತ ಪೊಲೀಸರೂ ಸಹ ಇವರಿಗೆ ಸಹಾಯ ಮಾಡುತ್ತಾರೆಂದು ಕೇಳಿರುವೆ. ಈ

ರೀತಿ ದುಷ್ಟರ ಜಾಲದಲ್ಲಿ ಸಿಲುಕಿದ ಮಕ್ಕಳು ಬಗೆಬಗೆಯ ಹಿಂಸೆ ಅನುಭವಿಸಿ ಕೊನೆಗೆ ನಮ್ಮಲ್ಲಿ ಬಂದು ಸೇರುತ್ತವೆ.''

''ನೀವು ಹೇಳುವದು ನಿಜವೇ ಆಗಿದ್ದರೆ ತುಂಬಾ ಅನ್ಯಾಯವಾದಂತಾಯಿತು. ಅಪರಾಧದ ಗಂಧವನ್ನೇ ಅರಿಯದ ಮಕ್ಕಳು.... ಛೀ ಹೀಗಾಗಬಾರದು. ಇಂಥ ಮಕ್ಕಳನ್ನು ನೋಡುವ ದೃಷ್ಟಿ ಬದಲಾಗಬೇಕು. ಅವರಿಗಾಗಿ ಬೇರೆ ಬಗೆಯ ನ್ಯಾಯದ ಕಣ್ಣಿನ ವ್ಯವಸ್ಥೆಯಾಗಬೇಕು. ಅವರು ನಿರಪರಾಧಿಗಳೆಂದು ಸಿದ್ಧವಾಗಿ ಸುಂದರ ಜೀವನ ಅವರು ನಡೆಸುವಂತಾಗಬೇಕು.''

''ನಿಮ್ಮ ವಿಚಾರ ಸ್ತುತ್ಯವಾದರೂ ಅಸಾಧ್ಯವಾದುದು ಮೇಜರ್. ನ್ಯಾಯ ಪದ್ಧತಿಯ ಕಾರ್ಯಪ್ರಣಾಲಿಯೇ ಬದಲಾಗಬೇಕೆಂದು ನೀವು ಹೇಳುತ್ತಿದ್ದೀರಿ ಅಲ್ಲವೆ?''

''ಹೌದು. ಈ ಬಗೆಯ ಚೌಕಟ್ಟಿನಲ್ಲಿ ಬಂಧಿಸಲ್ಪಡುವ ಮಕ್ಕಳನ್ನು ಸ್ವತಃ ನ್ಯಾಯಾಧೀಶರೇ ವಿಚಾರಿಸಬೇಕು. ಮಕ್ಕಳನ್ನು ತಮ್ಮ ವಿಶ್ವಾಸಕ್ಕೆ ತೆಗೆದುಕೊಂಡು ತಮ್ಮ ಚೇಂಬರಿನಲ್ಲಿ ತಾವೇ ಪ್ರಶ್ನಿಸಬೇಕು. ನಿಜವನ್ನು ಹೊರಗೆಳೆಯಬೇಕು. ಆರಂಭದ ಹಂತದಲ್ಲಿ ಪೊಲೀಸ್‌ರಿಂದ ಇಂಥ ಮಕ್ಕಳನ್ನು ದೂರವಿಡಬೇಕು. ಆಗ ಮಗು ಧೈರ್ಯವಾಗಿ ಸತ್ಯಸಂಗತಿಯನ್ನು ತಿಳಿಸುತ್ತದೆ.''

''ಎಲ್ಲಾ ನಿಜ ಮೇಜರ್. ಆದರಿದು ಕನಸಿನ ಮಾತಲ್ಲವೆ? ಇದನ್ನೆಲ್ಲ ನಿಮ್ಮಷ್ಟು ಸುದೀರ್ಘವಾಗಿ ಯೋಚಿಸುವವರು ಯಾರು?''

''ಯೋಚಿಸಬೇಕಾದವರು''

''ಅವರು ಯೋಚಿಸಿದ್ದರೆ ಈ ಪ್ರಮೇಯವೇ ಬರುತ್ತಿರಲಿಲ್ಲ''

''ಅವರನ್ನು ಯೋಚಿಸುವಂತೆ ಮಾಡದೆ ಬೇರೆ ದಾರಿಯೇ ಇಲ್ಲ''

''ಈ ಕೆಲಸ ನಮ್ಮಂಥ ಸಾಮಾನ್ಯರಿಂದ ಆಗದು ಮೇಜರ್. ನೀವೇ ಯೋಗ್ಯರು''

''ಒಂದು ಕೆಲಸ ಮಾಡಿ ಕೆಂಗಪ್ಪನವರೆ- ನಿಮಗೆ ತಿಳಿದಂತೆ ನಿಮ್ಮಲ್ಲಿ ಅಂಥ ಹುಡುಗರಿದ್ದರೆ ದಯವಿಟ್ಟು ನನಗೆ ಭೆಟ್ಟಿ ಮಾಡಿಸಿ''

ಕೆಂಗಪ್ಪ ಒಪ್ಪಿಕೊಂಡು ಮೇಲೆದ್ದ.

ರಾತ್ರಿ ಬಹಳವಾಗಿತ್ತು. ಮೇಜರಿಗೆ ತೂಕಡಿಕೆ.

ಸುಷಮಾ ಅದನ್ನು ಗಮನಿಸಿ ''ಇನ್ನು ಏಳೋಣವೆ?'' ಎಂದು ಕೇಳಿದಳು. ಮೇಜರನಿಗೂ ಅದೇ ಬೇಕಾಗಿತ್ತು. ''ಹೂಂ'' ಎಂದು ಮುಲುಗಿದ. ''ನಿಮಗಾಗಿ

ಮಹಡಿ ಮೇಲೆ ಎರಡು ರೂಮು ಸಿದ್ಧಪಡಿಸಿದ್ದೇನೆ'' ಕೆಂಗಪ್ಪ ತಟಕ್‌ನೆ ನುಡಿದ. ಇನ್ನೇನು ಮೇಲೇಳಬೇಕು ಎಂದುಕೊಳ್ಳುತ್ತಿದ್ದಂತೆ ಚುರುಕಾದ ಅಶೋಕ ಎಲ್ಲರಿಗೂ ಸುಮ್ಮನಿರಲು ''ಹುಶ್'' ಎಂದ... ಅಪಾಯ! ಅಪಾಯ! ಹೇಮಂತನ ಆರನೇ ಇಂದ್ರಿಯ ಎಚ್ಚರಿಸಿತು. ''ನನಗೆ ಸಿಗರೇಟಿನ ಹೊಗೆ ವಾಸನೆ ಬರತಾ ಇದೆ... ಇಲ್ಲಿ ಎಲ್ಲೋ ಯಾರೋ ಇದಾರೆ'' ಪಿಸುಮಾತಿನಲ್ಲಿ ನುಡಿದ ಅಶೋಕ್ ಅತ್ತಿತ್ತ ಕಣ್ಣು ಹೊರಳಿಸಿ ಮೆಲುವಾಗಿ ಹರಡಿದ ಆ ತಿಂಗಳ ಬೆಳಕಿನಲ್ಲಿ ಯಾರನ್ನೋ ಹುಡುಕಲು ಪ್ರಯತ್ನಿಸಿದ. ಜೇಬಿನಲ್ಲಿದ್ದ ರಿವಾಲ್ವರ್ ಕೈಲಿ ಹಿಡಿದು ಬೆಕ್ಕಿನ ಹೆಜ್ಜೆಯಲ್ಲಿ ರಿಮಾಂಡ್ ಹೋಂನ ಹಿಂಭಾಗದತ್ತ ನಡೆದ.

ಅಶೋಕ ಇನ್ನೂ ಹತ್ತು ಹೆಜ್ಜೆ ಹೋಗಿರಲಿಲ್ಲ.

ತಕ್ಷಣ ವಿದ್ಯುತ್ ಹೊರಟು ಹೋಯಿತು.

ಗಪ್ ಎಂದು ಕತ್ತಲೆ ಆವರಿಸುತ್ತಲೂ ಮಕ್ಕಳು 'ಹೋಹೋ' ಎಂದು ಕಿರುಚತೊಡಗಿದರು. ಎಲ್ಲೆಡೆ ಗದ್ದಲ ಆರಂಭವಾಯಿತು. ಮಿಂಚಿನಂತೆ ಮೇಲೆದ್ದ ಹೇಮಂತ ಸುಷಮಾಗೆ ನುಡಿದ-''ಲಕ್ಷಣಗಳು ಸರಿಯಾಗಿ ಕಾಣ್ತಾ ಇಲ್ಲ. ಏನೋ ನಡೆಯುತ್ತೆ ಎಂದು ಅನಿಸುತ್ತಿದೆ. ಕ್ವಿಕ್, ಸುತ್ತು ಹಾಕಿ ಗೇಟಿಗೆ ಬಾ''

ಕೂಡ್ಲೇ ತಾನೂ ಸಹ ರಿವಾಲ್ವರ್ ಹಿಡಿದು ಅಶೋಕ ಹೋದ ವಿರುದ್ಧ ದಿಕ್ಕಿಗೆ ನಡೆದಾಗ ಕೆಂಗಪ್ಪ ಕಂಗೆಟ್ಟು ಏನೂ ಅರಿಯದೇ ಒಂದು ಕ್ಷಣ ಅಲ್ಲೇ ನಿಂತಿದ್ದು ನಂತರ ಮಕ್ಕಳಿದ್ದ ಕಡೆ ಧಾವಿಸಿದರು. ಮಕ್ಕಳು ಒಂದೇ ಸವನೆ ಕಿರುಚಿಕೊಳ್ಳುತ್ತಲೇ ಇದ್ದರು.

ಕೆಂಗಪ್ಪನವರು ತಿಂಗಳ ಬೆಳಕಿನಲ್ಲಿ ಸರಸರನೆ ರಿಮಾಂಡ್‌ಹೋಂನತ್ತ ನಡೆದರು. ಕರೆಂಟ್ ಹೋದದ್ದಕ್ಕಿಂತ ಹೆಚ್ಚಾಗಿ ಚಿತ್ರ ನೋಡುವದು ತಪ್ಪಿತಲ್ಲ ಎಂಬ ನೋವಿನಿಂದ ಮಕ್ಕಳು ಕಿರುಚಾಡತೊಡಗಿದ್ದರು. ಕೆಂಗಪ್ಪನವರು ಅವರನ್ನು ಸಮಾಧಾನಪಡಿಸಲು ಧಾವಿಸುತ್ತಿದ್ದಂತೆ ಬಾಗಿಲಿನಿಂದ ಹೊರಗೆ ಯಾವುದೋ ಒಂದು ವ್ಯಕ್ತಿ ಕಂಕುಳಲ್ಲಿ ಮಗುವೊಂದನ್ನು ಎತ್ತಿಕೊಂಡು ಬರುತ್ತಿರುವದು ಕಾಣಿಸಿತು. ಮಗು ಒಂದೇ ಸವನೆ ಕಾಲು ಬಡಿಯುತ್ತಿದ್ದುದನ್ನು ಸ್ಪಷ್ಟವಾಗಿ ಕಂಡ ಅವರು ''ಏ ಯಾರದು? ಆ ಮಗುವನ್ನೇಕೆ ಒಯ್ಯುತ್ತಿದ್ದೀರಿ?'' ಎಂದು ಕೂಗಿಕೊಳ್ಳುತ್ತ ಅವನ ಹಿಂದೆ ಓಡಿದರು. ಅವರ ಅಭ್ಯಸ್ತ ಕಾಲುಗಳು ಎಲ್ಲ ಅಡೆತಡೆ ದಾಟಿ ಅವನನ್ನು ಹಿಂದಿನಿಂದ ಹಿಡಿಯುವಲ್ಲಿ ಕೈಗೆ ಫಲ

ನೀಡಿದವು. ಸರಕ್‌ನೆ ಹೊರಳಿದ ಆ ವ್ಯಕ್ತಿ ಪಿಸ್ತೂಲಿನ ಹಿಡಿಯಿಂದ ಕೆಂಗಪ್ಪನವರ ನೆತ್ತಿ ಮೇಲೆ ಜೋರಾಗಿ ಬಾರಿಸಿದ. "ಹಾ ಸತ್ತೆ" ಎಂದು ಕೂಗಿಕೊಂಡು ಅಲ್ಲೇ ಉರುಳಿದರು.

ಗೇಟಿಗೆ ಬಂದು ನಿಂತ ಅಶೋಕ ಅತ್ತಿತ್ತ ಕಳ್ಳದೃಷ್ಟಿ ಬೀರಿದ. ಯಾರೂ ಕಣ್ಣಿಗೆ ಬೀಳಲಿಲ್ಲ. ಆತ ಯಾವ ಕಡೆ ಹೋದ ಎಂದು ಯೋಚಿಸುತ್ತ ನಿಂತಿರುವಾಗಲೇ ಕೆಂಗಪ್ಪನವರು 'ಅಯ್ಯೋ ಸತ್ತೆ' ಎಂದು ಕೂಗಿಕ್ಕೊಂಡದ್ದು ಕೇಳಿ ಒಳಗಡೆ ಧಾವಿಸಿದ. ಎದುರಿನಿಂದ ತನ್ನತ್ತ ಓಡಿ ಬರುತ್ತಿರುವ ವ್ಯಕ್ತಿ ಕಂಡು ಸರಕ್‌ನೆ ಮರೆಯಾದ. ಆ ವ್ಯಕ್ತಿಯ ಕೈಯಲ್ಲಿರುವ ರಿವಾಲ್ವರ್ ಅವನನ್ನು ಯೋಚನೆಯಲ್ಲಿ ಕೆಡವಿತ್ತು. ಅವನ ಮೇಲೆ ಹಿಂದಿನಿಂದ ಆಕ್ರಮಣ ಮಾಡುವುದೇ ಸರಿ ಎಂದು ನಿರ್ಧರಿಸಿದ. ಧಡಧಡ ಓಡಿಬಂದ ವ್ಯಕ್ತಿಯ ಬೆನ್ನು ಕಾಣುವದೇ ತಡ ಚಿರತೆಯಂತೆ ಅವನ ಮೇಲೆ ಹಾರಿದ. ಯಾವ ಅಪಾಯವೂ ಇಲ್ಲ ಎಂಬ ನಂಬಿಕೆಯಿಂದ ಸಾಗಿದ್ದ ವ್ಯಕ್ತಿಗೆ ಆಘಾತ. ನೆಲಕಚ್ಚಿ ಬಿದ್ದಾಗ ಕಂಕುಳಲ್ಲಿದ್ದ ಮಗು ಹಾಗೂ ಕೈಯಲ್ಲಿದ್ದ ರಿವಾಲ್ವರ್ ಎಡಬಲಕ್ಕೆ ಬಿದ್ದು ಹೋಗುತ್ತಿದ್ದಂತೆ ಅಶೋಕ ಅವನ ಮೇಲೆ ನೆಗೆದ. ಅಪಾಯದಲ್ಲಿ ಸಿಲುಕಿಕೊಂಡ ಆ ವ್ಯಕ್ತಿಗೆ ಅಲ್ಲಿಂದ ಪಾರಾಗದೇ ಬೇರೆ ವಿಧಿ ಇರಲಿಲ್ಲ. ಜೀವ ಉಳಿದರೆ ಸಾಕಾಗಿತ್ತು. ವಿಳಂಬ ಸಾವಿಗೌತಣ ಎಂದು ಮನಗಂಡ ಆತ ಮಿಂಚಿನಂತೆ ಅಶೋಕನನ್ನು ಎದುರಿಸಿದ. ಮೇಲೆ ಜಿಗಿದ ಅವನ ಹೊಟ್ಟೆಗೆ ಎರಡೂ ಪಾದ ಜೋಡಿಸಿ ಒದ್ದು ಎದ್ದು ನಿಂತ. ಅಶೋಕ ಹಿಂದಕ್ಕೆ ಉರುಳುತ್ತಿರುವಾಗಲೇ ಗೇಟನೆಡೆ ಓಡಿ ಮರೆಯಾದ. ಅಶೋಕ ಏಳುವ ಮೊದಲೇ ಹೇಮಂತ ಹಾಗೂ ಸುಷಮಾ ಅವನತ್ತ ಓಡಿ ಬಂದಿದ್ದರು. ಅಶೋಕ ನಡೆದ ವಿಷಯ ತಿಳಿಸುತ್ತಿದ್ದಂತೆ ಮೋಟಾರ್‌ಬೈಕೊಂದು ಸ್ಟಾರ್ಟ್ ಆದ ಸದ್ದು ಕೇಳಿಸಿತು.

ಅಪರಾಧಿ ಪಾರಾಗಿದ್ದ.

ಮೂವರು ಒಳಗೆ ಬರುತ್ತಿದ್ದಂತೆ ಬಾಗಿಲ ಬಳಿ ಮೂರ್ಛಿತರಾಗಿ ಬಿದ್ದಿದ್ದ ಕೆಂಗಪ್ಪನವರನ್ನು ಕಂಡು ಎಬ್ಬಿಸಿ ಒಳಗೊಯ್ದರು. ಅಶೋಕ ತಾನು ಬರುವಾಗ ಕೆಳಗೆ ಬಿದ್ದಿದ್ದ ಐದ್ಹಾರು ವರ್ಷದ ಮಗುವನ್ನು ತನ್ನ ಜೊತೆ ತರಲು ಮರೆತಿರಲಿಲ್ಲ. ಅಷ್ಟರಲ್ಲಿ ಅಡಿಗೆ ಆಳು ಕಳಕಪ್ಪ ಗ್ಲಾಸು ಹೊತ್ತಿಸಿ ತಂದ. ಮಕ್ಕಳ ಗಲಾಟೆ, ತಟಕಟ ನಡೆದಿತ್ತು. ತಮ್ಮ ವಾರ್ಡನ್ ಮೃತಪಟ್ಟಿದ್ದು ಕಂಡು ಅವರೆಲ್ಲ

ಒಮ್ಮಿಂದೊಮ್ಮೆಲೆ ಮೌನ ತಾಳಿದರು.

"ಅಶೋಕ, ಮೇನ್‌ಸ್ವಿಚ್ ಆಫ್ ಮಾಡಿರಬೇಕು ಅನಿಸುತ್ತೆ. ಹೋಗಿ ನೋಡು?" ಹೇಮಂತ ಆಣತಿ ನೀಡಿದ ಅಶೋಕನಿಗೆ. ಒಂದೇ ನಿಮಿಷದಲ್ಲಿ ದೀಪಗಳು ಹೊತ್ತಿಕೊಂಡವು. ಅವನ ಊಹೆ ನಿಜವಾಗಿತ್ತು. ಯಾರೋ ಮೇನ್‌ಸ್ವಿಚ್ ಆಫ್ ಮಾಡಿದ್ದರು.

ಹೇಮಂತ ಕೆಂಗಪ್ಪನವರ ಗಾಯ ಗಮನಿಸಿದ. ಅಪಾಯವೇನೂ ಇರಲಿಲ್ಲ. ಮೇಲ್ಭಾಗದ ಗಾಯದಿಂದಾಗಿ ರಕ್ತ ಸೋರಿತ್ತು. ಹಾಸ್ಟೆಲ್‌ನಲ್ಲಿದ್ದ ಫಸ್ಟ್ ಏಡ್ ಬಾಕ್ಸಿನಿಂದ ಸಾಮಾನು ಹೊರತೆಗೆದ. ಎರಡೇ ನಿಮಿಷಗಳಲ್ಲಿ ಸುಷಮಾ ಪಟ್ಟಿ ಹಾಕಿದಳು. ಕೆಂಗಪ್ಪನವರು ಹತ್ತು ನಿಮಿಷಗಳಲ್ಲಿ ಚೇತರಿಸಿಕೊಂಡರು. ಆ ಗಂಡು ಮಗು ಮಾತ್ರ ಥರಥರ ಕಂಪಿಸುತ್ತಲೇ ಇತ್ತು. ಹೇಮಂತ ತನ್ನ ಬ್ಯಾಗಿನಿಂದ ಒಂದು ಮಾತ್ರೆ ತೆಗೆದು ಮಗುವಿಗೆ ಬಲವಂತದಿಂದ ತಿನ್ನಿಸಿ ಹಾಲು ಕುಡಿಸಿದ. ಹತ್ತು ಹದಿನೈದು ನಿಮಿಷಗಳಲ್ಲಿ ಮಗು ನಿದ್ದೆ ಹೋಯಿತು. ಎಲ್ಲ ಮಕ್ಕಳೂ ಭೀತಿಯಿಂದ ಮುದ್ದೆಯಾಗಿ ಮೂಲೆ ಸೇರಿದ್ದರು. ಹೇಮಂತನ ಮಾತಿನಂತೆ ಎಲ್ಲರಿಗೂ ಊಟ ನೀಡಲಾಯಿತು. ತುಟಿ ಎರಡು ಮಾಡದೇ ಮೌನವಾಗಿ ಊಟ ಮಾಡಿ ಎಲ್ಲರೂ ತಮ್ಮ ಹಾಸಿಗೆ ಸೇರಿದರು.

ಎಲ್ಲೆಡೆ ಗಂಭೀರ ಶಾಂತಿ ಮನೆ ಮಾಡಿತು. ಹೇಮಂತ ಕೇಳಿದ ಕೆಂಗಪ್ಪನವರನ್ನು- "ಮಗುವಿನ ಅಪಹರಣ ನನ್ನನ್ನು ಯೋಚನೆಯ ಕಡಲಲ್ಲಿ ಮುಳುಗಿಸಿದೆ. ಆತ ಯಾರು ಎಂದೇನಾದರೂ ನೀವು ಊಹಿಸಬಲ್ಲಿರಾ?"

"ನಾನಾತನನ್ನು ಹತ್ತಿರದಿಂದ ನೋಡಿರುವೆ. ನನಗಾತನ ಪರಿಚಯವಿಲ್ಲ. ಹೀಗಿದ್ದೂ ಆ ಹುಡುಗನನ್ನು ಏಕೆ ಅಪಹರಿಸಲು ಯತ್ನಿಸಿದ ಎಂಬುದು ತಿಳಿಯದಂತಾಗಿದೆ"

ಹೇಮಂತ ಮುಗುಳು ನಗೆ ನಗುತ್ತಾ ಉತ್ತರಿಸಿದ.

"ಅದು ತಿಳಿದಿದ್ದರೆ ನೀವು ವಾರ್ಡನ್ ಆಗಿರುತ್ತಿರಲಿಲ್ಲ. ನೀವು ಒಬ್ಬ ಪೊಲೀಸ್ ಅಧಿಕಾರಿಯೋ ಇಲ್ಲ ನನ್ನಂತೆ ಪತ್ತೇದಾರನೋ ಆಗಿರುತ್ತಿದ್ದಿರಿ"

ಕೆಂಗಪ್ಪನವರ ಮುಖ ಸಪ್ಪಗಾಯಿತು. ಅಷ್ಟರಲ್ಲಿ ಅಶೋಕ ಮತ್ತು ಸುಷಮಾ ಅವರ ಬಳಿ ಬಂದರು. ಅಶೋಕ ಒಂದು ರಿವಾಲ್ವರ್ ಮತ್ತು ಒಂದೆರಡು ಸಿಗರೇಟ್ ತುಂಡು ಅವರ ಮುಂದಿಟ್ಟ. ಹೇಮಂತ ಮೊದಲು ರಿವಾಲ್ವರ್ ಕೈಗೆ ತೆಗೆದುಕೊಂಡು ಸೂಕ್ಷ್ಮವಾಗಿ ಪರೀಕ್ಷಿಸಿದ. ಅವನ ಹುಬ್ಬುಗಳು ಗಂಟಿಕ್ಕಿದವು.

ಆದರ ಹಿಡಿಗೆ ಸ್ವಲ್ಪ ಎಣ್ಣೆ ಅಂಟಿಕೊಂಡಿತ್ತು. ಅದನ್ನು ಪಕ್ಕದಲ್ಲಿರಿಸಿ ಸಿಗರೇಟು ತುಂಡು ಪರೀಕ್ಷಿಸಿದ. ಎರಡೂ ತುಂಡುಗಳು ಪೂರ್ತಾ ಉರಿದು ಹೋದವುಗಳು. ಅವುಗಳ ಮೇಲೆ ಯಾವ ಅಕ್ಷರಗಳು ಉಳಿದಿರಲಿಲ್ಲ. ಹೀಗಾಗಿ ಯಾವ ಬ್ರ್ಯಾಂಡ್ ಎಂದು ಹೇಳುವುದು ಸಾಧ್ಯವಿರಲಿಲ್ಲ. ಅವುಗಳನ್ನು ಪುನಃ ಯಥಾಸ್ಥಾನದಲ್ಲಿರಿಸಿದ. "ವಿಷಯ ಗಂಭೀರವಾಗಿದೆ. ಸಾಮಾನ್ಯವಾದುದೆಂದು ಊಹಿಸಿದರೆ ಮೂರ್ಖತನವಾದೀತು. ಪೂರ್ತಿ ಉರಿದುಹೋದ ಸಿಗರೇಟು ಗಮನಿಸಿದರೆ ಆತ ಬಹಳ ಸಮಯದಿಂದ ಅವಿತುಕೊಂಡು ನಮ್ಮ ಮಾತು ಕೇಳುತ್ತಿದ್ದ ಎಂಬುದು ಅರ್ಥವಾಗುತ್ತದೆ. ಅಂದರೆ ಸುಮಾರು ಅರ್ಧ ಗಂಟೆ ಕಾಯುತ್ತಿದ್ದ ಆತ ನಾವಿನ್ನೂ ಮಾತು ಆಡುತ್ತಿರುವಾಗಲೇ ಎದ್ದು ಹೋಗಲು ಕಾರಣವೇನಿರಬಹುದು?"

"ನಮ್ಮ ಮಾತಿನಿಂದ ಅವನಿಗೆ ಅಪಾಯದ ವಾಸನೆ ಬಂದಿರಬೇಕು" ಎಂದ ಅಶೋಕ.

"ಅಂಥ ಮಾತು ನಾವು ಏನು ಆಡುತ್ತಿದ್ದೆವು. ಹಾಂ ಈಗ ಹೊಳೆಯಿತು" ಒಮ್ಮಿಂದೊಮ್ಮೆಲೆ ಹೇಮಂತ ಮಾತು ನಿಲ್ಲಿಸಿ ಕ್ಷಣಕಾಲ ಯೋಚಿಸಿ ಕೇಳಿದ ಕೆಂಗಪ್ಪನವರನ್ನು.

"ಆ ಮಗುವಿನ ಹೆಸರೇನು?"

"ಆತನಿಗೆ ಸರಿಯಾಗಿ ಮಾತನಾಡಲು ಬರದು ಗುಗ್ಗುತ್ತಾನೆ. ಅದಕ್ಕೇ ಎಲ್ಲರೂ ಅವನಿಗೆ ಗುಗ್ಗಪ್ಪ ಎಂದೇ ಕರೆಯುತ್ತಾರೆ"

"ಅವನ ಮೇಲೆ ಯಾವ ಆಪಾದನೆ ಇದೆ"

"ನಾಲ್ಕು ತಿಂಗಳ ಹಿಂದೆ ಆತ ಕಂಪಾಸ್ ಬಾಕ್ಸ್‌ನಲ್ಲಿ ಎಂಟು ಚಿನ್ನದ ಬಿಸ್ಕತ್ ಸಾಗಿಸುತ್ತಿದ್ದಾಗ ಪೊಲೀಸರ ಕೈಗೆ ಸಿಕ್ಕಿ ಬಿದ್ದ. ಎಷ್ಟು ಪ್ರಯತ್ನಿಸಿದರೂ ಅವನಿಂದ ಯಾವ ವಿಷಯವೂ ತಿಳಿಯಲಿಲ್ಲ. ಅವನನ್ನು ಇಲ್ಲಿಗೆ ಕರೆಸಿದರು"

"ಹೂಂ....ನಿಮಗೆ ನಾನು ಇಂಥ ಯಾವುದಾದರೂ ಹುಡುಗರಿದ್ದರೆ ನಾಳೆ ನನಗೆ ಭೇಟಿ ಮಾಡಿಸಿರಿ ಎಂದಿದ್ದೆ. ಅದನ್ನಾತ ಕೇಳಿಸಿಕೊಂಡು ಇವನನ್ನು ಅಪಹರಿಸಲು ಯತ್ನಿಸಿದ. ಅಂದ ಮೇಲೆ ಈ ಮಗುವಿನ ಹಿಂದೆ ಒಂದು ದೊಡ್ಡ ಕಥೆ ಅಡಗಿದೆ ಎಂದಂತಾಯಿತು. ಇದೇ ಅಪಹರಣಕ್ಕೆ ಕಾರಣ"

ಯಾರೂ ಮಾತನಾಡುವ ಧೈರ್ಯ ತೋರಿಸಲಿಲ್ಲ.

ಹೇಮಂತ ಒಮ್ಮಿಂದೊಮ್ಮೆಲೇ ತನ್ನ ನಿರ್ಣಯ ಪ್ರಕಟಿಸಿದ.

''ನಾಳೆ ಬೆಳಿಗ್ಗೆ ನಾವು ಹೊರಡುವ ಪ್ರೋಗ್ರಾಂ ಕ್ಯಾನ್ಸಲ್. ನಾನಿಲ್ಲೇ ಇದ್ದು ಇದರ ರಹಸ್ಯ ಭೇದಿಸಿದ ನಂತರವೇ ಇಲ್ಲಿಂದ ಹೊರಡುವುದು ತಿಳಿಯಿತೇ?''

ಸುಷಮಾ ಮೋಹಕವಾಗಿ ನಕ್ಕು ಹೇಳಿದಳು. ''ಒಟ್ಟಾರೆ ನಾವು ಎಲ್ಲಿಗೇ ಹೋದರೂ ಅಲ್ಲೊಂದು ಕೇಸು ನಮಗಾಗಿ ದಾರಿ ಕಾಯುತ್ತಿರುತ್ತದೆ..''

ಹೇಮಂತ ಪ್ರೀತಿ ತುಂಬಿದ ದೃಷ್ಟಿ ಅವಳೆಡೆ ಬೀರಿದ. ಆ ದೃಷ್ಟಿಯಿಂದ ಆಕೆ ಪೂರ್ತಾ ನಾಚಿ ಮುದ್ದೆಯಾಗಿ ಮುಖ ಕೆಳಗೆ ಹಾಕಿದಳು.

ನಸುಕು ಐದೂವರೆ ಗಂಟೆ.

ಕೆಂಗಪ್ಪನವರೊಂದಿಗೆ ಹೇಮಂತ ವಾಯುಸೇವನೆಗಾಗಿ ಹೊರಬಿದ್ದ. ಬೇಕೆಂತಲೇ ಅಶೋಕ ಹಾಗೂ ಸುಷಮಾರನ್ನು ಕರೆತಂದಿರಲಿಲ್ಲ. ದಾರಿಯುದ್ದಕ್ಕೂ ಇಬ್ಬರೂ ಮಾತನಾಡುತ್ತ ಸಾಗಿದರು. ತನಗೆ ಬೇಕಾದ ವಿಷಯವನ್ನೆಲ್ಲ ಮೇಜರ್ ಕೆದಕಿ ಕೆದಕಿ ಕೇಳಿ ತಿಳಿದುಕೊಂಡ. ಕೆಂಗಪ್ಪನವರ ಮಾತಿನಿಂದ ಗುಗ್ಗಪ್ಪನಂತೆ ಇನ್ನೂ ಮೂರು ಹುಡುಗರು ಈ ಮೊದಲು ರಿಮಾಂಡ್‌ಹೋಂಗೆ ಹಿಂದೆ ಬಂದಿದ್ದರೆಂದು ಹದಿನೆಂಟು ವರ್ಷವಾಗುತ್ತಲೂ ಅವರನ್ನು ಬಿಡುಗಡೆ ಮಾಡಲಾಯಿತೆಂದು ತಿಳಿಯಿತು. ಹಿಂದಿನ ರಿಕಾರ್ಡ್ ನೋಡಿ ಅವರೆಲ್ಲರ ಭಾವಚಿತ್ರ ಮತ್ತು ವಿಳಾಸ ಕೊಡಲು ಹೇಳಿದ ಮೇಜರ್. ಅಲ್ಲದೇ ನಗರದ ಉತ್ತಮ ಲಾಡ್ಜ್‌ನಲ್ಲಿ ಎರಡು ರೂಮೂ ಬುಕ್ ಮಾಡಲು ವಿನಂತಿಸಿಕೊಂಡ. ಕೆಂಗಪ್ಪ ಆಗಲಿ ಎಂದು ತಲೆಯಾಡಿಸಿದರು.

ಮಾತನಾಡುತ್ತ ಅವರು ತುಂಬಾ ದೂರ ಬಂದಿದ್ದರು.

ಸಮಯ ಏಳಕ್ಕೆ ಸಮೀಪಿಸಿತ್ತು. ಮರಳಿ ರಿಮಾಂಡ್‌ಹೋಂನತ್ತ ಹೆಜ್ಜೆ ಹಾಕತೊಡಗಿದರು. ''ಹಲೋ ಕೆಂಗಪ್ಪನವರೆ ಹೇಗಿದ್ದೀರ?''

ಒಮ್ಮೆಲೆ ಗಡುಸಾದ ಕಂಠ ಕೇಳಿಸಿತು. ಹೇಮಂತ ಸರಕ್ಕನೆ ಧ್ವನಿ ಬಂದೆಡೆ ಹೊರಳಿದ. ನಾಲ್ಕಾರು ಮರಗಳ ಕೆಳಗೆ ಹಾಯಾಗಿ ಒರಗಿದ ವ್ಯಕ್ತಿಯೊಂದು ಎದ್ದು ನಿಂತಿತು.

ಹೇಮಂತ ಕಣ್ಣಲ್ಲೇ ಅವರನ್ನು ಅಳೆದ.

ಐದೂವರೆ ಫೂಟು ಎತ್ತರ, ಸುಮಾರು ಐವತ್ತು ಐವತ್ತೆರಡು ವರ್ಷ.

ಕಪ್ಪು ಬಣ್ಣವಾದರೂ ಅದರ ಮೇಲೆ ಕೆಂಪು ಛಾಯೆ. ದಷ್ಟಪುಷ್ಟ ದೇಹ. ಮೈಮೇಲೆ ಟ್ರ್ಯಾಕ್ ಸೂಟ್. ತಲೆ ಮೇಲೆ ಕ್ಯಾಪ್. ಕೈಗಳಿಗೆ ಕೆಂಪು ಹ್ಯಾಂಡ್‌ಗ್ಲೌಜ್.

"ಓಹ್ ನೀವಾ?" ಪರಿಚಯದ ನಗೆ ಸೂಸಿದ ಕೆಂಗಪ್ಪ ಮೇಜರ್ ಕಡೆ ನೋಡಿ ನುಡಿದರು. "ಒಂದೆರಡು ನಿಮಿಷ ಕುಳಿತುಕೊಳ್ಳೋಣ ಬನ್ನಿ. ನಾನಿವರ ಪರಿಚಯ ಮಾಡಿಕೊಡ್ತೇನೆ"

ಹೇಮಂತನಿಗೂ ಸ್ವಲ್ಪ ಹೊತ್ತು ಕೂಡಬೇಕು ಎನಿಸಿತ್ತು. ಒಪ್ಪಿಕೊಂಡ. ಕೆಂಗಪ್ಪನವರಿಂದ ಹೊಸಬರ ಪರಿಚಯವಾಯಿತು.

"ಇವರು ಕರ್ನಲ್ ಅಂಥೋಣಿ. ಕೇರಳದವರು. ನಮ್ಮ ರಿಮಾಂಡ್‌ಹೋಂ ಚೇರ್‌ಮನ್.."

"ಕರ್ನಲ್ ಅಂದರೆ.... ಸೇನೆಯಲ್ಲಿದ್ದಿರಾ?" ಮಧ್ಯೆ ಕೇಳಿದ ಹೇಮಂತ. ಅವರು ಉತ್ತರಿಸಿದರು. "ಹೌದು. ಹದಿನೈದು ವರ್ಷ ಕೆಲಸ ಮಾಡಿ ನಿವೃತ್ತಿ ಪಡೆದೆ. ಅನಂತರ ಇಲ್ಲಿ ಸಿವಿಲ್ ಪೊಲೀಸ್‌ಗೆ ಸೇರಿಕೊಂಡೆ ಇನ್ಸ್‌ಪೆಕ್ಟರ್ ಅಂತ. ಎಂಟು ಹತ್ತು ವರ್ಷಗಳಲ್ಲಿ ಜುಗುಪ್ಸೆ ಬಂದು ರಾಜೀನಾಮೆ ಕೊಟ್ಟೆ. ಈಗ ಹಾಯಾಗಿರುವೆ"

ಮೇಜರ್‌ಗೆ ಅಂಥೋಣಿಯ ಮಾತು ರುಚಿಸಿತೆಂದು ಕಾಣುತ್ತದೆ. ಅವನ ವ್ಯಕ್ತಿತ್ವವೂ ಆಕರ್ಷಕವಾಗಿತ್ತು. ಹೀಗಾಗಿ ಅವನನ್ನೇ ದಿಟ್ಟಿಸಿ ನೋಡುತ್ತಿದ್ದ. ಕೈಗೆ ಹಾಕಿಕೊಂಡ ಹ್ಯಾಂಡ್‌ಗ್ಲೌಜ್ ತೆಗೆದು ಎರಡು ಮೂರು ಬಾರಿ ಚೆನ್ನಾಗಿ ಕೊಡವಿ ಪುನಃ ಕೈಗೆ ತೊಟ್ಟುಕೊಂಡ ಅಂಥೋಣಿ. ತನ್ನನ್ನೇ ನೋಡುತ್ತಿದ್ದ ಮೇಜರ್‌ಗೆ ಕೇಳಿದ.

"ಅಂದ ಹಾಗೆ ತಮ್ಮ ಪರಿಚಯವಾಗಲಿಲ್ಲ"

"ನನಗೆ ಹೇಮಂತ ಅನ್ನುತ್ತಾರೆ. ಹೇಮಂತ.. ಮೇಜರ್ ಹೇಮಂತ"

"ಅಂ? ಏನೆಂದರಿ? ಮೇಜರ ಹೇಮಂತ? ಓಹ್ ಗಾಡ್ ನಾನೆಂಥ ಭಾಗ್ಯಶಾಲಿ" ಬಲವಂತವಾಗಿ ಮೇಜರ್‌ನ ಕೈ ತನ್ನ ಕೈಯೊಳಗೆ ತೆಗೆದುಕೊಂಡು ಜೋರು ಜೋರಾಗಿ ಕುಲುಕಿ ನಂತರ ತಾಳಲಾರದೇ ಉದ್ಗರಿಸುತ್ತ ಮತ್ತೆ ಕೇಳಿದ. "ನೀವೇ ಅಲ್ಲವೇ ನಮ್ಮ ದೇಶದ ಖ್ಯಾತ ಗೂಢಚಾರಿ ಹಾಗೂ ಪತ್ತೇದಾರ"

ಹೇಮಂತ ಮೆಲುವಾಗಿ ನಕ್ಕ. ಉತ್ತರ ಅವನ ನಗುವೇ ಆಯಿತು.

ಮುಂದೆ ಮೂವರೂ ಮಾತನಾಡುತ್ತ ನಡೆದರು. ನಿಧಾನವಾಗಿ ಕೆಂಗಪ್ಪ ರಾತ್ರಿ ನಡೆದ ಘಟನೆಯನ್ನು ಅಂಥೋನಿಯವರಿಗೆ ವಿವರಿಸಿದಾಗ ಅವರು ಸ್ತಂಭಿತರಾದರು. ಒಂದು ಕ್ಷಣ ಭೂತ ಬಡಿದವರಂತೆ ನಿಂತು ಅವರು ಮರುಕಣ ಹೇಮಂತನ ಕಡೆ ಹೊರಳಿ ಬೇಡಿಕೊಂಡರು.

''ಮೇಜರ್ ನೀವಿಲ್ಲಿಗೆ ಬಂದದ್ದು ಒಂದು ದೈವಸಂಕೇತ. ನಾನು ನಿಮಗೆ ಕೈ ಮುಗಿದು ಕೇಳಿಕೊಳ್ಳುತ್ತೇನೆ. ದಯವಿಟ್ಟು ನೀವೇ ನಿನ್ನೆ ರಾತ್ರಿ ನಡೆದ ಆ ಘಟನೆ ಬಗ್ಗೆ ಶೋಧ ನಡೆಸಿ ರೌಡಿಯನ್ನು ಬಂಧಿಸಿ. ನನಗೇಕೋ ಹೆದರಿಕೆ ಆಗುತ್ತಿದೆ. ದೇವರ ದಯೆಯಿಂದ ನಾನು ಸಾಕಷ್ಟು ಹಣ ಸಂಪಾದಿಸಿದ್ದೇನೆ. ಈ ಕೆಲಸಕ್ಕೆ ತಗಲುವ ವೆಚ್ಚವೆಲ್ಲ ನನಗೇ ಸೇರಿದ್ದು. ಪ್ಲೀಜ್''

''ನೀವು ಚಿಂತಿಸಬೇಡಿ ಅಂಥೋನಿ. ಇದರ ಬಗ್ಗೆ ನಾನು ನಿನ್ನೆಯೇ ನಿರ್ಧಾರ ಕೈಕೊಂಡಿದ್ದೇನೆ. ಈ ಚಿಕ್ಕ ಮಕ್ಕಳನ್ನು ಅಪರಾಧ ಪ್ರಪಂಚಕ್ಕೆಳೆದು, ಸಮಾಜಕ್ಕೆ ಅಭಿಶಾಪವಾಗುವಂತೆ ಮಾಡುವ ಕೈಗಳನ್ನು ಕತ್ತರಿಸದೆ ನಾನು ಈ ಊರು ಬಿಡುವುದಿಲ್ಲವೆಂದು ಪ್ರತಿಜ್ಞೆ ಮಾಡಿರುವೆ. ಅದಕ್ಕಾಗಿ ಒಳ್ಳೆಯ ಹೋಟೆಲ್‌ನಲ್ಲಿ ಎರಡು ರೂಮು ಬುಕ್ ಮಾಡಲು ತಿಳಿಸಿರುವೆ''

''ಹೋಟೆಲ್ ಏಕೆ? ನನ್ನ ಮನೆ ತುಂಬಾ ದೊಡ್ಡದಿದೆ. ನಿಮಗೆ ಯಾವ ತೊಂದರೆಯಾಗದಂತೆ ನೋಡಿಕೊಳ್ಳುವೆ ಅಲ್ಲಿಗೆ ಬನ್ನಿ''

''ಧನ್ಯವಾದಗಳು ಅಂಥೋನಿ. ನಿಮ್ಮ ಉದಾರ ಮನಸ್ಸು ಕಂಡು ತುಂಬಾ ಆನಂದವಾಗುತ್ತಿದೆ. ಈಗಾಗಲೇ ನೀವು ಚೇರ್‌ಮನ್‌ಗಾಗಿ ರಿಮಾಂಡ್‌ಹೋಂ ಮಕ್ಕಳಿಗೆ ಉಪಕಾರ ಮಾಡಿದ್ದು ಸಾಕಷ್ಟಿದೆ. ನಾನು ಅದರ ಮೇಲೆ ಹೊರೆಯಾಗಲಾರೆ. ದಯವಿಟ್ಟು ನನಗೂ ನನ್ನ ಕರ್ತವ್ಯ ಮಾಡಲು ಅವಕಾಶ ಕೊಡಿ''

''ನಿಮ್ಮಿಷ್ಟ ಮೇಜರ್, ನಾನು ಒತ್ತಾಯ ಮಾಡಲಾರೆ. ನಿಮಗೆ ನನ್ನ ಸೇವೆ ಬೇಕೆನಿಸಿದಾಗ ನಿಸ್ಸಂಕೋಚವಾಗಿ ನನ್ನನ್ನು ಕೇಳಿ''

ನಿರೀಕ್ಷಣಾಲಯದ ಹತ್ತಿರ ಬರುತ್ತಲೂ ಅಂಥೋನಿ ಪುನಃ ಪುನಃ ತನ್ನ ಮಾತು ನೆನಪಿಸಿ ಹೊರಟುಹೋದ. ಇಬ್ಬರೂ ಒಳಗೆ ಬಂದಾಗ ಅವರನ್ನು ಸ್ವಾಗತಿಸಿದವ ಗುಗ್ಗಪ್ಪ. ಕೆಂಗಪ್ಪನವರ ಕಡೆ ಓಡಿ ಬರುತ್ತ ಸ್..ಸ್...ರ್..ಸ್..ರ್... ಎಂದು ಕರೆದಾಗ ಕೆಂಗಪ್ಪ ಕೆಳಗೆ ಬಾಗಿ ಅವನನ್ನು ಎತ್ತಿಕೊಂಡು ಗದ್ದ ತುಟಿ ಸವರಿ ಪ್ರೀತಿ ಮಾಡಿದರು. ಆ ಅನಾಥಮಗುವಿನ

ಮೇಲೆ ಕೆಂಗಪ್ಪನವರ ವಾತ್ಸಲ್ಯ ಕಂಡು ಮೇಜರ ಚಕಿತನಾದ. ಅಷ್ಟರಲ್ಲಿ ಗುಗ್ಗಪ್ಪನ ದೃಷ್ಟಿ ಮೇಜರನ ಮೇಲೆ ಬಿತ್ತು. ಕೆಂಗಪ್ಪನವರ ಕಂಕುಳದಿಂದ ಕೆಳಗಿಳಿದ ಆತ ಮೇಜರನ ಬಳಿಬಂದು ಕೈ ಮುಗಿದು "ನ್....ಮ್..ನ್‌ಮ್..ಸ್ಕಾ...ರ್..ಸ್‌ಸ್...ರ್.." ಎಂದಾಗ ಹೇಮಂತನಿಗೂ ಅವನ ಮೇಲೆ ಪ್ರೀತಿ ಉಕ್ಕಿ ಬಂತು. ಅವನ ಗಲ್ಲ ತಟ್ಟಿ "ಹೇಗಿದ್ದಿ? ಚೆನ್ನಾಗಿದ್ದೀಯಾ?"

ಎಂದ. ಗುಗ್ಗಪ್ಪ ತಲೆಯಾಡಿಸಿದ.

ಮೇಜರ ರೂಮಿಗೆ ಬಂದಾಗ ಅಶೋಕ ಹಾಗೂ ಸುಷಮಾ ಸ್ನಾನ ಮಾಡಿ ಸಿದ್ಧರಾಗಿದ್ದರು.

"ನನಗೆ ಇಪ್ಪತ್ತು ನಿಮಿಷ ಸಾಕು ತಯಾರಾಗಲು. ಆಮೇಲೆ ಪೇಟೆಗೆ ಹೋಗೋಣ. ನಮಗಾಗಿ ಒಂದು ಒಳ್ಳೆ ಹೊಟಲ್ ಶೋಧಿಸಬೇಕು"

ಅವರ ಉತ್ತರಕ್ಕೂ ಕಾಯದೇ ಬಾಥ್‌ರೂಮ್ ಪ್ರವೇಶಿಸಿದ.

ಹೇಳಿದಂತೆ ಮೇಜರ ಇಪ್ಪತ್ತು ನಿಮಿಷಗಳಲ್ಲಿ ಸಿದ್ಧನಾಗಿದ್ದ. ಕೆಂಗಪ್ಪ ಸಹ ಅವರಿಗಾಗಿ ಕಾಯ್ದು ನಿಂತಿದ್ದರು. ನಾಲ್ವರೊಂದಿಗೆ ಮೇಜರನ ಕಾರು ಹೊರಟಿತು. ಮೇಜರ ಕಾರು ನಡೆಸುತ್ತಿದ್ದ. ಅವನ ಪಕ್ಕದಲ್ಲಿ ಕೆಂಗಪ್ಪನವರಿದ್ದರೆ ಹಿಂದಿನ ಸೀಟಿನಲ್ಲಿ ಅಶೋಕ ಹಾಗೂ ಸುಷಮಾ.

"ಮೊದಲು ನನಗೆ ಪೊಲೀಸ್ ಸ್ಟೇಷನ್ ದಾರಿ ತೋರಿಸಿ" ಎಂದು ಕೆಂಗಪ್ಪನವರಿಗೆ ನಿರ್ದೇಶನ ನೀಡಿದ ಹೇಮಂತ.

ಗಾಂಧೀನಗರ ಪೊಲೀಸ್ ಠಾಣೆಯ ಎದುರು ಕಾರು ನಿಲ್ಲಿಸಿದ ಹೇಮಂತ. ಸೆಂಟ್ರಿ ಒಂದು ಬಾರಿ ಕಾರಿನತ್ತ ಶುಷ್ಕ ನೋಟ ಬೀರಿದ. ಇಂಥ ಎಷ್ಟೋ ಕಾರುಗಳು ದಿನವೂ ಬಂದು ಹೋಗುತ್ತಿದ್ದವು. ಆತ ಜಾಗೃತವಾದದ್ದು ಮಾತ್ರ ಒಬ್ಬ ಸದೃಢಕಾಯದ ಆಕರ್ಷಕ ವ್ಯಕ್ತಿತ್ವದ, ಎತ್ತರಕಾಯದ ಪುರುಷ, ತನ್ನೊಂದಿಗೆ ಅಸಾಮಾನ್ಯ ರೂಪಸಿ ಹಾಗೂ ತನ್ನಷ್ಟೇ ಬಲಶಾಲಿ ಆಕರ್ಷಕ ಪುರುಷನೊಂದಿಗೆ ಕಾರಿನಿಂದಿಳಿದಾಗ. ಆ ಮೂವರ ಮಧ್ಯೆ ಕೆಂಗಪ್ಪ ಎಲ್ಲೋ ಕರಗಿ ಹೋಗಿದ್ದರು. ಅವರು ಠಾಣೆಯತ್ತ ಬಂದಾಗ ಸ್ವಲ್ಪ ವಿಚಲಿತನಾದ ಆತ. ಸೆಂಟ್ರಲ್‌ದಿಂದ ಬಂದ ಯಾರಾದರೂ ಮೇಲಧಿಕಾರಿಗಳೋ ಏನೋ ಎಂಬ ಸಂಶಯ. ಸ್ವಲ್ಪ ಒಳಗೆ ಇಣುಕಿ ನೋಡಿ ಕೂಗಿದ "ರಾವ್‌ಸಾಹೇಬ್.. ಯಾರೋ ಸಾಹೇಬ್ರು ಬರ್ತಿದಾ_ರೆ"

ತನ್ನ ಮುಂದಿದ್ದ ಫೈಲಿನಲ್ಲಿ ತನ್ನನ್ನೇ ತಾನು ಮರೆತಿದ್ದ ಇನ್‌ಸ್ಪೆಕ್ಟರ್ ಗಿರೀಶ್ ಬುದುಕ್‌ನೆ ಎದ್ದು ನಿಂತು ಕ್ಯಾಪು ಸರಿಪಡಿಸಿಕೊಳ್ಳುತ್ತ ಹೊರಗೆ ಓಡಿ ಬಂದ. ಆತನೂ ಸಹ ಮೇಜರ್ ಹೇಮಂತ ಹಾಗೂ ಅವರ ಸಂಗಡಿಗರನ್ನು ಕಂಡು ಮಂತ್ರಮುಗ್ಧನಾಗಿ ನಿಂತುಬಿಟ್ಟ. ಅವನನ್ನು ಸಮೀಪಿಸಿದ ಮೇಜರ್. ಸೆಂಟ್ರಿಯಿಂದ ಜಬುರ್ದಸ್ತಿ ಸೆಲ್ಯೂಟ್, ಖಟ್‌ಖಡ್ ಎಂಬ ಸದ್ದಿಗೆ ಗಿರೀಶ ಎಚ್ಚೆತ್ತ. ಸೆಂಟ್ರಿಯ ಸೆಲ್ಯುಟ್‌ಗೆ ಅಷ್ಟೇ ಸುಂದರವಾಗಿ ಗೌರವದಿಂದ ಪ್ರತಿವಂದನೆ ನೀಡಿದ ಮೇಜರ್ ಅವನ ಬೆನ್ನು ತಟ್ಟಿ ''ಥ್ಯಾಂಕ್ಯು'' ಎಂದಾಗ ಸೆಂಟ್ರಿಗೆ ಮೆಡಲ್ ಸಿಕ್ಕಂತೆಯೇ ಸಂತೋಷವಾಗಿತ್ತು.

''ಗುಡ್‌ಮಾರ್ನಿಂಗ್ ಇನ್ಸ್‌ಪೆಕ್ಟರ್.. ಮೇಜರ ಹೇಮಂತ್ ಅಂಡ್ ಪಾರ್ಟಿ ಅಟ್- ಯುವರ್ ಸರ್ವೀಸ್''

ಗಿರೀಶನ ಮೈ ಜುಂ ಎಂದಿತು. ಮೇಜರ ಹೇಮಂತ ಭಾರತದ ಜನತೆಗೆ ಒಂದು ದೈವೀಶಕ್ತಿ, ಅಸಾಮಾನ್ಯ ಪುರುಷ. ಅವನ ಚಮತ್ಕಾರಗಳನ್ನು ಕೇಳಿ ಓದಿ ತಿಳಿದಿದ್ದ ಅವನಿಗೆ ತನ್ನೆದುರೇ ನಿಂತವ ಮೇಜರ ಹೇಮಂತ ಎಂದು ತಿಳಿದಾಗ ಒಂದು ಕ್ಷಣ ಮೈ ಮರೆತ. ಮುಂದಿನ ಕ್ಷಣ ಹೇಮಂತನ ಕೈ ಕುಲುಕಿತು. ''ನನ್ನ ಮಹಾಭಾಗ್ಯ ನಿಮ್ಮ ದರ್ಶನವಾದದ್ದು. ನಿಮಗೆಲ್ಲರಿಗೂ ಸುಸ್ವಾಗತ ಬನ್ನಿ''

ಕೆಂಗಪ್ಪನವರ ಎದೆ ಹೆಮ್ಮೆಯಿಂದ ಬಿರಿದುಹೋಯಿತು. ಮೇಜರನ ಜೊತೆ ಆತನೂ ದೊಡ್ಡ ಮನುಷ್ಯನಾಗಿದ್ದರು.

ಎರಡೇ ನಿಮಿಷಗಳಲ್ಲಿ ಗಿರೀಶ ಅವರ ಆಪ್ತವಲಯಕ್ಕೆ ಸೇರಿ ಬಿಟ್ಟ. ಬಲವಂತ ಮಾಡಿ ಕಾಫಿ-ತಿಂಡಿ ತರಿಸಿದ. ನಿರೀಕ್ಷಣಾಲಯಕ್ಕೆ ಪೊಲೀಸ್ ರಕ್ಷಣೆ ನೀಡುವಂತೆ ಮೇಜರ ವಿನಂತಿಸಿಕೊಂಡಾಗ ಆತ ಸಹರ್ಷದಿಂದ ಒಪ್ಪಿಕೊಂಡು ಅದು ನನ್ನ ಕರ್ತವ್ಯ ಎಂದ. ಎಲ್ಲರೂ ಮೇಲೆದ್ದರು. ಏನೋ ನೆನಪಾದಂತೆ ಗಿರೀಶ ನುಡಿದ.

''ಹೇಮಂತ ನನ್ನದೊಂದು ವಿನಂತಿ''

''ಹೇಳಿ ಅದಕ್ಕೇನು?''

''ಹದಿನೈದು ದಿನಗಳಿಂದ ನಾನೊಂದು ಕೇಸಿನಲ್ಲಿ ಸಿಲುಕಿಕೊಂಡಿದ್ದೇನೆ. ಎಷ್ಟು ಪ್ರಯತ್ನಿಸಿದರೂ ದಾರಿ ಕಾಣ್ತಾ ಇಲ್ಲ''

''ಯಾವುದಪ್ಪಾ ಅಂಥಾ ಕೇಸು''

"ಇದೊಂದು ಗೋಲ್ಡ್ ಸ್ಮಗಲ್ಲಿಗೆ ಸಂಬಂಧಿಸಿದ ಕೇಸು"

"ಏನು ಗೋಲ್ಡ್ ಸ್ಮಗಲ್ಲೇ" ಹೇಮಂತನ ಕಿವಿಗಳು ಚುರುಕಾಗಿದ್ದವು.

"ಹೌದು. ಎಷ್ಟು ಪ್ರಯತ್ನಿಸಿದರೂ ಚಿನ್ನದ ಕಳ್ಳಸಾಗಾಣಿಕೆ ತಡೆಯಲು ಆಗ್ತಾ ಇಲ್ಲ. ಆದರ ಹಿಂದಿರುವವರು ದೂರ ಆವರ ನೆರಳೂ ಸಹ ನನ್ನಿಂದ ಕಂಡು ಹಿಡಿಯಲಾಗಿಲ್ಲ. ನಿನ್ನೆ ತಾನೇ ಮೇಲಧಿಕಾರಿಗಳಿಂದ ಮೆಮೊ ಬಂದಿದೆ"

"ನೀವೇನೂ ಚಿಂತಿಸಬೇಡಿ. ನಾನು ನಿಮಗೆ ಸಹಾಯ ನೀಡುತ್ತೇನೆ"

"ಹಾಂ. ಒಂದು ವಿಷಯ. ನನ್ನ ವಿಷಯ ಸಧ್ಯಕ್ಕೆ ಯಾರ ಮುಂದೂ ಉಸುರಬೇಡಿ. ಹಾಗೇನಾದ್ರೂ ಆದ್ರೆ ತಾಪತ್ರಯವಾಗುತ್ತದೆ"

"ಸಧ್ಯದ ಸಂಕಟದಿಂದ ಪಾರಾಗಬೇಕಾದರೆ ನನ್ನ ಬಾಸ್ ಮುಂದೆ ಮಾತ್ರ ತಮ್ಮ ಬಗ್ಗೆ ಮಾತನಾಡುತ್ತೇನೆ. ಒಪ್ಪಿಗೆ ಕೊಡಿ"

"ಸರಿ, ಆದರೆ ತುಂಬಾ ಗೌಪ್ಯವಾಗಿಡಲು ಹೇಳಿ"

ನಾಲ್ವರೂ ಹೊರಗೆ ಬಂದರು.

"ಮುಂದಿನ ಭೇಟಿ "ರಾಧಾಕೃಷ್ಣ ಪ್ಯಾಲೇಸ್"ಗೆ. ಫೈವ್‌ಸ್ಟಾರ್ ಹೊಟೆಲ್ ಸಮ ಬರದಿದ್ದರೂ ಉತ್ತಮ ಅನ್ನಬಹುದಾದ ಹೊಟೆಲ್. ಅಲ್ಲಿ ಎರಡು ಡಬಲ್ ಡಿಲಕ್ಸ್‌ರೂಮ್ ಬಾಡಿಗೆ ಪಡೆದ ಹೇಮಂತ ತನ್ನ ಹೆಸರನ್ನು ಬೇಕೆಂತಲೇ "ಹರಿವಂಶರಾಯ್..ಕಲ್ಕತ್ತಾ" ಎಂದು ಬರೆಸಿದ.

ಅಲ್ಲಿಗೆ ಕೆಂಗಪ್ಪನವರ ಕೆಲಸ ಮುಗಿಯಿತು. ಅವರನ್ನು ಹೊರಗಿನವರೆಗೆ ಬೀಳ್ಕೊಡಲು ಬಂದ ಹೇಮಂತ.

"ನೀವು ಯಾವುದಕ್ಕೂ ಹೆದರಬೇಡಿ. ನನ್ನ ವಿಷಯ ಯಾರ ಮುಂದೂ ಹೇಳಬೇಡಿ. ನಾನೇ ಆಗಾಗ ಬಂದು ಕಾಣ್ತೇನೆ. ಅತಿ ಅವಶ್ಯಕವೆಂದಾಗ ಮಾತ್ರ ಫೋನು ಮಾಡಿ ಸಾಕು" ಎಂದು ಮರು ಎಚ್ಚರಿಕೆ ನೀಡಲು ಮರೆಯಲಿಲ್ಲ.

"ನಾವು ಎಲ್ಲಿಂದ ಕೆಲಸ ಆರಂಭಿಸೋಣ?"

ಸಿಗರೇಟಿಗೆ ಅಗ್ನಿಸಂಸ್ಕಾರ ಮಾಡುತ್ತ ಕೇಳಿದ ಹೇಮಂತ.

"ಗುಗ್ಗನ ಜೊತೆ ಮಾತನಾಡುವದರೊಂದಿಗೆ ನಾವು ಕೇಸು ಪ್ರವೇಶಿಸಬಹುದು. ಅವನ ಅಪಹರಣದಿಂದೇ ಅಲ್ಲವೇ ನಾವು ಆಸಕ್ತಿ ವಹಿಸಿದ್ದು"

ಅಶೋಕನ ಮಾತು ಮುಗಿಯುತ್ತಿದ್ದಂತೆ ಸುಷಮಾ ನುಡಿದಳು.

''ಮೊದಲು ನಾವು ಚಿನ್ನ ಸಾಗಿಸುವಾಗ ಸಿಕ್ಕಿಬಿದ್ದ ಮಕ್ಕಳ ಬಗ್ಗೆ ವಿಷಯ ಸಂಗ್ರಹಿಸಬೇಕು. ಸಾಧ್ಯವಾದಷ್ಟು ಅವರನ್ನು ಭೆಟ್ಟಿ ಮಾಡಬೇಕು. ಇದರಿಂದ ಅವರ ಹಿಂದಿರುವ ವ್ಯಕ್ತಿಯ ಬಗ್ಗೆ ಸುಳಿವು ಸಿಕ್ಕರೂ ಸಿಗಬಹುದು''

''ನಿಮ್ಮಿಬ್ಬರ ಅಭಿಪ್ರಾಯಗಳು ಸೂಕ್ತವಾಗಿವೆ. ಗುಗ್ಗು ನಮಗೆ ಪ್ರಥಮ ಸೂತ್ರಧಾರ.. ಅದರೊಂದಿಗೆ ನಾವು ಪೊಲೀಸ್ ಸಹಾಯ ಪಡೆದು ಉಳಿದ ಅಪರಾಧಿ ಮಕ್ಕಳನ್ನು ಚೆಕ್ ಮಾಡಬೇಕು. ಹೇಗಿದ್ದರೂ ಕೆಂಗಪ್ಪನವರಿಗೆ ಮಕ್ಕಳ ಭಾವಚಿತ್ರ ಹಾಗೂ ವಿಳಾಸ ತಿಳಿಸಲು ಹೇಳಿದ್ದೇವೆ. ಸಾಯಂಕಾಲ ಅದನ್ನು ಸಂಗ್ರಹಿಸಿದರಾಯ್ತು. ಇದಕ್ಕೆ...''

ಟೆಲಿಫೋನ್ ಗಂಟೆಯಿಂದಾಗಿ ಮಾತು ಅರ್ಧಕ್ಕೇ ನಿಂತಿತ್ತು.

''ಎಸ್. ಹರಿವಂಶರಾಯ್ ಸ್ಪೀಕಿಂಗ್'' ರಿಸೀವರ್ ಎತ್ತಿ ನುಡಿದ ಹೇಮಂತ. ಆ ಕಡೆಯಿಂದ ಕುತ್ಸಿತ ನಗೆ ಕೇಳಿಸಿತು. ಆ ನಗೆ ಪ್ರಕೃತಿದತ್ತವಾದುದಲ್ಲ. ಮಾತನಾಡುತ್ತಿರುವ ವ್ಯಕ್ತಿ ಆದಷ್ಟು ಪ್ರಯತ್ನ ಮಾಡಿ ತನ್ನ ಧ್ವನಿಗೆ ಕೃತ್ರಿಮತೆಯ ಸೋಗು ಹಾಕಿರುವನೆಂಬುದು ಸ್ಪಷ್ಟವಾಗುತ್ತಿತ್ತು. ಬಹುಶಃ ಟೆಲಿಫೋನ್ ಮೌತ್ ಮೇಲೆ ಕರವಸ್ತ್ರ ಹರಡಿದ್ದರೂ ಹರಡಿರಬಹುದು.

''ಮೇಜರ ಹೇಮಂತ್.. ನೀವು ಯಾರಿಗೆ ಮೋಸ ಮಾಡಿದರೂ ನನಗೆ ಮೋಸ ಮಾಡಲಾರಿರಿ. ಎಲ್ಲರ ದೃಷ್ಟಿಯಲ್ಲಿ ನೀವು ಹರಿವಂಶರಾಯ್ ಫ್ರಂ ಕಲಕತ್ತಾ ಆಗಿರಬಹುದು. ನನಗೆ.. ನನಗೆ ನೀವು ಮೇಜರ್..''

''ಯಾರು ನೀನು?''

''ನಿಮ್ಮ ಮಿತ್ರನಂತೂ ಅಲ್ಲ''

''ಹಾಗಾದರೆ ಶತ್ರುವೆ?''

''ಅದನ್ನು ನಿರ್ಧರಿಸುವದು ನಿಮ್ಮ ಕೈಯಲ್ಲಿದೆ''

''ಅದು ಹೇಗೆ?''

''ನೇರವಾಗಿ ನೀವಿಲ್ಲಿಂದ ನಿಮ್ಮ ಊರಿಗೆ ಪ್ರಯಾಣ ಮಾಡಿ. ಇಲ್ಲಿಯ ವಿಷಯದ ಬಗ್ಗೆ ತಲೆ ಕೆಡಿಸಿಕೊಳ್ಳಬೇಡಿ. ಆಗ ನಾನು ನಿಮಗೆ ಮಿತ್ರನಾಗಬಲ್ಲೆ''

''ಒಂದು ವೇಳೆ ಹೋಗದಿದ್ರೆ...''

''ಅದು ಅತಿ ಸರಳ.. ನಾನು ಬಾಯಿ ಬಿಟ್ಟು ಹೇಳಬೇಕಾಗಿಲ್ಲ''

''ನಿಮ್ಮ ಪ್ರಾಮಾಣಿಕ ಸಲಹೆಗೆ ಧನ್ಯವಾದಗಳು''

"ಅದರ ಅವಶ್ಯಕತೆಯಿಲ್ಲ. ಹೇಳಿ.. ಏನು ನಿಮ್ಮ ಅಭಿಪ್ರಾಯ?"

"ನಿಮ್ಮಂಥವರು ನನ್ನ ಮಿತ್ರರಾಗುವುದು ಕನಸಿನ ಮಾತು"

"ಹಾಗಾದರೆ ಶತ್ರುಗಳಾಗಬಹುದೋ?"

"ಅದಕ್ಕೂ ಒಂದು ಯೋಗ್ಯತೆ ಬೇಕಾಗುತ್ತದೆ ಮಿಸ್ಟರ್. ಕೊಲೆ, ಸುಲಿಗೆ, ದರೋಡೆ ಮಾಡುವವರು ಶತ್ರುಗಳಾಗಬಹುದು. ಚಿಕ್ಕ ಚಿಕ್ಕ ಮಕ್ಕಳನ್ನು ಅಪರಾಧ ಜಗತ್ತಿಗೆ ತರುವ ನೀವು ಅದಕ್ಕೂ ನಾಲಾಯಖ್. ನನ್ನ ಬಗ್ಗೆ ನೀವು ತಾಳಿದ ಧೋರಣೆಗೆ ಧನ್ಯವಾದಗಳು. ಅದಕ್ಕೆ ನೀವು ತೆರಬೇಕಾದ ದಂಡ ಮಾತ್ರ ಅತಿಘೋರ..."

ಸಂಬಂಧ ಕಡಿದು ಹೋಯಿತು.

"ನಮ್ಮ ಗುಟ್ಟು ರಟ್ಟಾಗಿದೆ. ನಾವೆಷ್ಟು ಜಾಗ್ರತೆ ವಹಿಸಿದ್ದರೂ ಅದು ಶತ್ರುವಿಗೆ ತಿಳಿದು ಹೋಗಿದೆ. ಈ ವಿಷಯ ಯಾರಿಂದ ತಿಳಿದಿರಬಹುದು?"

ಹೇಮಂತನ ಮಾತಿಗೆ ಇಬ್ಬರ ಬಳಿಯೂ ಉತ್ತರವಿರಲಿಲ್ಲ. ಮೌನವೇ ಅದಕ್ಕೆ ಉತ್ತರವಾಯಿತು.

ಹೇಮಂತ ಎಳ್ಳಷ್ಟೂ ಉದಾಸೀನ ಮಾಡಲಿಲ್ಲ. ಈ ವಿಷಯವನ್ನು ಹಗುರಾಗಿ ತೆಗೆದುಕೊಳ್ಳಲಿಲ್ಲ. ನೋಡಲು ಏನೂ ಅರಿಯದ ಮುಗ್ಧ ಮಕ್ಕಳು ಚಿನ್ನದ ಸಾಗಾಣಿಕೆಯಲ್ಲಿ ಸಿಲುಕಿ ಬಿದ್ದ ವಿಷಯ ಸಾಮಾನ್ಯವೆಂದು ಕಂಡರೂ ಇದರ ಹಿಂದೆ ದುಷ್ಟಕೂಟದ ಜಾಲವಡಗಿದ್ದು ಅದರ ಮರೆ ಮಾಚಲು ಈ ರೀತಿ ಮಕ್ಕಳನ್ನು ಮುಂದೆ ಬಿಡುತ್ತಿದ್ದಾರೆಂಬುದನ್ನು ಯೋಚಿಸಿದ ಆತ ದುಷ್ಟಕೂಟದ ಬಲೆಯನ್ನು ಭೇದಿಸಲು ಸಿದ್ಧವಾದ. ಆತ ತನ್ನ ವಿಚಾರಣೆ ಪೊಲೀಸ್ ಠಾಣೆಯಿಂದ ಆರಂಭಿಸಲು ನಿರ್ಧರಿಸಿದ.

ಮೂವರೂ ಸೇರಿ ಮತ್ತೊಂದು ಬಾರಿ ಲೈಟಾಗಿ ತಿಂಡಿ ತಿಂದು ಕಾಫಿ ಕುಡಿದು ರೂಮಿನಿಂದ ಹೊರ ಬಂದರು. ಹೇಮಂತನ ಕಾರು ರಿಮಾಂಡ್‌ಹೋಂನತ್ತ ಸಾಗಿತು. ಮಕ್ಕಳೆಲ್ಲ ಶಾಲೆಗೆ ಹೋಗಿದ್ದರು. ಗಿರೀಶನಿಂದ ಕಳಿಸಲ್ಪಟ್ಟ ಇಬ್ಬರು ಕಾನ್‌ಸ್ಟೇಬಲ್ ತಮ್ಮ ಡ್ಯೂಟಿಯನ್ನು ಅಚ್ಚುಕಟ್ಟಾಗಿ ನಡೆಸುತ್ತಿದ್ದರು. ಈ ಮೊದಲು ಹೇಮಂತ ಹಾಗೂ ಆವನ ಸಂಗಡಿಗರನ್ನು

ಠಾಣೆಯಲ್ಲಿ ನೋಡಿದ್ದರಿಂದ ಅವರಿಗೆ ಗೌರವದ ವಂದನೆ ಸಲ್ಲಿಸಿದರು. ಅವರೆಡೆ ಒಂದು ಅತಿ ಮೋಹಕ ನಗೆ ಚೆಲ್ಲಿ ಹೇಮಂತ ಒಳನಡೆದ.

ಬೀರುವಿನಿಂದ ಫೈಲುಗಳನ್ನು ಹೊರ ತೆಗೆಯುತ್ತಿದ್ದ ಕೆಂಗಪ್ಪ ಬಾಗಿಲ ಬಳಿ ಸದ್ದಾಗುತ್ತಲು ಹೊರಳಿ ನೋಡಿದರು. ಸಂತಸದಿಂದ ಓಹ್ ನೀವಾ? ಬನ್ನಿ ಎಂದು ಸ್ವಾಗತಿಸಿ ಬೀರುವಿನ ಬಾಗಿಲು ಮುಚ್ಚಿದರು. ಕುರ್ಚಿಯಲ್ಲಿ ಕುಳಿತುಕೊಳ್ಳುತ್ತ ಕೇಳಿದ ಹೇಮಂತ.

''ನಾನು ಕೇಳಿದ ವಿಷಯದ ಮಾಹಿತಿ ದೊರೆಯಿತೆ?''

''ಹಿಂದೆ ರಿಮ್ಯಾಂಡ್ ಹೋಂನಲ್ಲಿದ್ದ ಮಕ್ಕಳ ಬಗ್ಗೆ ತಾನೇ?''

''ಹಾ....ಅದೇ''

''ಅದಕ್ಕೇ ನೋಡ್ತಾ ಇದ್ದೆ. ಒಂದೈದು ನಿಮಿಷ ಅವಕಾಶ ಕೊಡಿ''

ಕೆಂಗಪ್ಪ ಮತ್ತೆ ಬೀರುವಿನಲ್ಲಿದ್ದ ಫೈಲುಗಳ ಕಡೆ ಸರಿದರು. ಹೇಮಂತ ಮೇಲೆದ್ದು ಅತ್ತಿತ್ತ ನೋಡುತ್ತ, ಒಳಗಡೆ ಸುತ್ತಾಡಿ ಹತ್ತು ಹದಿನೈದು ನಿಮಿಷಗಳ ನಂತರ ಆಫೀಸಿಗೆ ಬಂದಾಗ ಕೆಂಗಪ್ಪ ಅವರ ದಾರಿ ಕಾಯುತ್ತಿದ್ದರು.

''ಎಲ್ಲಿ ಹೋಗಿದ್ದೀರಿ?''

''ಹಾಗೇ ಒಳಗಡೆ ಸುತ್ತಾಡಿಕೊಂಡು ಬಂದೆ. ಕಿಟಕಿ ಬಾಗಿಲುಗಳಿಗೆ ಬಣ್ಣ ಕೊಡಿಸುತ್ತಿದ್ದೀರಾ?''

''ಹೌದು. ಐದಾರು ವರ್ಷಗಳಿಂದ ಬಣ್ಣವಾಗಿಲ್ಲ''

''ಒಳ್ಳೆಯದಾಯ್ತು ಬಿಡಿ. ಯಾರು ಪೇಂಟರ್?''

''ರಸೂಲಸಾಬ. ಇಲ್ಲೇ ಕಮೀಶನರ ಸಾಹೇಬರ ಮನೆ ಹಿಂದೆ ಕ್ವಾರ್ಟರ್ಸ್‌ನಲ್ಲಿದ್ದಾನೆ. ಏಕೆ? ಅವನ ಬಗ್ಗೆ ಏಕೆ ಈ ವಿಚಾರಣೆ''

''ಛೆ..ಛೆ.. ವಿಚಾರಣೆ ಅಲ್ಲ. ಒಳ್ಳೆ ಕೆಲಸಗಾರ ಅನ್ನಿಸಿತು. ಒಂದೆರಡು ಕಡೆ ರಿಪೇರಿ ಸಹ ಮಾಡಿದ್ದಾನೆ. ಅದಕ್ಕೆ ಕೇಳಿದೆ''

''ರಿಪೇರಿ ಮಾಡಿದ್ದು ರಸೂಲ ಅಲ್ಲ.. ಕಾರ್ಪೆಂಟರ್ ದಸ್ತಗೀರ್''

''ಓಹ್ ಹೀಗೋ. ಅವನೂ ಕ್ವಾರ್ಟರ್ಸ್‌ನಲ್ಲೇ ಇರುವನೆ?''

''ಅದು ಗೊತ್ತಿಲ್ಲ. ಅವನನ್ನು ರಸೂಲ ಕರೆತಂದಿದ್ದಾನೆ''

ಮೇಜರನ ವಿಚಾರಣೆ ಬಗ್ಗೆ ಕೆಂಗಪ್ಪನವರಿಗೆ ಅನುಮಾನ ಬರದಿದ್ದರೂ ಅಶೋಕ ಮತ್ತು ಸುಷಮಾ ಇದರ ಹಿಂದೆ ರಹಸ್ಯವಡಗಿದೆ ಎಂದು ಊಹಿಸಿದ್ದರು. ಅದರಿಂದಾಗಿ ಹೆಚ್ಚು ಆಸಕ್ತಿಯಿಂದ ವಿಷಯ ಆಲಿಸುತ್ತಿದ್ದರು.

ಕೆಂಗಪ್ಪ ಎರಡು ಮೂರು ಫೈಲು ತೆಗೆದು ಮೇಜರ ಮುಂದಿಟ್ಟರು. ಹೇಮಂತ ಗಮನಿಸತೊಡಗಿದ. ಒಂದು ಫೈಲಿನಲ್ಲಿ ಎರಡು ಫೋಟೋ ಹಾಗೂ ವಿವರಗಳು. ಎರಡನೇ ಫೈಲಿನಲ್ಲಿ ಒಂದು, ಮೂರನೇ ಫೈಲಿನಲ್ಲಿ ಸಹ ಒಂದೊಂದು ಫೋಟೋ ಮತ್ತು ವಿವರಣೆ.

ಫೋಟೋ 1 - ವಿನಾಯಕ. ವಯಸ್ಸು ಹದಿನಾಲ್ಕು. ತಂದೆ ಇಲ್ಲ. ತಾಯಿ ಕೂಲಿ ಮಾಡುತ್ತಿದ್ದಾಳೆ. ಹುಡುಗನಿಗೆ ಸಿನೆಮಾ ಹುಚ್ಚು. ಟಾಕೀಸಿನಲ್ಲಿ ಕೆಲಸ. ಅಲ್ಲೇ ಚಿನ್ನದ ಪ್ಯಾಕೆಟ್ ಸಾಗಿಸುವ ಮುಂದೆ ಸಿಕ್ಕಿಬಿದ್ದ. ನಾಲ್ಕು ವರ್ಷ ಶಿಕ್ಷೆ. ಘಾಟಗೆ ಚಾಳ. ಗಾಂಧೀಚೌಕ.

ಫೋಟೋ 2 - ಚಂದ್ರಕಾಂತ. ವಯಸ್ಸು ಹನ್ನೆರಡು. ಬಡತನ. ಅಭ್ಯಾಸಕ್ಕಿಂತ ಹೆಚ್ಚು ಹೊರಗಿನ ಐಷಾರಾಮದ ಕಡೆ ಒಲವು. ಪಿಕ್ಚರ, ಒಳ್ಳೆಬಟ್ಟೆ, ಟೇಪ್‌ರಿಕಾರ್ಡರ್, ಟಿ.ವಿ.ಅಂಗಡಿಯಲ್ಲಿ ಕೆಲಸ. ಅಲ್ಲೇ ಗಿರಾಕಿಗೆ ಟಿ.ವಿ.ಯಲ್ಲಿ ಚಿನ್ನ ಇಟ್ಟುಕೊಟ್ಟಾಗ ಸಿಕ್ಕಿಬಿದ್ದ. ಶಿಕ್ಷೆ ನಾಲ್ಕು ವರ್ಷ. ಓಡಲು ಪ್ರಯತ್ನಿಸಿ ಸಿಕ್ಕ ಮತ್ತೆ ಮೂರು ವರ್ಷ. ಲಕ್ಷ್ಮೀ ಟಾಕೀಜ ಹಿಂದೆ.

ಫೋಟೋ 3 - ಬಸವರಾಜ. ವಯಸ್ಸು ಹದಿನಾರು. ಅನಾಥ ಬಾಲಕ. ಶಿಕ್ಷಣವಿಲ್ಲ. ಉಂಡಾಡಿಗುಂಡ. ದತ್ತಕ ತೆಗೆದುಕೊಂಡಂತೆ ಮಾಡಿ ಮೋಸ ಮಾಡಿದ್ದು. ಬಟ್ಟೆಗಳಿದ್ದ ಶುದ್ಧ ಸೂಟ್‌ಕೇಸಿನಲ್ಲಿ ಚಿನ್ನದ ಬಿಸ್ಕೆಟ್‌ಗಳು. ಶಿಕ್ಷೆ 4 ವರ್ಷ. ಪಾಲ್ ಬಿಲ್ಡಿಂಗ್. ಗಾಂಧೀನಗರ.

ಫೋಟೋ 4 - ಗಂಗಾಧರ. ಕುರುಡ. ಕುರುಡರ ಶಾಲೆ ಮಗು. ಕಣ್ಣು ಕೊಡಿಸುವ ಆಸೆ. ಗೊತ್ತಿಲ್ಲದಂತೆ ಕಳ್ಳ ಸಾಗಾಣಿಕೆಗೆ ಸಿಕ್ಕಿಬಿದ್ದ. ಶಿಕ್ಷೆ 5 ವರ್ಷ. 2ನೇ ಮೆಯಿನ್. ರಜತಗಿರಿ.

ಓದಿ ಮುಗಿದ ಮೇಲೆ ಹೇಮಂತ ಅಶೋಕನ ಕಡೆ ನೋಡಿದಾಗ ಆದರರ್ಥ ತಿಳಿದ ಆತ ಬ್ಯಾಗಿನಿಂದ ಶಕ್ತಿಶಾಲಿ ಕೆಮರಾ ತೆಗೆದು ಚಕಚಕನೆ ನಾಲ್ಕು ಪುಟಗಳ ಫೋಟೋ ತೆಗೆದ. ಸುಷಮಾ ತನ್ನ ಡೈರಿಯಲ್ಲಿ ನಾಲ್ಕು ಹುಡುಗರ ಹೆಸರು ವಿಳಾಸ ಗುರುತು ಹಾಕಿಕೊಂಡಳು. ಕೆಂಗಪ್ಪ ಪುನಃ ಫೈಲುಗಳನ್ನು ಎತ್ತಿ ಬೀರುವಿನಲ್ಲಿರಿಸಿದರು.

ಕೆಂಗಪ್ಪನವರಿಗೆ ವಂದಿಸಿ ಮೇಲೆದ್ದರು ಮೂವರೂ.

ಮುಂದಿನ ಕ್ಯಾಂಪು ಪೊಲೀಸ್‌ಠಾಣೆ. ಊಟಕ್ಕೆ ಹೊರಡುವ ತಯಾರಿಯಲ್ಲಿರುವಾಗಲೇ ಗಿರೀಶನನ್ನು ಹಿಡಿದರು. ಗಿರೀಶನ ಹಸಿವೆ

ಹಾರಿಹೋಯಿತು. ಉತ್ಸಾಹದಿಂದ ಸ್ವಾಗತಿಸಿದ. "ಬನ್ನಿ" ಮೂವರೂ ಕುಳಿತುಕೊಂಡರು.

"ಗಿರೀಶ ನಿಮ್ಮಿಂದ ಒಂದು ಸಹಾಯವಾಗಬೇಕಿತ್ತು"

ಮೇಜರ ಮಾತು ಆರಂಭಿಸಿದ.

"ಸಹಾಯ. ಮೇಜರ ಅಪ್ಪಣೆ ಎಂದು ಹೇಳಿ! ನಿಮಗಾಗಿ ನಾನು ಸದಾ ಸಿದ್ಧ"

"ನನ್ನ ಬಳಿ ನಾಲ್ಕು ಹುಡುಗರ ವಿವರವಿದೆ. ನಾಲ್ವರೂ ಚಿನ್ನದ ಬಿಸ್ಕತ್ ಕಳ್ಳತನದಿಂದ ಸಾಗಿಸುವಾಗ ಸಿಕ್ಕಿಬಿದ್ದವರು. ರಿಮಾಂಡ್‌ಹೋಂನಲ್ಲಿ ಶಿಕ್ಷೆ ಅನುಭವಿಸಿ ಅಲ್ಲಿಂದ ಬಿಡುಗಡೆಯಾದವರು. ನನಗೆನಿಸುವ ಮಟ್ಟಿಗೆ ಆ ನಾಲ್ವರನ್ನು ಒಬ್ಬರೇ ಇನ್ಸ್‌ಪೆಕ್ಟರ್ ಬಂಧಿಸಿ ಕೋರ್ಟಿಗೆ ಹಾಜರ ಪಡಿಸಿದ್ದಾರೆ. ಆ ಇನ್ಸ್‌ಪೆಕ್ಟರ್ ಯಾರು? ಸಧ್ಯ ಅವರೆಲ್ಲಿದ್ದಾರೆ? ಅವರ ವಿಳಾಸವೇನು? ಅವರು ಬೇರೆ ಯಾವದಾದರೂ ಅಪರಾಧ ಪತ್ತೆ ಹಚ್ಚಿದ್ದರೋ ಹೇಗೆ? ಈ ಎಲ್ಲ ವಿಷಯಗಳಿಗೆ ವಿವರ ಬೇಕು"

"ಅವಶ್ಯವಾಗಿ. ಆದರೆ ಇದಕ್ಕೆಲ್ಲ ಸ್ವಲ್ಪ ಸಮಯ ಬೇಕಲ್ಲ?"

"ಎಷ್ಟು ಬೇಕಾಗಬಹುದು?"

"ಒಂದೆರಡು ಗಂಟೆ"

"ಸರಿ ಹಾಗಾದರೆ ಮೊದಲು ನಾವು ನಾಲ್ವರೂ ಸೇರಿ ಎಲ್ಲಾದರೂ ಒಂದು ಕಡೆ ಊಟ ಮಾಡೋಣ. ಅನಂತರ ನೀವು ನಿಮ್ಮ ಕೆಲಸಕ್ಕೆ ಹೋಗಿ. ನಾನು ನಿಮಗಾಗಿ ಹೊಟೆಲ್‌ನಲ್ಲಿ ದಾರಿ ಕಾಯುತ್ತೇನೆ"

ಗಿರೀಶ ಒಪ್ಪಿಕೊಂಡ ಒಂದು ಶರ್ತಿನ ಮೇಲೆ. ಅಂದಿನ ಊಟದ ಖರ್ಚು ಆತನಿಗೆ ಸೇರಿದ್ದು. ಪ್ರೀತಿಯ ಒತ್ತಾಯಕ್ಕೆ ಮೇಜರ ಒಪ್ಪಿಕೊಳ್ಳಲೇಬೇಕಾಯಿತು. ಗಿರೀಶ ಹೆಡ್‌ಕಾನ್‌ಸ್ಟೇಬಲ್‌ನನ್ನು ಕರೆದು ಅವನಿಗೆ ಕೆಲವು ನಿರ್ದೇಶನ ನೀಡಿ ಹೊರ ಬಂದ. ಜೀಪನ್ನು ಅಲ್ಲೇ ಬಿಟ್ಟು ಮೇಜರನ ಪಕ್ಕದಲ್ಲಿ ಬಂದು ಕುಳಿತ. ಆತ ಹೇಳಿದೆಡೆ ಮೇಜರ ಕಾರು ನಡೆಸತೊಡಗಿದ.

ಹತ್ತೇ ನಿಮಿಷಗಳಲ್ಲಿ ಅವರೆಲ್ಲ ಸುಜಾತಾ ಉಪಹಾರಗೃಹದಲ್ಲಿದ್ದರು. ಭವ್ಯಬಂಗಲೆಯನ್ನೇ ಹೊಟೆಲಾಗಿ ಪರಿವರ್ತಿಸಲಾಗಿತ್ತು. ಬಂಗಲೆ ಸುತ್ತಮುತ್ತ ಗಿಡಮರಗಳು. ಹಸಿರು ಲಾನ್. ಕಾರಂಜಿ. ಮರಗಳ ಕೆಳಗೂ ನಾಲ್ಕಾರು ಟೇಬಲ್. ಒಳಗಡೆ ದೊಡ್ಡ ಹಾಲ್. ಅಲ್ಲಿ ಬಾಳೆಎಲೆ ಮೇಲೆ ಊಟ.

ದೊಡ್ಡ ದೊಡ್ಡ ಹಚ್ಚಹಸಿರು ಬಾಳೆ ಎಲೆ ಮೇಲೆ ಪಾಂಕ್ತಾಗಿ ಬಡಿಸಿದ ರಸಕವಳವನ್ನು ನಾಲ್ವರೂ ಹೊಟ್ಟೆ ಬಿರಿಯುವಂತೆ ಕತ್ತರಿಸಿ ಮೇಲೆದ್ದಾಗ ಕಣ್ಣು ತೂಗತೊಡಗಿದ್ದವು. ಕಾರಿನಲ್ಲಿ ಕೂಡುತ್ತಿದ್ದಂತೆ ಗಿರೀಶನ ಮೈ ಭಾರವಾಗಿತ್ತು. ಎರಡು ಗಂಟೆಗಳಲ್ಲಿ ಮೇಜರನಿಗೆ ಬೇಕಾದ ವಿಷಯ ಸಂಗ್ರಹಿಸಬೇಕಾಗಿತ್ತು. ಹೇಗಪ್ಪಾ ಮಾಡುವದು ಎಂದಾತ ಚಿಂತಿಸುತ್ತಿರುವಾಗಲೇ ಹೇಮಂತ "ಗಿರೀಶ ಒಂದು ಕೆಲಸ ಮಾಡಿ. ಹೊಟ್ಟೆ ತುಂಬಾ ಭಾರವಾಗಿದೆ. ನೀವು ಸಂಜೆ ಆರು ಗಂಟೆಗೆ ಬಂದು ಕಂಡರೆ ಸಾಕು" ಎಂದಾಗ ಆದ ಸಂತಸ ಅಷ್ಟಿಷ್ಟಲ್ಲ. ತನ್ನ ಮನದ ಇಂಗಿತ ಅರಿತ ಅವನ ಒಳಮನಸ್ಸಿಗೆ ಮನದಲ್ಲೇ ಥ್ಯಾಂಕ್ಸ್ ಹೇಳಿದ. ಗಿರೀಶನನ್ನು ಠಾಣೆ ಎದುರು ಇಳಿಸಿ ಹೇಮಂತ ತನ್ನ ಜೊತೆಗಾರರೊಂದಿಗೆ ರೂಮಿಗೆ ಬಂದಾಗ ಮೈ ಮನಸ್ಸು ಎರಡೂ ಒಂದು ಕ್ಷಣ ಹಾಸಿಗೆಯ ಸಹವಾಸ ಬೇಕೆಂದವು. ಹೇಮಂತನಿಗೆ ನಿರಾಕರಿಸಲು ಆಗಲಿಲ್ಲ. ಶರಣಾದ. ಪರಿಣಾಮ ಭರ್ತಿ ನಿದ್ದೆ.

ಕರೆಗಂಟೆ ಬಾರಿಸಿದಾಗಲೇ ಎಚ್ಚರ. ಅವನ ಸಂಗಡಿಗರಿಗೂ ಇದೇ ಅನುಭವ. ಒಬ್ಬರನ್ನೊಬ್ಬರು ನೋಡುತ್ತ ತಮ್ಮ ತಮ್ಮಲ್ಲೆ ನಾಚಿಕೊಂಡು ಮೇಲೆದ್ದರು. ಅಶೋಕ ಬಾಗಿಲು ತೆರೆದ. ಇನ್‌ಸ್ಪೆಕ್ಟರ್ ಗಿರೀಶ ಒಳ ಬಂದ. ಅವನನ್ನು ಕೂಡಿಸಿ ಫೋನ್ ಮಾಡಿ ನಾಲ್ಕು ಸ್ಟ್ರಾಂಗ್ ಕಾಫಿ ತರಲು ಹೇಳಿದ ಅಶೋಕ. ಅಷ್ಟರಲ್ಲಿ ಹೇಮಂತ ಬಾತ್‌ರೂಮಿನಿಂದ ಹೊರಬಂದು ಗಿರೀಶನ ವಂದನೆಗೆ ಪ್ರತಿವಂದನೆ ಸಲ್ಲಿಸಿದ. ಅವರಿಬ್ಬರನ್ನೂ ಮಾತಿಗೆ ಬಿಟ್ಟು ಅಶೋಕ ಬಾತರೂಮು ಸೇರಿದ. ಆತ ಹೊರ ಬಂದಾಗ ಕಾಫಿ ಬಂದಿತ್ತು. ಮಾತನಾಡುತ್ತ ಕಾಫಿ ಕುಡಿದರು.

"ಮೇಜರ ಸಾಹೇಬ್, ಈ ನಾಲ್ಕು ಜನ ಬಾಲಾಪರಾಧಿಗಳು ಆರು ತಿಂಗಳ ಅವಧಿಯಲ್ಲಿ ಒಂದೇ ಠಾಣೆಯ ಒಂದೇ ಪೋಲೀಸ್ ಅಧಿಕಾರಿಯಿಂದ ಬಂಧಿತರಾಗಿದ್ದರು"

"ಯಾರು ಆ ಪೋಲೀಸ್ ಅಧಿಕಾರಿ?"

"ಕರಿನಿಂಗಯ್ಯ ಅಂತ...."

"ಈಗ ಅವರೆಲ್ಲಿದ್ದಾರೆ?"

"ಸ್ವರ್ಗನರಕಗಳ ಮಧ್ಯೆ ಎಲ್ಲೋ ಹಾರಾಡುತ್ತಿರಬೇಕು"

"ಅಂದ್ರೆ... ಅವರು...."

"ಹೌದು. ಇವರೆಲ್ಲ ಜೈಲು ಸೇರಿದ ಎರಡೇ ತಿಂಗಳಲ್ಲಿ ಅವರು ಜೀಪ್ ಅಪಘಾತದಲ್ಲಿ ಅಸು ನೀಗಿದರು"

"ಜೀಪ್ ಅಪಘಾತಕ್ಕೆ ಕಾರಣವೇನೆಂದು ಗೊತ್ತಾಯಿತೆ?"

"ಇಲ್ಲ. ಅದಕ್ಕೆಂದೇ ಒಬ್ಬ ವರಿಷ್ಠ ಪೋಲೀಸ್ ಅಧಿಕಾರಿಯನ್ನು ನಿಯಮಿಸಲಾಗಿತ್ತು. ಅವರ ಸಹಾಯಕ್ಕೆ ಓರ್ವ ಪೋಲೀಸ್ ಇನ್‌ಸ್ಪೆಕ್ಟರನ್ನು ನಿಯಮಿಸಿದ್ದರು"

"ಪರಿಣಾಮವೇನಾಯಿತು? ವರದಿ ಎಲ್ಲಿದೆ?"

"ಎಲ್ಲಾ ಭೂಗತವಾಯಿತು. ವರಿಷ್ಠ ಪೋಲೀಸ್ ಅಧಿಕಾರಿಯ ಅಪಹರಣವಾಯಿತು. ನಾಲ್ಕು ದಿನಗಳ ನಂತರ ಅವರ ಶವ ಚರಂಡಿಯಲ್ಲಿ ಬಿದ್ದಿತ್ತು. ಪೋಲೀಸ್ ಇನ್‌ಸ್ಪೆಕ್ಟರ್ ಇಲ್ಲಿಂದ ವರ್ಗ ಮಾಡಿಸಿಕೊಂಡರು. ವರದಿ ಎಲ್ಲಿ ಹೋಯಿತೆಂಬುದು ಯಾರಿಗೂ ತಿಳಿದಿಲ್ಲ"

"ಹಾಗಾದರೆ ಇದೊಂದು ಚಿದಂಬರ ರಹಸ್ಯ. ಇದನ್ನು ಭೇದಿಸಿದಾಗಲೇ ನಮಗೆ ದಾರಿ ದೊರೆಯುವದು ಎಂದಂತಾಯಿತು. ಇರಲಿ, ಈ ನಾಲ್ಕು ಹುಡುಗರು ಇದೇ ಊರಲ್ಲಿದ್ದಾರಲ್ಲವೇ?"

"ಅದರ ಬಗ್ಗೆ ಇನ್ನು ಏನೂ ತಿಳಿದಿಲ್ಲ. ಇಬ್ಬರನ್ನು ಅದೇ ಕೆಲಸದ ಮೇಲೆ ಬಿಟ್ಟಿದ್ದೇವೆ. ವಿಷಯ ತಿಳಿಯುತ್ತಲೇ ತಮಗೆ ಹೇಳಿಕಳಿಸುವೆ"

"ಹೇಳಿಕಳಿಸುವದು ಬೇಡ. ಖುದ್ದಾಗಿ ನೀವೇ ಬಂದು ಹೋಗಬೇಕು"

"ಓ.ಕೆ. ಮುಂದೆ.."

"ಏನೂ ಇಲ್ಲ. ನೀವಿನ್ನು ಹೊರಡಬಹುದು"

ಗಿರೀಶ ಹೊರಟು ಹೋಗುತ್ತಿದ್ದಂತೆ ಆರಾಮ ಕುರ್ಚಿಯಲ್ಲಿ ದೇಹವನ್ನು ಹಾಯಾಗಿ ಪಸರಿಸಿದ ಮೇಜರ ಗಾಢವಾದ ಆಲೋಚನೆಯಲ್ಲಿ ಲೀನವಾದ. ಅವನ ಯೋಚನಾಸಮಾಧಿಗೆ ಭಂಗ ತಾರದೇ ಅಶೋಕ ಮತ್ತು ಸುಷಮಾ ಕೈಗೆ ಸಿಕ್ಕ ಪುಸ್ತಕ ಓದುತ್ತಾ ಕುಳಿತರು.

ಅರ್ಧಗಂಟೆ ಕಳೆಯುತ್ತಲೂ ಚಟಕ್‌ನೆ ಮೇಲೆದ್ದ ಮೇಜರ.

"ನಾವು ಮೂವರೂ ಬೇರೆ ಬೇರೆಯಾಗಿ ಹೊರಬೀಳುವಾ. ಮೂರು ಹುಡುಗರ ಬಗ್ಗೆ ಬೇರೆ ಬೇರೆಯಾಗಿ ವಿಷಯ ಸಂಗ್ರಹಿಸೋಣ. ಮೊದಲು ಅಶೋಕ ಹೊರಗೆ ಬೀಳಲಿ. ಆಮೇಲೆ ಸುಷಮಾ. ನಿಮ್ಮಿಬ್ಬರ ನಂತರದ ಸರದಿ ನನ್ನದು..."

ಸುಷಮಾಳ ಸುಂದರ ತುಟಿಗಳ ಮೇಲೆ ನಗೆ ಮಿಂಚಿ ಮಾಯವಾಯಿತು. ಮೇಜರನ ಮನದಿಂಗಿತ ಆಕೆಗೆ ತಿಳಿದಿತ್ತು. ಅಶೋಕನನ್ನು ಮೊದಲು ಸಾಗ ಹಾಕಿ ನಂತರ ಆತ ಸುಷಮಾಳ ಬಳಿ ಬರುವವನಿದ್ದ ಅವಳ ಸಾಮೀಪ್ಯ ಬಯಸಿ.

ಅವಳ ಊಹೆ ಸುಳ್ಳಾಗಲಿಲ್ಲ. ಅಶೋಕ ಹೊರಗೆ ಕಾಲಿಡುವುದೇ ತಡ ಬಾಗಿಲಿಕ್ಕಿ ಸುಷಮಾಳೆಡೆ ಹೊರಳಿದಾಗ ಅವಳ ದೇಹದ ತುಂಬೆಲ್ಲ ಮಧುರ ಝೇಂಕಾರದ ಅಲೆಗಳು ಎದ್ದು ಆಕೆ ನವವಧುವಿನಂತೆ ನಾಚಿ ಮುದ್ದೆಯಾಗಿ ಅವನಪ್ಪುಗೆಯಲ್ಲಿ ಕರಗಿ ಹೋದಳು. ಅವಳ ತುಟಿಗಳಿಂದ ನಿಧಾನವಾಗಿ ಮಧು ಹೀರಿದ ಹೇಮಂತ ಅವಳ ದೇಹದ ಬಿಸಿಯ ಹಿತ ಪಡೆದು ಪುಳಕಿತನಾದ. ಮುಂದಿನ ಕ್ಷಣ ಅವರಿಬ್ಬರೂ ಇಹವನ್ನು ಮರೆತಿದ್ದರು....

ಹೇಮಂತ ಎಷ್ಟೇ ಮೈಮರೆಯುವ ಕ್ಷಣಗಳಲ್ಲೂ ಕರ್ತವ್ಯವನ್ನು ಮರೆಯುತ್ತಿರಲಿಲ್ಲ. ಅದರಂತೆಯೇ ಸುಷಮಾಳೊಂದಿಗೆ ಬೆರೆತು ತೃಪ್ತಿ ಪಡುತ್ತಿದ್ದರೂ ಆತ ಜಾಗೃತನಾಗಿದ್ದ. ಮೈಮರೆತಿರಲಿಲ್ಲ. ಹೀಗಾಗಿ ಹದಿನೈದು ನಿಮಿಷಗಳಲ್ಲೇ ಅವನಿಂದ ಬೇರ್ಪಟ್ಟು ಸುಷಮಾ ಹತ್ತು ನಿಮಿಷಗಳಲ್ಲಿ ಸಿದ್ಧಳಾಗಿ ಹೊರ ಬಿದ್ದಳು. ಆಕೆ ಹೋದ ಅರ್ಧಗಂಟೆಗೆ ಹೇಮಂತ ಸಿದ್ಧನಾದ.

ಆತನ ಪಾಲಿಗೆ ಬಂದ ಹೆಸರು... ಬಸವರಾಜ.

ವಿಲಾಸ-ಪಾಲ್ ಬಿಲ್ಡಿಂಗ್ ಗಾಂಧೀನಗರ.

ಏಕೋ ಒಂದು ಕ್ಷಣ ಅವನ ಮನಸ್ಸು ಅಳುಕಿತು. ಯಾವದೋ ಅನಿಷ್ಟ ಕಾದು ನಿಂತಿದೆ ಎಂಬ ವಿಚಾರ ಅವನ ಮನದಲ್ಲಿ ಸುಳಿಯುತ್ತಲೇ ಇತ್ತು.

ಅದಾವ ಅನಿಷ್ಟವಿರಬಹುದು?

ಅದು ಊಹೆಗೂ ನಿಲುಕದ ವಿಷಯ....

ಲಕ್ಷ್ಮೀ ಟಾಕೀಜ ಹಿಂಭಾಗದಲ್ಲಿರುವ ಚಂದ್ರಕಾಂತನ ಮನೆ ಹುಡುಕಿಕೊಂಡು ಸುಷಮಾ ಹೊರಟಿದ್ದಳು. ಅವನ ಬಗ್ಗೆ ದಾಖಲೆಯಾಗಿರುವ ಎಲ್ಲಾ ವಿಷಯ ಚೆನ್ನಾಗಿ ನೆನಪಿನಲ್ಲಿಟ್ಟುಕೊಂಡಿದ್ದರಿಂದ ಯಾವ ತೊಂದರೆ ಬಂದರೂ ಆಕೆ ಎದುರಿಸಲು ಸಿದ್ಧಳಾಗಿದ್ದಳು.

ಲಕ್ಷ್ಮಿ ಟಾಕೀಜ ಸಿಗಲು ತೊಂದರೆಯಾಗಲಿಲ್ಲ. ಆಟೋದವ ಅವಳನ್ನು

ಟಾಕೀಜ ಮುಂದೆ ಇಳಿಸಿ ಆಕೆ ಕೊಟ್ಟಷ್ಟು ಇಸಿದಿಕೊಂಡು ಕಿಮಕ್ ಎನ್ನದೆ ಅಲ್ಲಿಂದ ಕಂಬಿ ಕಿತ್ತ. ಅವಳ ಸುಂದರ ಮುಖ ನೋಡಿಯೇ ಆತ ಎಲ್ಲಾ ಮರೆತಿದ್ದ. ಇಂಥ ಸುಂದರಿ ಒಪ್ಪಿದರೆ ಪುಕ್ಕಟೆಯಾಗಿ ಶಹರದ ತುಂಬೆಲ್ಲ ಓಡಾಡಿಸಲು ಸಿದ್ಧನಿರುವ ಆತನಿಗೆ ದುಡ್ಡು ಕೈಗೆ ಬಂದಾಗ ಸಂತಸವಾಗುವದರೊಂದಿಗೆ ಗಿರಾಕಿ ಕಳೆದುಕೊಂಡಿದ್ದಕ್ಕೆ ದುಃಖವೂ ಆಗದಿರಲಿಲ್ಲ.

ಅದೊಂದು ಚಿಕ್ಕ ಗಲ್ಲಿ. ಒಂದು ಆಟೋ ಸಹ ಹೋಗಿ ಬರಲು ಆಗದಷ್ಟು ಸಂಕೀರ್ಣವಾದುದು. ಎಡಬಲಕ್ಕೆ ಸಾಲು ಮನೆಗಳು. ಎಡಬಲಕ್ಕು ಮೆಟ್ಟಿಲು. ಅಡ್ಡಾಡಲಷ್ಟೇ ದಾರಿ. ದಾರಿಯಲ್ಲೂ ರಂಗೋಲಿ. ತುಳಿದುಕೊಂಡು ಹೋಗದೇ ಬೇರೆ ದಾರಿಯೇ ಇರಲಿಲ್ಲ. ಒಂದು ಮನೆಯೆದುರು ನಿಂತು "ಯಾರಿದ್ದೀರ?" ಎಂದು ಕೂಗಿದಳು ಇನಿದನಿಯಲ್ಲಿ. ದಾಡಿ ಮಾಡಿಕೊಳ್ಳುತ್ತಿದ್ದ ಇಪ್ಪತ್ತರ ತರುಣನೊಬ್ಬ ಹೊರಬಂದ. ತನ್ನ ಮನೆಯೆದುರು ನಿಂತಿರುವ ರೂಪಸಿಯನ್ನು ಕಂಡು ಅವನ ಬಾಯಿಯಿಂದ ಮಾತೇ ಹೊರಡಲಿಲ್ಲ. ಇಂಥ ಸುಂದರಿಯನ್ನು ಆತ ಜೀವಮಾನದಲ್ಲೇ ಕಂಡಿರಲಿಲ್ಲ.

"ಬನ್ನಿ ಒಳಗೆ, ಏನು ಬೇಕಾಗಿತ್ತು?" ಜೊಲ್ಲು ಸುರಿಸುತ್ತ ಕೇಳಿದ. ಅವನ ಧ್ವನಿ ಕೇಳಿದ ಒಳಗಿದ್ದ ಅವನ ತಾಯಿ ಹೊರಗೆ ಬಂದದ್ದು ತಿಳಿಯಲಿಲ್ಲ ಆಕೆಗೆ.

"ನನಗೆ ಚಂದ್ರಕಾಂತನ ಮನೆ ಬೇಕಾಗಿತ್ತು"

"ಯಾವ ಚಂದ್ರಕಾಂತ?"

"ಅದೇ ಟಿ.ವಿ. ಟೇಪರಿಕಾರ್ಡರ್ ರಿಪೇರಿ ಮಾಡ್ತಾನಲ್ಲ ಅವನೇ' ಇಷ್ಟಾಗುವದರೊಳಗೆ ಅವನ ಮಹಾತಾಯಿ ಮಧ್ಯೆ ಪ್ರವೇಶಿಸಿಬಿಟ್ಟಳು.

"ಏ ಮಹಾತಾಯಿ ನಿನಗೆ ಕೈ ಮುಗೀತೇನೆ. ಇಲ್ಲಿ ಯಾವ ಚಂದ್ರಕಾಂತನೂ ಇಲ್ಲ. ಅವನ ಬಗ್ಗೆ ನಮಗೇನೂ ಗೊತ್ತಿಲ್ಲ. ಹೋಗು ಮಹಾರಾಯ್ತಿ. ಏ.. ಬಾ ಒಳಗೆ. ನೀರು ಕುದೀತಾ ಇದೆ. ಮೊದಲು ಸ್ನಾನ ಮಾಡು"

ಸುಷಮಾಳಿಗೆ ಮಾತು ಸಹ ಆಡಲು ಆಸ್ಪದ ಕೊಡದೇ ಮಗನನ್ನು ಒಂದು ದೃಷ್ಟಿಯಿಂದ ಎಳೆದುಕೊಂಡೇ ಒಳಗೆ ಹೋಗಿ "ರಪ್" ಎಂದು ಬಾಗಿಲು ಮುಚ್ಚಿಕೊಂಡಳು.

ಈ ಬಗೆಯ ವರ್ತನೆ ಸುಷಮಾಳಿಗೆ ಹೊರತಲ್ಲ. ಹೀಗಾಗಿ ಆಕೆ ಕೋಪ ಮಾಡಿಕೊಳ್ಳದೆ ಮುಂದಿನ ಮನೆಯತ್ತ ನಡೆದಳು. ಅರ್ಧಗಂಟೆ ತಿರುಗಿದ್ದು

ವ್ಯರ್ಥವಾಯಿತು. ಚಂದ್ರಕಾಂತನ ಬಗ್ಗೆ ಯಾರೂ ಬಾಯಿ ಬಿಡಲಿಲ್ಲ. ಎಲ್ಲರಿಗೂ ಗೊತ್ತಿದ್ದ ವಿಷಯ. ಗೊತ್ತಿದ್ರೂ ಬಾಯಿ ಬಿಡಲು ಏನೋ ಒಂದು ಬಗೆಯ ಭಯ. ಅವರೊಂದಿಗೆ ಮಾತನಾಡುವದು, ಬಂಡೆಗಲ್ಲಿಗೆ ತಲೆ ಚಚ್ಚಿಕೊಳ್ಳುವದು ಎರಡೂ ಒಂದೇ ಎಂದುಕೊಂಡ ಸುಷಮಾ ಮರಳಿ ನಡೆದಳು ಲಕ್ಷ್ಮೀ ಟಾಕೀಜಿನತ್ತ.

"ರೀ ಮೇಡಮ್ ಸ್ವಲ್ಪ ನಿಲ್ಲಿ" ಧನಿ ಕೇಳಿ ಹೊರಳಿದಳು. ಅದೇ ಹುಡುಗ ಟವೆಲ್ ಸುತ್ತಿಕೊಂಡು ಓಡಿ ಬಂದಿದ್ದ. ಬಹುಶಃ ಬಾತ್‌ರೂಮಿನಿಂದ ಓಡಿ ಬಂದಿರಬೇಕು. ಸುಷಮಾ ಅವನತ್ತ ಸರಿದಳು.

"ದಯವಿಟ್ಟು ನಮ್ಮ ತಾಯಿ ಬಗ್ಗೆ ತಪ್ಪು ತಿಳಿಬೇಡಿ. ಚಂದ್ರಕಾಂತನ ಬಗ್ಗೆ ಮಾತನಾಡಿದ್ರೆ ಆ ಜಗ್ಗು ಚೂರಿಯಿಂದ ಹೊಟ್ಟೆ ಹರಿದು ಬಿಡುತ್ತಾನೆ.. ಅದ್ಕೆ.."

"ಜಗ್ಗು-ಜಗ್ಗು ಅಂದ್ರೆ ಯಾರಾತ?"

"ಅವನೊಬ್ಬ ದಾದಾ. ರಸೂಲಪುರ ಗಲ್ಲಿಯಲ್ಲಿರುತ್ತಾನೆ. ಜಾಗೀರಖಾನ್ ಅವನ ಹೆಸರು. ಅದು ಜಗ್ಗು ಆಗಿದೆ"

"ಅವನಿಗೂ ಈ ಚಂದ್ರಕಾಂತನಿಗೂ ಏನು ಸಮ್ಮಂಧ?"

"ಚಂದ್ರಕಾಂತ ರಿಮಾಂಡ್‌ಹೋಮಿನಿಂದ ಬಂದ ಮೇಲೆ ನಾಲ್ಕು ದಿನ ಹೊರಗೆ ಹೋಗಲೇ ಇಲ್ಲ. ನಾಲ್ಕಾರು ಜನ ಕರೆಯಲು ಬಂದ್ರು. ಆದ್ರೂ ಹೋಗಲಿಲ್ಲ. ಕೊನೆಗೆ ಜಗ್ಗುದಾದಾನೇ ಬಂದು ಅವನನ್ನು ಒದ್ದು-ಹೊಡೆದು ಎಳೆದೊಯ್ದ. ಹೋಗೂ ಮುಂದೆ ಯಾರಾದ್ರೂ ಬಾಯಿ ಬಿಟ್ರೆ ಚೂರಿಯಿಂದ ಎದೆ ಸೀಳ್ತೀನೆ ಎಂದ ಅದ್ಕೆ.."

ಈಗ ಸುಷಮಾಳಿಗೆ ಎಲ್ಲ ಅರ್ಥವಾಯಿತು.

"ಥ್ಯಾಂಕ್ಸ್...ನಿಮ್ಮಿಂದ ತುಂಬಾ ಉಪಕಾರವಾಯ್ತು"

ಅವನ ಮುಖ ಅರಳಿ ಊರಗಲವಾಯ್ತು. ಆ ಸುಂದರ ತರುಣಿಯ ಬಾಯಿಯಿಂದ 'ಥ್ಯಾಂಕ್ಸ್' ಶಬ್ದ...ಆಹಾಹಾ..

"ಇನ್ನೊಂದು ಉಪಕಾರ ಮಾಡ್ತೀರಾ?" ಆಕೆ ಬೇಕೆಂತ್ಲೇ ಅಂಗಲಾಚಿದಳು.

"ಹೇಳಿ ಮೇಡಂ"

"ಜಗ್ಗು ಎಲ್ಲಿ ಸಿಗ್ತಾನೆ ಹೇಳ್ತೀರಾ?"

"ರಸುಲಪುರಗಲ್ಲಿಯಲ್ಲಿ ಮಟನ್ ಶಾಪ್ ಇದೆ. ಅದೇ ಅವನ ಅಡ್ಡೆ. ಅಯ್ಯೋ ಅಮ್ಮಾ..." ಆತ ಓಡಿದ ಒಂದೇ ಓಟಕ್ಕೆ.

ಸುಷಮಾ ಸ್ವಲ್ಪ ಯೋಚಿಸಿದಳು. ಮುಂದೇನು? ರೂಮಿಗೆ

ಹೊರಡುವದೋ?

ಜಗ್ಗುವನ್ನು ಭೇಟಿಯಾಗುವದೋ? ಮೇಜರ ರೂಮಿನಲ್ಲಿಲ್ಲವೆಂಬುದಂತೂ ತಿಳಿದಿತ್ತು. ಕೊನೆಗೆ ಆದದ್ದಾಗಲಿ ಎಂದು ಜಗ್ಗುದಾದಾನನ್ನು ಭೇಟಿಮಾಡುವ ನಿರ್ಣಯ ತೆಗೆದುಕೊಂಡಳು. ಆಟೋದಲ್ಲಿ ಕುಳಿತುಕೊಳ್ಳುತ್ತ ರಸುಲಪುರಗಲ್ಲಿ ಎಂದಳು. ಆಟೊ ಓಡಿತು. ಅಲ್ಲಲ್ಲಿ ಸುತ್ತು ಹೊಡೆದು ಒಂದು ಕೊಳಕು ಗಲ್ಲಿಯೆದುರು ನಿಂತಿತು. ಕೆಳಗಿಳಿದು ಐದು ರೂಪಾಯಿ ಕೊಟ್ಟು ಚಿಲ್ಲರೆಗೆ ಕೈ ಚಾಚದೆ ಎದುರಿದ್ದ ಸ್ಟೋರ್‌ಗೆ ನುಗ್ಗಿ ಚಿಕ್ಕ ಬಾಸ್ಕೆಟ್ ಕೊಂಡು ಗಲ್ಲಿಯೊಳಗೆ ನಡೆದಳು.

ಕೊಳಕು ಗಲ್ಲಿಯಲ್ಲಿ ವಾಸಿಸುವ ಕೊಳಕು ಜನ ಪಿಚ್ಚು ತುಂಬಿದ ತಮ್ಮ ಕಣ್ಣುಗಳನ್ನೆತ್ತಿ ಅವಳೆಡೆ ನೋಡಿದರು. ಚಿತ್ರತಾರೆಯಂತಿರುವ ಇವಳಾರು? ಇವಳಿಗೆ ಇಲ್ಲೇನು ಕೆಲಸ? ನೂರೆಂಟು ಯೋಚನೆಗಳು....

ಅತ್ತಿತ್ತ ನೋಡುತ್ತ ಸುಷಮಾ ನಡೆದಾಗ ಎದುರಿಗೇ ಕಂಡು ಬಂತು ಮಟನ್‌ಶಾಪ್ ಎಂದು ಅಡ್ಡಾದಿಡ್ಡಿಯಾಗಿ ಬರೆದ ಬೋರ್ಡ್. ಅದೊಂದು ಶೆಡ್. ದೊಡ್ಡ ಗಟಾರದ ದಂಡೆ ಮೇಲೆ ಹತ್ತಾರು ಜಿಂಕ್ ಶೀಟಗಳಿಂದ ಕಟ್ಟಿದ ಸುಮಾರು ದೊಡ್ಡದಾದ ಅಂಗಡಿ. ಅಂಗಡಿ ಹೊರಗಡೆ ಕಟ್ಟೆ ಮೇಲೆ ಮಟನ್ ತೂಗು ಹಾಕಿ ವ್ಯಾಪಾರಕ್ಕೆ ಕುಳಿತವ ಸುಷಮಾ ಕಡೆ ನೋಡಿದ ಆಸಕ್ತಿಯಿಂದ.

''ಆಧಾ ಕಿಲೋ'' ಸಂಕ್ಷಿಪ್ತವಾಗಿ ನುಡಿದಳು ಸುಷಮಾ ಸುತ್ತಮುತ್ತ ಹದ್ದಿನ ದೃಷ್ಟಿ ಬೀರುತ್ತ.

''ಕೌನಸಾ? ಛೋಟಾ ಯಾ ಬಡಾ?'' ಆತ ಕೇಳಿದ.

''ಛೋಟಾ.. ಏಕದಂ ಫಸ್ಟ್‌ಕ್ಲಾಸ್''

ಎರಡು ನಿಮಿಷಗಳಲ್ಲಿ ಅರ್ಧ ಕಿಲೋ ಮಟನ್ ಪೆಕೆಟ್ 2 ಆಕೆಯ ಬಾಸ್ಕೆಟ್ ಸೇರಿತು. ಮಟನ್ ಹಣದೊಂದಿಗೆ ಐದು ರೂಪಾಯಿ ಹೆಚ್ಚಿಗೆ ಕೊಡುತ್ತ ಸುಷಮಾ ಪಿಸುದನಿಯಲ್ಲಿ ಕೇಳಿದಳು.

''ಜಗ್ಗುದಾದಾ ಎಲ್ಲಿ? ನಾನವನನ್ನ ನೋಡಬೇಕು''

ಆತ ಮಾತನಾಡಲಿಲ್ಲ ನಿಜ. ಆದರೂ ಉತ್ತರ ಬಂತು.

''ನಾನಿಲ್ಲೇ ಇರುವೆ ಮೇರಿ ಜಾನ್. ಹೇಳು ಏನಾಗಬೇಕು?'' ಬೆಚ್ಚಬಿದ್ದ ಸುಷಮಾ ಎದುರಿಗೇ ನೋಡಿದಳು. ಅರ್ಧ ತೆರೆದ ಶೆಡ್ ಬಾಗಿಲ ಮಧ್ಯೆ

ನಿಂತಿದ್ದ ಹುರಿಕಟ್ಟಾದ ಮೈಯ ಕಪ್ಪುವರ್ಣದ ಒಡೆಯ. ಚಪ್ಪಟೆಯ ಮೂಗು, ಕೆಂಪಗಿನ ಕಣ್ಣುಗಳು. ಹರಿದ ತುಟಿಯೊಳಗಿಂದ ಹೊರಬಂದ ಎರಡು ಹಲ್ಲುಗಳು, ತಲೆಯಲ್ಲಿ ಒಂದು ಕೂದಲು ಇಲ್ಲ. ಮುಖದ ತುಂಬಾ ಮೀಸೆ....

ತಾನು ಅಪಾಯದಲ್ಲಿ ಸಿಲುಕಿಕೊಂಡೆ ಎಂದು ಅರ್ಥವಾದದ್ದು ತುಂಬಾ ವಿಲಂಬವಾಗಿ. ಅವಳ ಸುತ್ತ ಮುತ್ತ ಸುಮಾರು ಎಂಟು ಜನ ರೌಡಿಗಳು ಕವರ ಮಾಡಿದರು ಎಲ್ಲರ ಕೈಯಲ್ಲಿ ಚಿತ್ರವಿಚಿತ್ರ ಆಯುಧಗಳು.. ಅಸಹ್ಯನಗೆ ನಗುತ್ತ ಹತ್ತು ಹೆಜ್ಜೆ ಮುಂದೆ ಬಂದ ಜಗ್ಗುದಾದಾ.

ಎರಡನೇ ಮುಖ್ಯ ಬೀದಿ. ಮೂರನೇ ಅಡ್ಡರಸ್ತೆ ರಜತಗಿರಿ. ಗಂಗಾಧರನ ವಿಳಾಸ ಅಶೋಕನಿಗೆ ಚೆನ್ನಾಗಿ ನೆನಪಿತ್ತು. ಆತ ಕುರುಡ ಎಂಬುದೂ ಆತ ತಿಳಿದಿದ್ದ. ರಿಕ್ಷಾದಿಂದ ಮುಖ್ಯ ಬೀದಿಗೆ ಕೆಳಗಿಳಿದ ಆತ ಬಾಡಿಗೆ ಕೊಟ್ಟು ಕಳಿಸಿ ಒಂದೈದು ನಿಮಿಷ ಅತ್ತಿತ್ತ ಸುಳಿದಾಡಿದ. ಆಮೇಲೆ ನಿಧಾನವಾಗಿ ಎರಡನೇ ಮುಖ್ಯ ಬೀದಿಯತ್ತ ಹೆಜ್ಜೆ ಹಾಕಿದ.

ನಗರಸಭೆಯವರು ಪ್ರತಿಯೊಂದು ಬೀದಿಗೂ ನಂಬರ್‌ಗಳನ್ನು ಬರೆಸಿದ್ದರಿಂದಾಗಿ ಎರಡನೇ ಮುಖ್ಯ ಬೀದಿಯ ಮೂರನೇ ಅಡ್ಡರಸ್ತೆ ಹುಡುಕುವಲ್ಲಿ ಯಾವ ತೊಂದರೆಯೂ ಆಗಲಿಲ್ಲ. ಆತ ಯಾರನ್ನು ಕೇಳಲಿಲ್ಲ ಸಹ. ತೊಂದರೆಯುಂಟಾದದ್ದು ಮೂರನೇ ಅಡ್ಡರಸ್ತೆಗೆ ಬಂದಾಗ. ಗಂಗಾಧರನ ಮನೆ ನಂಬರ ಗೊತ್ತಿರಲಿಲ್ಲ. ಸಾಲುಸಾಲಾಗಿದ್ದ ನೂರಾರು ಮನೆಗಳಲ್ಲಿ ಅವನ ಮನೆ ಹೇಗೆ ಕಂಡುಹಿಡಿಯುವದು? ಹೇಗಾದರೂ ಮಾಡಿ ಕಂಡು ಹಿಡಿಯಲೇಬೇಕಾಗಿತ್ತು. ಅಲ್ಲಿಯವರೆಗೂ ಬಂದು ಹಾಗೇ ಹೋಗುವುದೇ?

ಬಾಗಿಲು ತೆರೆದ ಮನೆಯೊಂದರ ಮುಂದೆ ನಿಂತು ಕೂಗಿದ. ವಯಸ್ಸಾದ ಹೆಣ್ಣು ಮಗಳೊಬ್ಬಳು ಬಂದು 'ಏನಪ್ಪಾ' ಎಂದು ಕೇಳಿದಳು. "ಅಮ್ಮಾ ನನಗೆ ಗಂಗಾಧರನ ಮನೆ ಎಲ್ಲಿದೆ ಅಂತ ಹೇಳ್ತೀರಾ. ಆತನಿಗೆ ಕಣ್ಣಿಲ್ಲ ಕುರುಡ ನೋಡಿ" ವಿನಯದಿಂದ ಕೇಳಿದ ಅಶೋಕ. ಗಂಗಾಧರನ ಹೆಸರು ಕಿವಿಗೆ ಬೀಳುವದೊಂದೇ ತಡ ಆಕೆ ಚಳಿ ಬಂದವರಂತೆ ಗಡಗಡ ನಡುಗಿ "ನನಗೆ ಗೊತ್ತಿಲ್ಲಪ್ಪ" ಎಂದು ಹೇಳುತ್ತ ಮುಂದಿನ ಬಾಗಿಲು ರಪ್ ಎಂದು

ಮುಚ್ಚಿಕೊಂಡಳು. ಇದೇ ಅನುಭವ ಮತ್ತೆ ಮೂರು ನಾಲ್ಕು ಮನೆಗಳಲ್ಲಿ ಆದಾಗ ಅಶೋಕ ಚಿಂತಿತನಾದ. ಯಾರಿಂದ ತಿಳಿದುಕೊಳ್ಳುವದು?

ಒಮ್ಮಿಂದೊಮ್ಮೆಲೆ ಹೊಳೆದದ್ದು... ದೊಡ್ಡವರ ಬದಲು ಚಿಕ್ಕವರನ್ನು ಕೇಳಿದರೆ ಸಿಕ್ಕರೂ ಸಿಕ್ಕಬಹುದು.

ಮುಂದಾತ ತಡ ಮಾಡಲಿಲ್ಲ.

ಅಲ್ಲೇ ಗೋಲೀಯಾಡುತ್ತಿದ್ದ ನಾಲ್ಕಾರು ವರ್ಷದ ಹುಡುಗರ ಬಳಿ ಹೋಗಿ ಕೇಳಿದ..."ಗಂಗಾಧರನ ಮನೆ ಎಲ್ಲಿದೆ.. ಯಾರು ಹೇಳ್ತೀರಿ?"

ಗೋಲಿ ಆಡುವುದನ್ನು ಬಿಟ್ಟು ಹುಡುಗರು ಅವನೆಡೆ ನೋಡಿದರು. ಅವರಿಗೆ ಗೊತ್ತಿದ್ದರೂ ಹೇಳಲು ಭಯ. ಅಶೋಕ ಮತ್ತೆ ಹೇಳಿದ. "ನೀವೇನೂ ಭಯಪಡಬೇಡಿ ನಾನಾತನ ಸೋದರಮಾವ ಹೇಳಿ ಯಾರು ಹೇಳ್ತೀರೋ ಅವರಿಗೆ ಹತ್ತು ಗೋಲಿ ನಾನು ಕೊಡಿಸುವೆ"

ಈ ಬಾರಿ ಅವನ ಉಪಾಯ ಫಲಿಸಿತು. ಹತ್ತು ಗೋಲಿಗಳ ಆಸೆಗೆ ಒಬ್ಬ ಹುಡುಗ ಮುಂದೆ ಬಂದ. ಅಶೋಕ ಅವನ ಕೈಗೆ ಒಂದು ರೂಪಾಯಿ ಇಟ್ಟು "ಆಮೇಲೆ ಗೋಲೀ ತೆಗೆದುಕೊ ಈಗ ನನಗೆ ಮನೆ ತೋರಿಸು.." ಎಂದ.

ರೂಪಾಯಿ ಆಸೆ. ಹುಡುಗ ಜಿಗಿಯುತ್ತಾ ನೆಗೆಯುತ್ತಾ ಮುನ್ನಡೆದ. ಇಪ್ಪತ್ತು ಮೂವತ್ತು ಮನೆ ದಾಟಿ ಒಂದು ಕಡೆ ಬಂದು ನಿಂತು ಬೆರಳು ಮಾಡಿ ತೋರಿಸಿ "ಇದೇ ಕಾಂಪೌಂಡ್, ಮನೆ ಹಿಂಭಾಗದಲ್ಲಿದೆ"

ಎಂದ. "ಹೆದರಬೇಡ ಮರಿ.... ನನ್ನ ಜೊತೆ ಬಾ" ಅಶೋಕ ಒತ್ತಾಯ ಮಾಡಿದ ಮೇಲೆ ಆತ ಮತ್ತೆ ಒಳಗೆ ಬಂದ. ಗಂಗಾಧರನ ಮನೆಗೆ ಬೀಗ ಹಾಕಿತ್ತು. ಗಾಬರಿಯಾಯಿತವನಿಗೆ. ರೂಪಾಯಿ ಎಲ್ಲಿ ಕೈ ಬಿಟ್ಟು ಹೋಗುವುದೋ ಎಂದು. ಆದನ್ನರಿತ ಅಶೋಕ ಜೇಬಿನಿಂದ ಮತ್ತೊಂದು ರೂಪಾಯಿ ತೆಗೆದು ಅವನ ಕೈಗಿತ್ತು ಕೇಳಿದ.

"ಆತ ಬೇರೆ ಎಲ್ಲಿ ಸಿಗ್ತಾನೆ"

"ಗೊತ್ತಿಲ್ಲ. ಹಾಂ ಆತ ಜೈಭಾರತ ಕೇನ್‌ವರ್ಕ್ಸ್‌ನಲ್ಲಿ ಕೆಲಸ ಮಾಡ್ತಾನೆ. ಅಲ್ಲಿ ಕೇಳಿ ನೋಡಿ"

"ಜೈ ಭಾರತ್ ಕೇನ್‌ವರ್ಕ್ಸ್ ಎಲ್ಲಿದೆ?"

"ರಾಘವೇಂದ್ರ ಕಾಲೋನಿಗೆ ಹೋಗುವ ಮುನ್ನ ಸರ್ಕಲ್‌ನಲ್ಲಿದೆ. ಎಡಕ್ಕೆ"

"ಸರಿ ನೀನಿನ್ನು ಹೋಗು"

ಎರಡು ರೂಪಾಯಿ ಸಿಕ್ಕ ಸಂತಸ. ಆತ ಕುಣಿಯುತ್ತ ಓಡಿದ. ಅಶೋಕ ಹಾಗೇ ನಡೆಯುತ್ತ ಮುಖ್ಯಬೀದಿಗೆ ಬಂದ. ಅಲ್ಲಿಂದ ರಿಕ್ಷಾ ಪ್ರಯಾಣ ಜೈಭಾರತ್ ಕೇನ್‌ವರ್ಕ್ಸ್ ಕಡೆ. ಹದಿನೈದು ಇಪ್ಪತ್ತು ನಿಮಿಷಗಳಲ್ಲಿ ಆತ ಜೈಭಾರತ ಕೇನ್‌ವರ್ಕ್ಸ್ ಮುಂದಿದ್ದ.

ಅತಿ ದೊಡ್ಡದು ಆಗಿರದ ಅತೀ ಚಿಕ್ಕದೂ ಆಗಿರದ ಸುಮಾರಾದ ಅಂಗಡಿ. ದೂರದಿಂದಲೇ ಒಂದೈದು ನಿಮಿಷ ನಿರೀಕ್ಷಿಸಿದ. ನಾಲ್ಕು ಜನ ಕೆಲಸಗಾರರು. ಅವರಲ್ಲಿ ಗಂಗಾಧರನನ್ನಾತ ಸುಲಭವಾಗಿ ಗುರುತಿಸಿದ. ಕಪ್ಪು ಕನ್ನಡಕ ಹಾಕಿಕೊಂಡಿದ್ದ ಆತನ ಕೈ ಬೆರಳುಗಳು ಕುರ್ಚಿ ಹೆಣೆಯುವುದರಲ್ಲಿ ತೊಡಗಿದ್ದವು. ಕುರ್ಚಿ ಹಾಕಿಕೊಂಡು ಬಾಗಿಲಿಗೇ ಕುಳಿತಾತ ಮಾಲಿಕನಲ್ಲ ಮ್ಯಾನೇಜರ ಇರಬೇಕು ಎಂದಾತ ಊಹಿಸಿ ಮೆಲ್ಲನೆ ಅಂಗಡಿಯತ್ತ ಹೆಜ್ಜೆ ಹಾಕಿದ.

"ಬನ್ನಿ....ಬನ್ನಿ" ಎಂದಾತ ಸ್ವಾಗತಿಸಿದ ಮ್ಯಾನೇಜರ್. ಒಳಗೆ ಕಾಲಿಡುತ್ತ ಸುತ್ತಲೂ ನೋಡಿದ ಅಶೋಕ ಗಿರಾಕಿಯಂತೆ ವರ್ತಿಸಿದ.

"ನನಗೆ ನಾಲ್ಕು ಕೇನ್ ಕುರ್ಚಿ, ಒಂದು ಟೀಪಾಯ್ ಬೇಕೆನಿಸಿದೆ"

"ತುಂಬಾ ಸಂತೋಷ. ಕುಳಿತುಕೊಳ್ಳಿ ತೋರಿಸುತ್ತೇನೆ" ಮೇಲೆದ್ದ ಆತ ಮೂರು ನಾಲ್ಕು ಬಗೆಯ ಬೇರೆ ಬೇರೆ ಬೆಲೆಯ ಕೇನ್‌ಕುರ್ಚಿ ಮತ್ತು ಟೀಪಾಯ್ ತೋರಿಸಿದ. ನೋಡುತ್ತ ಅತ್ತಿತ್ತಾ ಅಡ್ಡಾಡಿ ಗಂಗಾಧರ ಇದ್ದಲ್ಲಿಗೆ ಬಂದ ಅಶೋಕ ಅಲ್ಲೇ ಕುಳಿತು ನಾಟಕ ಆರಂಭಿಸಿದ. ಮ್ಯಾನೇಜರನಿಗೆ ಬೇಜಾರು ಆಗುವಷ್ಟು ವಿಚಾರಣೆ ಮಾಡಿದ. ಹತ್ತಿಪ್ಪತ್ತು ನೋಡಿದ್ದೇ ನೋಡಿದ. ಆಡಿದ್ದೇ ಆಡಿದ. ಗಿರಾಕ ವ್ಯಾಪಾರ ಮಾಡದಿದ್ದರೂ ಬೇಡ ಹೊರಟುಹೋದರೆ ಸಾಕು ಅನ್ನುವವರೆಗೆ ಬೇಜಾರಾಗಿ ನಂತರ ಒಮ್ಮಿಂದೊಮ್ಮೆಲೇ "ನನಗೆ ನಿಮ್ಮ ಶಾಪಿನಲ್ಲಿಯ ಎಲ್ಲಾ ತರದ ಕುರ್ಚಿ ಮತ್ತು ಟೀಪಾಯ್ ಮನಸ್ಸಿಗೆ ಬಂದಿವೆ. ಎಲ್ಲಾ ಇರಲಿ" ಎಂದಾಗ ಮ್ಯಾನೇಜರನಿಗೆ ಮೂರ್ಛೆ ಬರುವಂತಾಗಿತ್ತು. ಎಲ್ಲಾ ಅಂದರೆ ಕನಿಷ್ಠ ಮೂವತ್ತು ನಲವತ್ತು ಸಾವಿರ ರೂಪಾಯಿಗಳ ವ್ಯಾಪಾರ.

ಮೆಲ್ಲನೇ ಕ್ಯಾಕರಿಸಿದ ಅಶೋಕ "ಸ್ವಲ್ಪ ನೀರು ಕೊಡ್ತೀರಾ?"

ಎಂದು ಕೇಳಿದ ವಿನಯದಿಂದ. "ಇರಿ. ನೀರು ಜೊತೆಗೆ ಟೀ ಸಹ ಹೇಳಿ ಬರುತ್ತೇನೆ" ಬೇಡ ಬೇಡವೆಂದರೂ ಓಡಿದ ಮ್ಯಾನೇಜರ್. ಅಶೋಕನಿಗೂ ಅದೇ ಬೇಕಾಗಿತ್ತು. ಗಂಗಾಧರನ ಕಿವಿಯಲ್ಲಿ ಹಗುರಾಗಿ ಪಿಸುರಿದ "ನಾನು ಪೊಲೀಸ್ ಇನ್‌ಸ್ಪೆಕ್ಟರ್.... ಮಾತಾಡಬೇಕಿತ್ತು"

ತುಂಬಾ ದೊಡ್ಡದಾದ ಶಾಪ್. ಟಿ.ವಿ.ಟೇಪ್‌ರಿಕಾರ್ಡರ್, ಟ್ರಾನ್‌ಸಿಸ್ಟರ್ ಅಲ್ಲದೆ ಎಲ್ಲ ಭಾಷೆಯ ಕ್ಯಾಸೆಟ್, ರಿಕಾರ್ಡ್‌ಪ್ಲೆಯರ ಮಾರುವ ಅಂಗಡಿ. ನಿಧಾನವಾಗಿ ಸುತ್ತುತ್ತ ನಡೆದರೆ ಎರಡು ಗಂಟೆ ಬೇಕಾಗುವಷ್ಟು ದೊಡ್ಡ ಶಾಪಾ. ಹದಿನೈದು ಇಪ್ಪತ್ತು ಜನ ಕೆಲಸಗಾರರು.

"ಬನ್ನಿ.. ಬನ್ನಿ.. ಸಾರ್. ಬೆಸ್ಟ್ ಇಂಗ್ಲೀಷ್ ಮ್ಯೂಜಿಕ್ ಇದೆ ಬನ್ನಿ" ಪಟ್ಟೆ ಪಟ್ಟೆ ಶರ್ಟ ಹಾಕಿದವ ಸ್ವಾಗತಿಸಿದ. ಅವನೊಂದಿಗೆ ಚಿಕ್ಕದಾದ ಕೆಬಿನ್‌ಗೆ ಬಂದ. ಅವನನ್ನು ಕುಳ್ಳಿರಿಸಿ ಒಂದು ಕ್ಯಾಸೆಟ್ ತೆಗೆದು, ಟೇಪ್‌ರೆಕಾರ್ಡರ್‌ಗೆ ಹಾಕಿ "ಈಗ ಬಂದೆ" ಎಂದು ಹೇಳಿ ಆತ ಹೊರಗೆ ಹೋದ.

"ಮಿಸ್ಟರ್ ಅಶೋಕ ನಿನ್ನ ಗುಟ್ಟು ರಟ್ಟಾಗಿದೆ. ಒಳ್ಳೆ ಮಾತಿನಿಂದ ಹೊರಗೆ ಬಂದು ಕೆಂಪು ಮಾರುತಿ ಕಾರಿನಲ್ಲಿ ಕುಳಿತುಕೊ..."

ಎಂಬ ಗಡುಸಾದ ಕಂಠದೊಂದಿಗೆ ಟೇಪ್ ಮೌನ ತಾಳಿದಾಗ ಅಶೋಕ ಮನದಲ್ಲಿ ಅಂದುಕೊಂಡ... ಶತ್ರು ಮೂರ್ಖನಲ್ಲ ಎಂದು.

ಹೇಮಂತ ಹುಡುಕಿಕೊಂಡು ಹೊರಟಿದ್ದು ವಿನಾಯಕನನ್ನು. ಆತ ಇರುವದು ಗಾಂಧೀಚೌಕದ ಬಳಿ ಇರುವ ಘಾಟ್‌ಗೆ ಚಾಳಿನಲ್ಲಿ. ತಂದೆ ತೀರಿಕೊಂಡಿದ್ದಾನೆ. ತಾಯಿ ಕೂಲಿನಾಲಿ ಮಾಡಿ ಜೀವನ ಸಾಗಿಸುತ್ತಿದ್ದಾಳೆ. ಈತನಿಗೋ ವಿಪರೀತ ಸಿನಿಮಾ ಹುಚ್ಚು. ಆ ಸಿನೆಮಾ ಹುಚ್ಚೇ ಅವನನ್ನು ಹಾಳು ಮಾಡಿದ್ದು. ಶಾಲೆ ಮುಗಿದ ಮೇಲೆ ನಾಲ್ಕು ಗಂಟೆ ಟಾಕೀಸಿನಲ್ಲಿ ಕೆಲಸ ಮಾಡುವದರೊಂದಿಗೆ ಆತ ದುಡಿಯಲು ಆರಂಭಿಸಿದ. ಸಿಗುವ ಸಂಬಳ ತಿಂಗಳಿಗೆ ಅರವತ್ತು ರೂಪಾಯಿ. ಅರವತ್ತು ರೂಪಾಯಿ ತಾಯಿಯ ದೃಷ್ಟಿಯಲ್ಲಿ ದೊಡ್ಡದಾಗಿ ಕಂಡರೂ ವಿನಾಯಕನಿಗೆ ಕಂಡದ್ದು ದಿನನಿತ್ಯ ಸಿನೆಮಾ ನೋಡಬಹುದಲ್ಲ ಎಂಬುದು. ಹೀಗಿರುವಾಗಲೇ ಆತ ಪೊಲೀಸರ ಕೈಗೆ ಸಿಲುಕಿಕೊಂಡದ್ದು... ಏಕೆ? ಹೇಗೆ? ಎಂಬುದು ಒಗಟು. ಆ ಒಗಟು ಬಿಡಿಸಲೆಂದೇ ಮೇಜರ ಪಣ ತೊಟ್ಟಿದ್ದು.

ವಿನಾಯಕನ ತಾಯಿ ಘಾಟಿಗೆ ಚಾಳಿನ ಒಂದು ರೂಮಿನಲ್ಲಿದ್ದದ್ದು ನಿಜ. ಮೇಜರ ಹೋದಾಗ ಮಾತ್ರ ಆಕೆ ಸಿಗಲಿಲ್ಲ. ಮಗ ಸಿಕ್ಕಿಹಾಕಿಕೊಂಡ ಮೇಲೆ

ಎಡಬಲದವರ ಚುಚ್ಚು ಮಾತು ಕೇಳದೇ ಕೋಣೆ ಖಾಲಿ ಮಾಡಿ ಹೊರಟು ಹೋದಳಂತೆ. ಎಷ್ಟೋ ಪ್ರಯತ್ನದ ನಂತರ ಹತ್ತಾರು ಜನರನ್ನು ವಿಚಾರಿಸಿದ ಮೇಲೆ, ಆಕೆ ನಾರಾಯಣಪುರದಲ್ಲಿರುವ ಜನತಾ ಕ್ವಾರ್ಟರ್ಸ್‌ನಲ್ಲಿ ಇದ್ದಾಳೆಂದು ತಿಳಿದುಬಂತು. ಅಲ್ಲಿಂದ ಸವಾರಿ ಹೊರಟಿತು ನಾರಾಯಣಪುರದ ಕ್ವಾರ್ಟರ್ಸ್‌ನತ್ತ. ಅಲ್ಲಿಯೂ ನಿರಾಶೆ. ಆಕೆ ಕೆಲಸಕ್ಕೆ ಹೋಗಿದ್ದಾಳೆಂದೂ ಅವಳ ಮಗನ ವಿಷಯ ಯಾರಿಗೂ ತಿಳಿಯದೆಂದು ವಿವರಿಸಿದ ಪಕ್ಕದ ಮನೆಯಾತ. ಸೋಲುವ ಜೀವ ಹೇಮಂತನದಲ್ಲ. ಆಕೆ ಕೆಲಸ ಮಾಡುವದೆಲ್ಲಿ ಎಂದು ವಿಚಾರಿಸಿದ. ಅವಳ ಹೆಸರು ದೆಶೆ ಬಗ್ಗೆ ಕೇಳಿದ. ಕಾಶೀಬಾಯಿ ವಿನಾಯಕನ ತಾಯಿ. ಅವಳಿಗೆ ಸುಮಾರು ನಲವತ್ತು ನಲವತ್ತೈದು ವರ್ಷ ವಯಸ್ಸು. ಬಸಪ್ಪ ಮೇಸ್ತ್ರಿ ಬಳಿ ಆಕೆ ಕೂಲಿ ಕೆಲಸಕ್ಕೆ ಹೋಗುತ್ತಿದ್ದಾಳೆ.

ಈಗ ಕೆಲಸವೆಲ್ಲಿ ನಡೆದಿದೆ ಎಂಬುದು ತಿಳಿಯದು.

ಮತ್ತೆ ಸಮಸ್ಯೆ ಉದ್ಭವಿಸಿತು. ಪರಿಹಾರವೂ ಸಹಿತ ಅದರ ಜೊತೆಯೇ ಸಿಕ್ಕಿದ್ದು ಮೇಜರನ ಜಾಣ್ಮೆಗೆ ಸಾಕ್ಷಿ. ಅಷ್ಟೆಲ್ಲ ಮಾತನಾಡುವ ಮುದುಕನನ್ನೇ ಆತ ದಾಳವನ್ನಾಗಿ ಮಾಡಿಕೊಂಡ. ಪುಸಲಾಯಿಸಿ, ರಿಕ್ಷಾದಲ್ಲಿ ಕರೆದೊಯ್ದ ಮೇಲೆ ಐದು ರೂಪಾಯಿ ಕೊಡುವದಾಗಿ ಹೇಮಂತ ಹೇಳಿದಾಗ ಮುದುಕ ತುದಿಗಾಲ ಮೇಲೆ ಸಿದ್ಧವಾದ. ಕಾಶೀಬಾಯಿ ಎಲ್ಲಿದ್ದರೂ ಹುಡುಕಿಕೊಡುವುದಾಗಿ ಜಂಭ ಕೊಚ್ಚಿಕೊಂಡ ಮುದುಕ. ಅವನನ್ನು ಕರೆದುಕೊಂಡು ನಡೆದ ಹೇಮಂತ. ಅರ್ಧಗಂಟೆ ಸುತ್ತಾಡಿದ ಮೇಲೆ ಕೊನೆಗೆ ಕಾಶೀಬಾಯಿ ಠಿಕಾಣಿ ದೊರೆಯಿತು. ಮುದುಕನ ಕೈಗೆ ಹತ್ತು ರೂಪಾಯಿ ಚೆಲ್ಲಿ ಹೇಮಂತ ಅವನಿಗೆ ಅಪ್ಪಣೆ ನೀಡಿದಾಗ ಮುದುಕ ಹದಿನಾರರ ಹರಯಕ್ಕೆ ಕಾಲಿಟ್ಟವರಂತೆ ಲುಟು ಲುಟು ಹೆಜ್ಜೆ ಹಾಕುತ್ತ ಹೋದ.

ಕಾಶೀಬಾಯಿಗೆ ಗಾಬರಿ. ತನ್ನನ್ನು ಹುಡುಕಿಕೊಂಡು ಬಂದ ಈ ಸಾಹೇಬರು ಯಾರು? ಪೊಲೀಸನವರಾಗಿದ್ದರೆ ಮತ್ತೆ ಯಾವ ಗ್ರಹಚಾರ ಕಾಯ್ದಿದೆಯೋ ಅಂತ. ಮೇಲ್ನೋಟಕ್ಕೆ ಅವಳಿಗೆ ಮೇಜರ ತುಂಬಾ ಒಳ್ಳೆಯವರಂತೆ ಕಂಡದ್ದು ಮನಸ್ಸಿಗೆಷ್ಟೋ ಧೈರ್ಯ ನೀಡಿತು.

"ಅಮ್ಮಾ.." ಹೇಮಂತ ಪ್ರೀತಿಯಿಂದ ಕರೆದಾಗ ಅವಳಿಗೆ ತಮ್ಮ ಕಿವಿಗಳನ್ನು ನಂಬದಂತಾಯಿತು. ಈ ದೊಡ್ಡ ಮನುಷ್ಯ ನಿಜವಾಗಿಯೂ ಆ ರೀತಿ ಕರೆದರೋ ಅಥವಾ ತನಗೆ ಹಾಗೆ ಕೇಳಿಸಿತೋ ತಿಳಿಯದಂತಾಯಿತು. ಪಿಳಿಪಿಳಿ ಕಣ್ಣು

ಬಿಡುತ್ತಾ ಅವನೆಡೆ ನೋಡಿದಳು ಅಷ್ಟೇ.

''ಅಮ್ಮಾ, ನನ್ನ ಬಗ್ಗೆ ಗಾಬರಿಯಾಗಬೇಡಿ. ನಾನು ನಿಮ್ಮ ಮಗ ವಿನಾಯಕನಿಗೊಂದು ಒಳ್ಳೆದಾರಿ ತೋರಿಸಲು ಬಂದಿರುವೆ. ಇಂದಿಗೆ ನಿಮ್ಮ ಕಷ್ಟದ ದಿನಗಳು ದೂರವಾದವು ಎಂಬು ತಿಳಿಯಿರಿ''

ಕಾಶೀಬಾಯಿ ಗಳಗಳನೆ ಅಳಲಾರಂಭಿಸಿದಳು. ಅವಳ ಮನದ ಪರಿಸ್ಥಿತಿ ಅರಿತಿದ್ದ ಹೇಮಂತ ಗಾಬರಿಯಾಗಲಿಲ್ಲ. ಅವಳನ್ನು ಸಮಾಧಾನ ಪಡಿಸಿದ.

''ಹೇಳಿ ಅಮ್ಮಾ-ವಿನಾಯಕ ಎಲ್ಲಿದ್ದಾನೆ?''

''ಜೈಲಿನಲ್ಲಿ'' ಆಕೆ ವ್ಯಥೆ ತುಂಬಿದ ಧ್ವನಿಯಲ್ಲಿ ಹೇಳಿದಳು.

''ಏನು? ಜೈಲಿನಲ್ಲೇ? ಅದ್ಹೇಗೆ ಸಾಧ್ಯ? ಆತ ಜೈಲಿನಿಂದ ಬಂದಿಲ್ಲವೆ?''

''ಎಲ್ಲಾ ನಮ್ಮ ಕರ್ಮ ಸಾಹೇಬರೆ. ಏನಂತ ನಾನು ಹೇಳಲಿ?''

''ಆದದ್ದಾದರೂ ಏನು ಅಂತ ಹೇಳಿ, ನಾನು ವಿಚಾರಿಸ್ತೀನಿ''

''ರಿಮಾಂಡ್‌ಹೋಮಿನಿಂದ ಆತ ಬಂದ ಮೇಲೆ ಎಡಬಲದ ಮನೆಯವರು ಅವನಿಗೆ ಚುಚ್ಚು ಮಾತು ಆಡತೊಡಗಿದರು. ಅವನ ಜೊತೆ ತಮ್ಮ ಮಕ್ಕಳನ್ನು ಮಾತನಾಡಲು ಸಹ ಬಿಡುತ್ತಿರಲಿಲ್ಲ. ಹೀಗಾಗಿ ನಾನು ಆ ಮನೆ ಬಿಟ್ಟು ಯಾರೋ ಪುಣ್ಯಾತ್ಮರ ಸಹಾಯದಿಂದ ದೊರೆತ ಜನತಾ ಕ್ವಾರ್ಟರ್ಸ್‌ಗೆ ಬಂದೆ. ಇಲ್ಲಿಗೆ ಬಂದ ಮೇಲೆ ನಾಲ್ಕಾರು ಬಾರಿ ಯಾರ‍್ಯಾರೋ ವಿನಾಯಕನನ್ನು ಕರೆಯಲು ಬಂದರು. ವಿನಾಯಕ ಅವರೊಂದಿಗೆ ಮಾತನಾಡಿದ. ಅವರ ಜೊತೆ ಹೋಗಲಿಲ್ಲ. ಆಮೇಲೆ ಕಾರಲ್ಲಿ ಒಂದೆರಡು ಬಾರಿ ಯಾರೋ ಬಂದರು. ಆಗಲೂ ವಿನಾಯಕ ಹೋಗಲಿಲ್ಲ. ಒಂದು ದಿನ ರಾತ್ರಿ ಪೊಲೀಸ್ ಇನ್‌ಸ್ಪೆಕ್ಟರ್ ಬಂದು ಅವನನ್ನು ಬಂಧಿಸಿ ಕರೆದೊಯ್ದರು. ಅವನ ಮೇಲೆ ಕಳವು ಆಪಾದನೆ ಹೊರಿಸಿದರು. ನಾನವರ ಕೈಕಾಲು ಬಿದ್ದು ಬೇಡಿಕೊಂಡೆ. ನನ್ನ ಮಗ ಮನೆ ಬಿಟ್ಟು ಹೊರಗೆ ಹೋಗಿಲ್ಲ ಎಂದೆ. ಒಂದೂ ಮಾತನ್ನು ಕೇಳಲಿಲ್ಲ ಅವರು. ಮೇಲಿಂದ ಮೇಲೆ ಬಂದು ತೊಂದರೆ ಕೊಟ್ಟರೆ ನನ್ನ ಮಗನ ಕೈಕಾಲು ಮುರಿದು, ಭಿಕ್ಷೆ ಬೇಡುವಂತೆ ಮಾಡುತ್ತೇವೆಂದು ಹೆದರಿಸಿದರು.. ಅಂದಿನಿಂದ ನಾನು ನನ್ನೆದೆಯ ಮೇಲೆ ಬಂಡೆಗಲ್ಲು ಹೇರಿಕೊಂಡು ವಿನಾಯಕ ಮರಳಿ ಬರುವ ದಾರಿ ನೋಡುತ್ತಿದ್ದೇನೆ. ಈ ಬಾರಿ ಆತ ಬಂದನೆಂದರೆ ಈ ದರಿದ್ರ ಊರಿಗೆ ಶರಣು ಹೊಡೆದು ಬೇರೆ ಯಾವದಾದರೂ ಊರು ಸೇರುತ್ತೇನೆ''

ನಿಧಾನವಾಗಿ ವಿಷಯ ಮೇಜರ್‌ಗೆ ಅರ್ಥವಾಗುತ್ತಾ ಬಂದಿತು.

''ಯಾವ ಪೊಲೀಸ್ ಸ್ಟೇಷನ್‌ನಲ್ಲಿದ್ದಾನೆ ನಿನ್ನ ಮಗ?''

''ಮಾರ್ಕೆಟ್‌ನಲ್ಲಿ''

''ಸಾಹೇಬರ ಹೆಸರು ಗೊತ್ತೋ?''

''ಅಷ್ಟು ಸರಿಯಾಗಿ ತಿಳಿಯದು. ಏನೋ ಪ್ರಸಾದ ಅಂತಾರೆ ಅಷ್ಟೇ''

''ನೀವೇನೂ ಚಿಂತಿಸಬೇಡಿ. ಆದಷ್ಟು ಬೇಗ ನಿಮ್ಮ ಮಗ ಮರಳಿ ಬರುವಂತೆ ನಾನು ಮಾಡ್ತೀನಿ. ಇನ್ನೊಂದು ಮಾತು. ಇದೆಲ್ಲ ಆಗಿ ಎಷ್ಟು ದಿನಗಳಾದವು?''

''ಏಳೆಂಟು ತಿಂಗಳಾದವು ಸ್ವಾಮಿ!''

ಮತ್ತೊಮ್ಮೆ ಅವರಿಗೆ ಧೈರ್ಯ ಹೇಳಿದಾಗ ಜೀವನದಲ್ಲಿ ಮೊದಲ ಬಾರಿ ಒಳ್ಳೆಯ ಮಾತುಗಳನ್ನು ಕೇಳಿದ್ದ ಕಾಶೀಬಾಯಿ ಸಂತೋಷ ತಾಳಲಾರದೆ ಅವನ ಕಾಲಿಗೆ ಬೀಳಲು ಬಂದಾಗ ಹೇಮಂತ ತಡೆದ.

''ಹಾಗೆಲ್ಲ ಮಾಡಕೂಡದು. ನೀವು ನನಗೆ ಹಿರಿಯರು''

ಕಣ್ತುಂಬ ನೀರು ತಂದ ಆಕೆ ಅವನೆಡೆ ನೋಡಿ ಕೈ ಮುಗಿದಳು ಅಷ್ಟೇ. ವಿನಾಯಕನ ವಿಷಯ ತಿಳಿದು ಖಿನ್ನನಾದ ಮೇಜರ ಭಾರವಾದ ಹೆಜ್ಜೆಗಳನ್ನಿಡುತ್ತ ಹೊರ ನಡೆದ.

ಸಮಯ ಆರು ಗಂಟೆಗೆ ಸಮೀಪಿಸಿತ್ತು. ಮಾರ್ಕೆಟ್ ಠಾಣೆಯ ಇನ್‌ಸ್ಪೆಕ್ಟರ್ ಬಂದಿರಬಹುದೆಂದುಕೊಂಡ ಹೇಮಂತ ಒಂದು ಬಾರಿ ಅವನನ್ನು ಕಂಡು ವಿನಾಯಕನ ವಿಷಯವೇನೆಂದು ವಿಚಾರಿಸಿದರಾಯ್ತು ಎಂದು ಯೋಚಿಸಿ ಕಾರನ್ನು ಅತ್ತ ಕಡೆಗೆ ಓಡಿಸಿದ.

ಅಜಿತಪ್ರಸಾದ ಮಾರ್ಕೆಟ್ ಠಾಣೆಯ ಸಬ್‌ಇನ್‌ಸ್ಪೆಕ್ಟರ್. ಅತಿದುಷ್ಟ ಹಾಗೂ ದುರಾಚಾರಿ ಎಂದು ಪ್ರಸಿದ್ಧನಾದವ. ದಯೆ ಕರುಣೆ ಇವು ಅವನ ಹತ್ತಿರವೇ ಸುಳಿಯುತ್ತಿರಲಿಲ್ಲ. ನಗರದ ಕುಖ್ಯಾತ ವ್ಯಕ್ತಿಗಳಿಗೆಲ್ಲ ಅವನೇ ಆಶ್ರಯದಾತ.

ಠಾಣೆ ಎದುರು ಇರುವ ಚಿಕ್ಕ ಕ್ಯಾಂಟೀನಿನಲ್ಲಿ ಸ್ಪೆಶಲ್ ಟೀ ಕುಡಿಯುತ್ತಾ ಇಷ್ಟೆಲ್ಲ ವಿಷಯ ಸಂಗ್ರಹಿಸಿದ ಹೇಮಂತ ಠಾಣೆಯ ಎದುರಿಗೆ ಬಂದಾಗ ಇನ್ನೂ ಸಾಹೇಬರು ಬಂದಿಲ್ಲವೆಂದು ತಿಳಿಯಿತು. ಆದಕ್ಕೆಂದೇ ಕ್ಯಾಂಟೀನಿಗೆ ಬಂದ ಆತ ಚಹ ಕುಡಿಯುತ್ತ ಅಜಿತ ಪ್ರಸಾದನ ಬಗ್ಗೆ ಮಾಹಿತಿ ಪಡೆದಿದ್ದ.

ಉರಿಸಿದ ಸಿಗರೇಟು ಮುಗಿಯುತ್ತ ಬಂದಿತ್ತು. ಮೇಜರನ ದೃಷ್ಟಿ ಠಾಣೆಯ ಮೇಲೆ. ಆತ ಎರಡು ಬಾರಿ ಸಿಗರೇಟು ಎಳೆದು ಮೇಲೆದ್ದ. ಠಾಣೆಯ

ಎದುರು ಜೀಪ್ ಬಂದು ನಿಂತಿತು. ಹುರಿಮೀಸೆಯ ಕೆಂಪುಮೊಗದ ದಷ್ಟಪುಷ್ಟ ದೇಹದ ವ್ಯಕ್ತಿ ಕೆಳಗೆ ಇಳಿದು ಠಾಣೆಯೊಳಗೆ ಕಾಲಿಟ್ಟಿತು. ಆತನೇ ಅಜಿತಪ್ರಸಾದ ಇರಬೇಕೆಂದುಕೊಂಡ ಹೇಮಂತ ಮೆಲ್ಲಮೆಲ್ಲನೆ ಹೆಜ್ಜೆ ಇಡುತ್ತ ಠಾಣೆಯತ್ತ ನಡೆದ.

ಸೆಂಟ್ರಿಯಿಂದ ಹೇಮಂತನನ್ನು ತಡೆಯಲಾಗಲಿಲ್ಲ. ಹೇಮಂತ ಪೂರ್ತಿ ಅಪರಿಚಿತನಾದರೂ ಅವನ ಗಾಂಭೀರ್ಯ, ಸಿಂಹದ ನಡಿಗೆಯಿಂದ ಪ್ರಭಾವಿತನಾದ ಆತ ಸೆಲ್ಯೂಟ್ ನೀಡಿದ. ಹಗುರಾಗಿ ತಲೆಯಾಡಿಸಿ ಪ್ರತಿವಂದನೆ ನೀಡಿದ ಹೇಮಂತ ಒಳಗೆ ಕಾಲಿಟ್ಟ. ಟೇಬಲ್ ಮೇಲೆ ಎರಡೂ ಕಾಲುಗಳನ್ನೊಗೆದು ಕುರ್ಚಿಯ ಹಿಂಭಾಗಕ್ಕೆ ತಲೆ ಕೊಟ್ಟು ಭುಸು ಭುಸು ಸಿಗರೇಟು ಹೊಗೆ ಬಿಡುತ್ತಿದ್ದ ಅಜಿತ್ ಹೇಮಂತನೆಡೆ ಕೊಂಕು ನೋಟ ಬೀರಿದ. ಅವನ ಮುಖಭಾವದಿಂದ ಹೇಮಂತ ಅಪ್ಪಣೆ ಇಲ್ಲದೆ ಒಳಗೆ ಬಂದದ್ದು ಅವರಿಗೆ ಹಿಡಿಸದಂತೆ ತೋರಿತು. ಆದರೆಡೆ ಲಕ್ಷ್ಯ ಕೊಡಲಿಲ್ಲ ಮೇಜರ್. "ಗುಡ್ ಇವನಿಂಗ್ ಇನ್‌ಸ್ಪೆಕ್ಟರ್" ಎಂದ ಹೇಮಂತ. ಅಜಿತ ಉತ್ತರಿಸಲಿಲ್ಲ. ಅವನ ಉತ್ತರಕ್ಕೆ ಕಾಯದೇ ಕುರ್ಚಿ ಮೇಲೆ ಕುಳಿತುಕೊಂಡ ಹೇಮಂತ.

"ಏನು ಬಂದದ್ದು?"

ಒರಟಾಗಿ ಗಡಸು ಧ್ವನಿಯಲ್ಲಿ ಕೇಳಿದ ಅಜಿತ ಪ್ರಸಾದ.

"ವಿನಾಯಕನ ಬಗ್ಗೆ ವಿಚಾರಿಸಲು ಬಂದಿರುವೆ. ದಯವಿಟ್ಟು ಅವನನ್ನು ಕರೆಸಿರಿ. ನಾನವನ ಜೊತೆ ಮಾತನಾಡಬೇಕಾಗಿದೆ"

ಅಜಿತನ ಮುಖ ಗಂಭೀರವಾಯಿತು. ಕುಳಿತ ಭಂಗಿ ಬದಲಾಗಲಿಲ್ಲ. "ನಮ್ಮಲ್ಲಿ ಯಾವ ವಿನಾಯಕನೂ ಇಲ್ಲ. ನೀವಿನ್ನು ಹೋಗಬಹುದು"

"ನೀವು ವಿನಾಯಕ ಎಂಬ ಹುಡುಗನನ್ನು ತಂದು ಇರಿಸಿಕೊಂಡಿದ್ದೀರಿ ಎಂದು ನನಗೆ ತಿಳಿದು ಬಂದಿದೆ"

"ನಿಮಗಾರೋ ಹಾಗೋ ಸುಳ್ಳು ಹೇಳಿದ್ದಾರೆ"

"ಸುಳ್ಳಲ್ಲ. ನನಗೆ ತಿಳಿದ ಸಮಾಚಾರ ಖಂಡಿತವಾಗಿಯೂ ಸತ್ಯ"

"ಹಾಗಾದರೆ ನಾನು ಸುಳ್ಳು ಹೇಳುತ್ತಿರುವೆನೇ" ಕೋಪದಿಂದ ಕೇಳಿದ ಅಜಿತ್.

"ಹಾಗಂತ ನಾನೆಲ್ಲಿ ಹೇಳಿರುವೆ? ವಿನಾಯಕನನ್ನು ಕರೆಸಿದರೆ ಅವರು ಹೇಳಿದ್ದು ಸುಳ್ಳು ಎಂದಾಗುತ್ತದೆ. ಕರೆಸದಿದ್ದರೆ ಸತ್ಯವೆಂದಾಗುತ್ತದೆ"

''ತಲೆಹರಟೆ ಬೇಡ. ಹೊರಟು ಹೋಗಿ'

''ಹೊರಟು ಹೋಗಲು ನಾನು ಬಂದಿಲ್ಲ... ನಾನು ವಿನಾಯಕನನ್ನು ನನ್ನ ಜೊತೆ ಕರೆದೊಯ್ಯಲು ಬಂದಿರುವೆ. ಯಾವದೇ ವ್ಯಕ್ತಿಯನ್ನು ಅವನು ಅಪರಾಧಿಯೇ ಆಗಿರಲಿ ಅವನನ್ನು ಒಂದು ವಾರಕ್ಕಿಂತ ಹೆಚ್ಚು ಕಾಲ ಠಾಣೆಯಲ್ಲಿ ಇರಿಸಿಕೊಳ್ಳಲು ಬರುವುದಿಲ್ಲ ಎಂಬ ವಿಷಯ ಗೊತ್ತಿಲ್ಲವೆ ನಿಮಗೆ?''

''ಮಿಸ್ಟರ್.. ನೀವು ಪೊಲೀಸ್ ಠಾಣೆಯಲ್ಲಿದ್ದೀರಿ. ನಮಗೆ ಕಾಯ್ದೆ ಕಲಿಸಲು ಬರಬೇಡಿ. ಸ್ವಲ್ಪ ಶಿಷ್ಟಾಚಾರದ ಬಗ್ಗೆ ಗಮನವಿರಲಿ''

''ನನಗೆ ಶಿಷ್ಟಾಚಾರ ಕಲಿಸಲು ಬರಬೇಡಿ. ಮೊದಲು ಅದರ ಬಗ್ಗೆ ನೀವು ಕಲಿಯಬೇಕಾಗುವುದು ಕ್ಷೇಮ. ಠಾಣೆಗೆ ಬಂದವರ ಜೊತೆ ಈ ರೀತಿ ವರ್ತಿಸುವುದು ಸರಿಯಲ್ಲ. ಮೊದಲು ನಿಮ್ಮ ಕಾಲುಗಳನ್ನು ಎತ್ತಿ ಕೆಳಗಿಡಿ. ನನ್ನೊಡನೆ ಮನುಷ್ಯರಂತೆ ವರ್ತಿಸಿ''

ಅಜಿತಪ್ರಸಾದ್‌ಗೆ ರೇಗಿಹೋಯಿತು. ಅಬ್ಬರಿಸುತ್ತ ಎದ್ದು ನಿಂತ.

''ಏನು ಮನುಷ್ಯರಂತೆ ವರ್ತಿಸಬೇಕೆ? ನನ್ನನ್ನೇನು ಪಶು ಎಂದು ತಿಳಿದಿರಾ?''

''ದಯವಿಟ್ಟು ಕ್ಷಮಿಸಿ. ನಾನು ಆ ರೀತಿ ಹೇಳಲಿಲ್ಲ. ಠಾಣೆಗೆ ಬಂದವರ ಜೊತೆ ಒಳ್ಳೆಯ ರೀತಿಯಿಂದ ನಡೆದುಕೊಳ್ಳಿ ಎಂದೆ ಅಷ್ಟೇ''

''ಹಾಂ.. ಹಾಂ.. ಸರಿ. ಬಂದ ವಿಷಯ ಹೇಳಿ''

ಅಜಿತ್ ಕುರ್ಚಿಯಲ್ಲಿ ಕುಳಿತುಕೊಂಡ ಈ ಬಾರಿ ಸರಿಯಾಗಿ.

''ಈಗಾಗಲೇ ಹೇಳಿರುವೆ. ನನಗೆ ವಿನಾಯಕ ಬೇಕೂಂತ''

''ನಾನೂ ಈಗಾಗಲೇ ಹೇಳಿದ್ದೇನಲ್ಲ. ಅವನ ಬಗ್ಗೆ ಗೊತ್ತಿಲ್ಲ ಅಂತ?''

''ಇದು ಕೊನೆಯ ಮಾತೇ?''

''ಹೌದು''

''ಸರಿ ಹಾಗಾದರೆ'' ಹೇಮಂತ ಎದ್ದು ನಿಂತ.

''ನೀವು ನಿಮ್ಮ ಮೇಲಿನ ಅಧಿಕಾರಿಗಳಿಗೆ ಇದೇ ಉತ್ತರ ಕೊಡಲು ಸಿದ್ಧರಾಗಿರಿ''

''ಸಾಕು ಹೋಗಿ. ರೋಪು ಹಾಕಿ ಹೋಗಿ ತೆಪ್ಪನೆ ಮಲಗುವ ನೂರೆಂಟು ಜನರನ್ನು ಕಂಡಿರುವೆ''

''ಆದರೆ ಮೇಜರ್ ಹೇಮಂತನಂಥವರನ್ನು ಕಂಡಿಲ್ಲ. ನಿಜ ತಾನೇ? ನೆನಪಿಡಿ ನನ್ನ ಹೆಸರು ಮೇಜರ ಹೇಮಂತ. ನಿಮ್ಮಂಥ ದುಷ್ಟ ವ್ಯಕ್ತಿಗಳಿಗೆ

ನೀರು ಕುಡಿಸಲೆಂದೇ ನಾನು ಬಂದಿದ್ದು. ಗುಡ್‌ಬೈ''

ಮೇಜರ ಕೋಪದಿಂದ ಉರಿಯುತ್ತ ಕಾರಿನ ಬಳಿ ಬಂದ. ಕಾರಿನ ಬಳಿ ಬಂದ. ಕಾರಿನ ಬಾಗಿಲು ತೆಗೆದು ಕುಳಿತುಕೊಳ್ಳಬೇಕು ಅನ್ನುತ್ತಿದ್ದಂತೆ ಹಿಂದಿನಿಂದ ಸ್ವರ ಬಂದಿತು.

''ಮೇಜರ ಹೇಮಂತ.... ಪ್ಲೀಜ್'' ಹೊರಳಿದ. ಎದುರಿಗೆ ನಿಂತಿದ್ದ ಅಜಿತಪ್ರಸಾದ.

''ಹೇಳಿ ಅಜಿತಪ್ರಸಾದ ಸಾಹಬ್''

''ದಯವಿಟ್ಟು ಹಾಗೆ ಹೇಳಬೇಡಿ. ಒಂದು ನಿಮಿಷ ಒಳಗೆ ಬನ್ನಿ''

''ಸಾರಿ. ಇನ್ನೊಂದು ಸಾರಿ ಭೆಟ್ಟಿಯಾಗೋಣ. ಈಗ ಅರ್ಜೆಂಟ್ ಕೆಲಸವಿದೆ''

ಮುಂದೆ ಅವನಿಗೆ ಮಾತನಾಡಲು ಅವಕಾಶ ಕೊಡದೇ ಕಾರು ಸ್ಟಾರ್ಟ್ ಮಾಡಿದ. ಅಜಿತಪ್ರಸಾದನ ಪೆಚ್ಚಾದ ಮುಖ ಕಾರಿನ ಸೈಡ್ ಮಿರರಿನಲ್ಲಿ ಸ್ಪಷ್ಟವಾಗಿ ಕಾಣುತ್ತಿತ್ತು.

ರೂಮಿಗೆ ಹೋಗಿ ಗಿರೀಶನೊಂದಿಗೆ ಅಜಿತಪ್ರಸಾದನ ಬಗ್ಗೆ ಮಾತನಾಡಬೇಕೆಂದು ನಿರ್ಧರಿಸಿದ. ಕಾರನ್ನು ಹೊಟೆಲ್ ಪಾರ್ಕಿಂಗ್‌ನಲ್ಲಿ ನಿಲ್ಲಿಸಿ ರೂಮ್‌ಚಾವಿ ಇಸಿದುಕೊಂಡ. ರಿಸೆಪ್ಶನಲ್ಲಿದ್ದ ಹುಡುಗಿ ಮೋಹಕವಾಗಿ ನಕ್ಕು ಹೇಳಿದಳು.

''ಮಿಸ್ಟರ್ ಹರಿವಂಶರಾಯ್. ನಿಮ್ಮನ್ನು ಯಾರೋ ಒಬ್ಬರು ಐದಾರು ಬಾರಿ ಕೇಳಿದರು. ಹೆಸರು ಕೇಳುತ್ತಿರಲು ಡಿಸ್‌ಕನೆಕ್ಟ್ ಆಗುತ್ತಿತ್ತು''

ಮೇಜರ ಲಿಫ್ಟ್‌ನಿಂದ ಮೇಲೆ ಬಂದು ರೂಮಿನ ಬಾಗಿಲು ತೆರೆಯುತ್ತಿರುವಾಗ ಒಳಗಡೆ ಫೋನಿನ ಗಂಟೆ ಬಾರಿಸುತ್ತಿದ್ದುದು ಕೇಳುತ್ತಿತ್ತು.

ಜಗ್ಗುದಾದಾನ ಬಲೆಯಲ್ಲಿ ಸುಷಮಾ ಬಲವಾಗಿ ಸಿಲುಕಿಕೊಂಡಿದ್ದಳು. ರಸಲಪುರಗಲ್ಲಿ ಜಾಗೀರಖಾನನ ಜಾಗೀರೆಂಬುದು ತಿಳಿದಿದ್ದ ಆಕೆ ಅಲ್ಲಿಂದ ತಪ್ಪಿಸಿಕೊಂಡು ಹೋಗುವುದು ಸಾಧುವಲ್ಲ. ಇದರಿಂದ ಅಪಾಯ ಹೆಚ್ಚು ಎಂದರಿತ್ತ ಆಕೆ ಒಮ್ಮಿಂದೊಮ್ಮೆಲೆ ಪ್ಲೇಟ್ ಬದಲಾಯಿಸಿದಳು. ಹೆದರಿ

ಕಂಗಾಲಾದವರಂತೆ ನಟಿಸುತ್ತ "ನೀವೆಲ್ಲಾ ಯಾರು? ಈ ರೀತಿ ನನ್ನನ್ನೇಕೆ ಸುತ್ತುವರೆಯುತ್ತಿದ್ದೀರಿ?"

ಅಟ್ಟಹಾಸ ಮಾಡುತ್ತ ಹಿಂದೆ ಬಂದ ಜಗ್ಗುದಾದಾ ಹೇಳಿದ.

"ಭಲೆ ಛೋಕರಿ.. ತುಂಬಾ ಚೆನ್ನಾಗಿ ಆಕ್ಟ್ ಮಾಡ್ತೀಯಾ. ಹಟ ಮಾಡದೇ ನಮ್ಮ ಜೊತೆ ಬಂದರೆ ನಿನ್ನ ಮೈಗೆ ಉತ್ತಮ. ತಂಟೆ ಮಾಡಿದರೆ ಸುತ್ತಲಿದ್ದ ನನ್ನ ಜನ ಕೈ ಬೇರೆ, ಕಾಲು ಬೇರೆ ಮಾಡಿ ಗೋಣೀಚೀಲದಲ್ಲಿ ತುಂಬಿ ನನ್ನ ಜೊತೆ ತರುತ್ತಾರೆ. ನಿನ್ನಂಥ ಸುಂದರ ಬಕ್ರಿ ಸಿಕ್ರೆ ಬಿಡ್ತಾರಾ? ಹ್ಹಹ್ಹಹ್ಹ.."

"ಅಯ್ಯೋ ಹಾಗೆ ಮಾಡಬೇಡಿ. ನನಗೇನೂ ಮಾಡಬೇಡಿ. ನೀವು ಹೇಳಿದಂತೆ ನಾ ಮಾಡುತ್ತೇನೆ. ಆದ್ರೆ ಆದ್ರೆ ನೀವೇಕೆ ನನ್ನನ್ನು ಬಂಧಿಸುತ್ತಿದ್ದೀರಿ. ಎಲ್ಲಿಗೆ ಒಯ್ಯುತ್ತಿದ್ದೀರಿ?"

"ಎಲ್ಲದಕ್ಕೂ ಉತ್ತರ ಸಿಗುತ್ತದೆ ಛೋಕರಿ. ಆದ್ರೆ ಇಲ್ಲಲ್ಲ ಇನ್ನೊಂದೆಡೆ.."

ಸುಷಮಾ ತನ್ನನ್ನು ತಾನೇ ಅವರಿಗೆ ಒಪ್ಪಿಸಿಕೊಂಡಳು.

"ಓ.ಕೆ. ನಡೆಯಿರಿ. ಆದ್ರೆ ಒಂದು ಮಾತು. ನನ್ನಿಂದ ಒಂದಡಿ ದೂರದಲ್ಲಿರಿ. ಯಾರಾದರೂ ನನ್ನನ್ನು ಸ್ಪರ್ಶಿಸಿದರೆ ಅಲ್ಲೇ ಕತ್ತರಿಸಿಬಿಡ್ತೇನೆ"

ಚೂರಿಯ ಅಲಗಿನಷ್ಟೇ ಹರಿತಾದ ಮಾತಿಗೆ ಎಲ್ಲರೂ ಒಂದು ಕ್ಷಣ ಅವಾಕ್ ಆದರು. ಸುಕೋಮಲ ಸುಂದರ ತರುಣಿಯಲ್ಲೂ ಇಷ್ಟು ಬಲವೆ?

ಎಂಟು ಜನರ ಮಧ್ಯೆ ಸುಷಮಾ ತುಸುದೂರ ನಡೆದಳು. ಎಡಬಲದಲ್ಲಿದ್ದ ಮನೆಗಳಿಂದ ಜನ ಇಣುಕಿ ನೋಡುತ್ತಿದ್ದರು. ಎಲ್ಲರ ಕಣ್ಣಲ್ಲಿ ಅವಳ ಬಗ್ಗೆ ಮರುಕ ಎದ್ದು ಕಾಣುತ್ತಿತ್ತು. ಗಲ್ಲಿಯೊಳಗೊಂದು ಗಲ್ಲಿ. ಅಲ್ಲೆ ನಿಂತಿತ್ತೊಂದು ವ್ಯಾನ್. ಎಲ್ಲರೂ ಅದನ್ನು ಸಮೀಪಿಸುತ್ತಿದ್ದಂತೆ ಓಡುತ್ತಾ ಬಂದನೊಬ್ಬ ಬಂಟ್.

"ಜಗ್ಗುದಾದಾ.. ಜಗ್ಗುದಾದಾ..."

ಎಲ್ಲರೂ ಅವನೆಡೆ ಹೊರಳಿದರು.

"ದಾದಾ.. ಸಲೀಮ ಬರುತ್ತಿದ್ದಾನೆ. ಅರ್ಜೆಂಟ್ ಕೆಲಸವಿದೆಯಂತೆ... ಅದ್ಕೆ" ಅವನ ಮಾತಿನ್ನೂ ಮುಗಿದಿರಲಿಲ್ಲ. ಚಿಕ್ಕ ಕಾರೊಂದು ಬಂದು ನಿಂತಿತು. ಅದರಿಂದ ಕೆಳಗಿಳಿದ ಸಲೀಮ ಜಗ್ಗುದಾದಾನನ್ನು ಸಮೀಪಿಸಿದ.

"ಸಲಾಮ್ ವಾಲೆಕುಂ.. ದಾದಾ.. ನಿಮಗಾಗಿ ಬೇಟೆಯೊಂದನ್ನು ತಂದಿದ್ದೇನೆ"

"ವಾ ಬೇಟೆ. ಜಲ್ದಿ ಬೋಲ್..ಏನದು?"

ಸಲೀಮ ಕಾರಿನೆಡೆ ನೋಡಿ ಸನ್ನೆ ಮಾಡಿದ. ಹಿಂದಿನ ಬಾಗಿಲು ತೆರೆದು ಮೊದಲು ಇಳಿದವ ಸಾಮಾನ್ಯ ರೌಡಿಯೊಬ್ಬ. ಅವನ ಕೈಯಲ್ಲಿ ಕಂಟ್ರಿ ಪಿಸ್ತೂಲ್. ಅವನ ನಂತರ ಇಳಿದ ವ್ಯಕ್ತಿಯನ್ನು ಕಂಡು ಸುಷಮಾ ಬೆಚ್ಚಿದರೂ ಒಮ್ಮೆಲೆ ಸುಧಾರಿಸಿಕೊಂಡಳು. ಕೆಳಗೆ ಇಳಿದಾತ ಅಶೋಕ. ಅವನೂ ಸಹ ಸುಷಮಾಳನ್ನು ಕಂಡು ಬೆಚ್ಚಿದರೂ ಮೇಲೆ ತೋರ್ಪಡಿಸದೆ ಸಾಮಾನ್ಯನಂತೆ ವರ್ತಿಸಿದ.

"ವಾವ್.. ಒಳ್ಳೆ ಹ್ಯಾಂಡ್‌ಸಮ್ ಬೇಟೆ ತಂದಿದೀಯಾ. ಎಲ್ಲಿ ಸಿಕ್ತು"

"ಸಿಗಲಿಲ್ಲ. ತಾನೇ ತಾನಾಗಿ ಬಂದು ಬಿತ್ತು ಬಲೆಯಲ್ಲಿ. ಗಂಗಾಧರನನ್ನು ಹುಡುಕಿಕೊಂಡು ಬಂತು"

"ಸಲೀಮ್ ನನಗೇಕೋ ಚಿಂತೆ ಆಗ್ತಾ ಇದೆ. ಅಲ್ಲಿ ಗಂಗಾಧರನನ್ನು ಹುಡುಕಿಕೊಂಡು ಈತ ಬಂದಿದ್ದರೆ ಇಲ್ಲಿ ಚಂದ್ರಕಾಂತನನ್ನು ಹುಡುಕಿಕೊಂಡು ಈಕೆ ಬಂದಿದ್ದಳು. ಇದೇನು ಗ್ರಹಚಾರ? ಹಳೆ ಗಿರಾಕಿ ಹಿಂದೆ ಇವರೆಲ್ಲ ಬೀಳ್ತಿದಾರೆ ಅಂದ್ರೆ ಇದರ ಹಿಂದೆ ಏನಾದರೂ ಮೋಸ ಇರಲೇಬೇಕಲ್ಲವೇ?"

"ನಿಮ್ಮ ಮಾತು ಕೇಳಿದ ಮೇಲೆ ನನಗೂ ಹಾಗೇ ಅನಿಸುತ್ತೆ. ಮೊದ್ಲು ಛೋಟಾ ಬಾಸ್ ಕಡೆ ಹೋಗಿ ರಿಪೋರ್ಟ್ ಮಾಡೋಣ. ಅವರು ಏನ್ಮಾಡ್ತಾರೋ ಮಾಡ್ಲಿ"

"ಬಹುತ್ ಅಚ್ಛಾ.. ನಡಿ. ನಿನ್ನ ಕಾರು ಹಿಂದೆ ಬರ್ಲಿ. ಇಬ್ಬರನ್ನೂ ವ್ಯಾನಿನಲ್ಲಿ ಒಯ್ದರಾಯಿತು"

ಮೆರವಣಿಗೆ ಹೊರಟಿತು. ಮುಂದೆ ವ್ಯಾನ್.. ಹಿಂದೆ ಕಾರು. ಸುಷಮಾ ಮತ್ತು ಅಶೋಕ ಒಂದೇ ಕಡೆ ಕುಳಿತಿದ್ದೂ ಒಬ್ಬರನ್ನೊಬ್ಬರು ಮಾತನಾಡಿಸದೇ ಅಪರಿಚಿತರಂತೆ ಹಾಗೇ ಕುಳಿತಿದ್ದರು.

ಅರ್ಧಮುಕ್ಕಾಲು ಗಂಟೆ ನಂತರ ಒಂದು ದೊಡ್ಡ ತೆಂಗಿನತೋಟದಲ್ಲಿ ಬಂದು ಎರಡೂ ಗಾಡಿಗಳು ನಿಂತವು. ವ್ಯಾನಿನ ಕಿಟಕಿಗಳಿಗೆ ಕಪ್ಪು ಕರ್ಟನ್ ಸರಿಸಿದ್ದರಿಂದಾಗಿ ದಾರಿ ಗುರುತಿಸಲಾಗಲಿಲ್ಲ. ಕೆಳಗೆ ಇಳಿದ ಮೇಲೆಯೇ ಇಬ್ಬರಿಗೂ ಅರ್ಥವಾಗಿದ್ದು ತಾವೊಂದು ತೆಂಗಿನ ತೋಟಕ್ಕೆ ಕರೆತಂದಿದ್ದೇವೆಂದು. ಚಿಕ್ಕಚಿಕ್ಕ ನಾಲ್ಕಾರು ಗುಡಿಸಲುಗಳು. ಅವನ್ನು ದಾಟಿ ಹೋದ್ರೆ ತೆಂಗಿನಗರಿಗಳಲ್ಲೇ ನಿರ್ಮಾಣಗೊಂಡ ದೊಡ್ಡ ಬಿಲ್ಡಿಂಗ್. ವಿಚಿತ್ರವಾದ ತರತರದ ಶಬ್ದಗಳು. ಅದೇನೆಂದು ಇಬ್ಬರಿಗೂ ತಿಳಿಯಲಿಲ್ಲ. ಒಂದು ಮಾತು ಮಾತ್ರ ನಿಜ. ಒಳಗಡೆ ಭಾರಿ ಪ್ರಮಾಣದಲ್ಲಿ ಬೆಂಕಿ ಉರಿಯುತ್ತಿತ್ತು. ಆದರ ಶಾಖ, ಬೂದಿ ಸುತ್ತಲೂ

ಹರಡಿದ್ದನ್ನು ಇಬ್ಬರೂ ಗುರುತಿಸಿದರು. ಆದರ ಮುಂದೆ ಹಾದು ಹೋಗುವಾಗ ವಿಚಿತ್ರ ಆದರೆ ಪರಿಚಿತ ವಾಸನೆ. ಬೆಂಕಿಯಿಂದ ಹೊರಬಿದ್ದದ್ದು. ಆ ಬಗೆಯ ವಾಸನೆ ಮೂಲ ಮಾತ್ರ ತಿಳಿಯಲಿಲ್ಲ. ನೆನಪು ಆಗಲಿಲ್ಲ. ಹಾಗೇ ಮುಂದುವರೆದರು.

ಚಿಕ್ಕದಾದರೂ ಸ್ವಲ್ಪ ದೊಡ್ಡದೇ ಅನ್ನಬಹುದಾದ ಆರ್‌ಸಿಸಿ ಬಂಗ್ಲೆ. ಆದರ ಮುಂದೆ ಎರಡು ಮೂರು ಜೀಪು. ಒಂದು ಅಂಬಾಸಿಡರ್ ಕಾರು. ಅಶೋಕ ಗಮನಿಸಿದ್ದು ಜೀಪಿನ ಕಲರನ್ನು. ಸುಷಮಾ ನೋಟ್ ಮಾಡಿದ್ದು ಕಾರಿನ ನಂಬರನ್ನು. ಆಫೀಸಿನಂತಹ ಕಟ್ಟಡದಲ್ಲಿ ಪ್ರವೇಶಿಸಿದರು. ಅಲ್ಲಿ ಒಂದು ಟೇಬಲ್.. ನಾಲ್ಕಾರು ಕುರ್ಚಿಗಳು. ಟೇಬಲ್ ಮೇಲೆ ಎರಡು ಮೂರು ಫೋನುಗಳು. ಒಂದರ ಮೇಲೂ ನಂಬರ ಬರೆದಿರಲಿಲ್ಲ. ಬಹುಶಃ ಗುಪ್ತವಾಗಿಡಲು ಆ ರೀತಿ ಮಾಡಿರಬೇಕು. ಮೇಜಿನ ಬಳಿ ಇಬ್ಬರು ರೌಡಿಗಳು.

ಜಗ್ಗುದಾದಾನನ್ನು ನೋಡುತ್ತಲೂ ಆಫೀಸಿನಲ್ಲಿದ್ದ ಇಬ್ಬರೂ 'ಸಲಾಂ' ಹೊಡೆದು ಕುರ್ಚಿ ಬಿಟ್ಟುಕೊಟ್ಟರು. ಕುಳಿತುಕೊಂಡ ಜಗ್ಗು ಒಂದು ಫೋನಿನ ರಿಸೀವರ ಎತ್ತಿಕೊಂಡು ಒಂದು ನಂಬರ ಜೋಡಿಸಿದ. ಆ ಕಡೆಯಿಂದ ಪ್ರತಿಕ್ರಿಯೆ ಬರುತ್ತಲೇ ಮಾತನಾಡತೊಡಗಿದ.

"ಬಾಶಾ ಸಾಬ್... ನಾನು ಜಗ್ಗು. ಹಾಂ.. ಇಬ್ಬರು ನಮ್ಮ ಅತಿಥಿಗಳಾಗಿ ಬಂದಿದ್ದಾರೆ. ಚಂದ್ರಕಾಂತ ಮತ್ತು ಗಂಗಾಧರನನ್ನು ಹುಡುಕಿಕೊಂಡು ಬಂದವರು. ಸರಿ ಈಗಲೇ ಕಳಿಸಿಕೊಡ್ತೇವೆ. ನಾನೀಗ ಹೋಗಿ ನೀವು ಹೇಳಿದ ಕೆಲಸ ಮಾಡ್ತೇನೆ. ಅಚ್ಛಾ., ಸಲಾಮ್. ಖುದಾ ಹಾಫೀಜ್.." ರಿಸೀವರ ಕೆಳಗಿಟ್ಟು ಒಬ್ಬನನ್ನು ಹತ್ತಿರ ಕರೆದು ಅಪ್ಪಣೆ ನೀಡಿದ.

"ಸಿದ್ದು.. ಇವರಿಬ್ಬರನ್ನೂ ಛೋಟಾಬಾಸ್ ರೂಮಿನೊಳಗೆ ಕಳಿಸು. ಅನಂತರ ಅವರು ಹೇಳಿದಂತೆ ಮಾಡು. ನನಗೆ ಬೇರೆ ಕೆಲಸವಿದೆ. ನಾ ಹೊರಡ್ತೇನೆ"

ಸಿದ್ದು ತಲೆಯಾಡಿಸಿ 'ಸಲಾಂ' ನೀಡಿದ. ಪಿಸ್ತೂಲಿನಿಂದ ಅವರಿಬ್ಬರನ್ನೂ ಕವರ್ ಮಾಡಿ ಒಳಗೆ ಕರೆದುಕೊಂಡು ನಡೆದ. ಒಂದು ಇಪ್ಪತ್ತು ಮೂವತ್ತು ಅಡಿ ದೂರದಲ್ಲೊಂದು ಕೊಠಡಿ, ಬಾಗಿಲ ಮೇಲೆ ಬೆರಳಿನಿಂದ ಬಾರಿಸಿದ. ಉತ್ತರ ಬಂತು-'ಕಳಿಸಿಕೊಡು'. ಆತ ಹಿಂದೆ ಸರಿದ. ಬಾಗಿಲು ತಾನಾಗಿ ತೆರೆದುಕೊಂಡಿತು. ಸುಷಮಾ ಹಾಗೂ ಅಶೋಕರನ್ನು ಒಳಗೆ ಕಳಿಸಿದ. ಬಾಗಿಲು ತಾನಾಗಿ ಮುಚ್ಚಿಕೊಂಡಿತು. ಆದೊಂದು ಸೌಂಡ್ ಪ್ರೂಫ್ ಕೊಠಡಿ ಅಲ್ಲದಿದ್ದರೂ

ಅದಕ್ಕೇನೂ ಕಡಿಮೆಯಾಗಿರಲಿಲ್ಲ. ಒಳಗಿದ್ದವ ಒಬ್ಬನೇ ಒಬ್ಬ ವ್ಯಕ್ತಿ. ಮನಸ್ಸು ಮಾಡಿದ್ದರೆ ಅಶೋಕ ಮತ್ತು ಸುಷಮಾ ಸೇರಿ ಅವನನ್ನು ಚಚ್ಚಿಹಾಕಬಹುದಿತ್ತು. ಆದರಿಂದೇನೂ ಪ್ರಯೋಜನವಾಗಲಾರದು. ಹೊರಗೆ ಹೋಗುವ ಬಾಗಿಲದ ಮೇಲೆ ಅವನ ಹಿಡಿತವಿದ್ದುದರಿಂದ ಏನೇ ಆದರೂ ಹೊರಗೆ ಹೋಗುವುದು ಅವನನ್ನು ಅವಲಂಬಿಸಿತ್ತು.

''ಬನ್ನಿ ಮಿಸ್ಟರ್ ಅಶೋಕ.. ಸಾರ್ಜೆಂಟ ಸುಷಮಾ.. ಕುಳಿತುಕೊಳ್ಳಿ''

ಕನ್ನಡ ಮಾತನಾಡಿದರೂ ಅವನ ಉಚ್ಚಾರಣೆಯಿಂದಾಗಿ ಆತ ಕನ್ನಡಿಗನೇ ಅಷ್ಟೇ ಏಕೆ ಭಾರತೀಯನೂ ಅಲ್ಲ ಎಂದು ಸ್ಪಷ್ಟವಾಯಿತು ಇಬ್ಬರಿಗೂ. ಕೆಂಪು ಬಣ್ಣವಾಗಿದ್ದರೂ ಆತ ಯೂರೋಪಿಯನ್ ಆಗಿರಲಿಲ್ಲ. ಅಮೇರಿಕಾದವನೂ ಆಗಿರಲಿಲ್ಲ. ಹಾಗಾದರೆ ಹಾಗಾದರೆ... ಆತ ಖಂಡಿತವಾಗಿ....

ಯೋಚಿಸುತ್ತ ಇಬ್ಬರೂ ಕುಳಿತುಕೊಂಡರು. ಅವರೆದುರು ಕಾಫಿಯ ಬಟ್ಟಲನ್ನಿಟ್ಟು ಫ್ಲಾಸ್ಕಿನಿಂದ ಕಾಫಿ ಸುರಿದ ಛೋಟಾಬಾಸ್.

''ಧೈರ್ಯದಿಂದ ಕಾಫಿ ಕುಡಿಯಬಹುದು. ಅದರಲ್ಲಿ ಏನೂ ಬೆರೆಸಿಲ್ಲ''

ಅವರಿಬ್ಬರೂ ಕಾಫಿ ಕುಡಿಯುವವರೆಗೂ ಆತ ಏನೂ ಮಾತನಾಡಲಿಲ್ಲ.

''ಹಾಂ.. ಈಗ ಹೇಳಿ. ನಮ್ಮಿಂದೇನು ತಪ್ಪಾಗಿದೆ? ನಾನು ನಿಮಗೇನು ತೊಂದರೆ ಕೊಟ್ಟಿರುವೆ? ನೀವೇಕೆ ನನ್ನ ಹಿಂದೆ ಬಿದ್ದಿರುವಿರಿ?''

ಅಶೋಕ ಸುಷಮಾ ಒಬ್ಬರ ಮುಖ ಒಬ್ಬರು ನೋಡಿಕೊಂಡರು. ''ಮಿಸ್ಟರ್ ನೀವ್ಯಾರೋ ನನಗೆ ಗೊತ್ತಿಲ್ಲ. ಜೀವನದಲ್ಲಿ ಪ್ರಥಮ ಬಾರಿ ನಾವು ಸಂಧಿಸಿದ್ದೇವೆ. ಹೀಗಿರುವಾಗ ನಿಮ್ಮ ಹಿಂದೆ ನಾನೇಕೆ ಬೀಳಬೇಕು?''

ಮೊದಲು ನುಡಿದ ಸುಷಮಾಳ ಮಾತಿಗೆ ಆತ ಮುಗುಳ್ನಕ್ಕ. ''ನನ್ನ ಮುಂದೆ ನಿನ್ನ ಮಾತಿನ ಜಾಣ್ಮೆ ತೋರಿಸಬೇಡ ಸಾರ್ಜೆಂಟ್ ಸುಷಮಾ. ನೀವಿಬ್ಬರೂ ಮೇಜರ ಹೇಮಂತನ ಸಂಗಡಿಗರೆಂದು ನನಗೆ ಗೊತ್ತು. ಚಂದ್ರಕಾಂತ ಹಾಗೂ ಗಂಗಾಧರನ ಹಿಂದೆ ಬಿದ್ದಿರುವಾಗ ನಮ್ಮ ಜನರ ಕೈಗೆ ಸಿಕ್ಕಿ ಬಿದ್ದಿರುವಿರಿ..''

''ಯಾವ ಮೇಜರ ಹೇಮಂತ? ನನಗೊಂದು ತಿಳಿಯದು. ಗಂಗಾಧರ ಚಂದ್ರಕಾಂತ ಈ ಹೆಸರೂ ಸಹ ನನಗೆ ಅಪರಿಚಿತ. ನಾನು ಮಹಿಳೆಯನ್ನಂತೂ ಈ ಮೊದಲು ನೋಡೇ ಇಲ್ಲ. ದಾರಿಯಲ್ಲಿ ಹೋಗುವಾಗ ನನ್ನನ್ನು ಹಿಡಿದು ತಂದಿದ್ದಾರೆ ನಿಮ್ಮ ಜನ''

ವಾ..ವಾ..ವಾ.. ಚಪ್ಪಾಳೆ ತಟ್ಟಿದ ಆತ ಎದ್ದು ಅಶೋಕನ ಬಳಿ ಬಂದ.

"ನಿಮ್ಮ ನಟನೆ ಅದ್ಭುತ ಅಶೋಕ. ದಾರಿಯಲ್ಲಿ ಹೋಗುವಾಗ ಹಿಡಿದು ತರಲು ನಮಗೇನು ಹುಚ್ಚು ಹಿಡಿದಿದೆಯೇ? ಸ್ವಲ್ಪ ಇರಿ. ಮೇಜಿನ ಹಿಂದಿದ್ದ ಕುರ್ಚಿಯಲ್ಲಿ ಕುಳಿತಿದ್ದ ಆತ ಕೆಳಗೆ ಬಾಗಿ ಟೆಲಿಫೋನ್ ಎತ್ತಿ ಮೇಜಿನ ಮೇಲಿರಿಸಿದ. ನಂಬರ ಜೋಡಿಸಿದ. ಮಾತನಾಡಿದ.

"ಹಲೋ... ನನಗೆ ಮಿಸ್ಟರ ಹರಿವಂಶರಾಯ್ ಬೇಕಿತ್ತು. ಏನು ಇನ್ನೂ ಬಂದಿಲ್ಲವೆ? ನಿಜ ಹೇಳುತ್ತಿದ್ದೀರೋ ಹೇಗೆ? ಅರ್ಧಗಂಟೆಯಲ್ಲಿ ಮೂರು ಸಾರಿ ನಾನು ಫೋನು ಮಾಡಿರುವೆ. ಪ್ರತಿಬಾರಿಯೂ ಇದೇ ಉತ್ತರವೇ?"

ಸಿಟ್ಟಿನಿಂದ ರಿಸೀವರ ಕುಕ್ಕಿದ ಆತ ಇಬ್ಬರ ಕಡೆ ಹೊರಳಿದ.

"ಈಗಲಾದರೂ ಹೇಳಿ. ನೀವಿದ್ದ ಹೋಟೆಲ್.. ನಿಮ್ಮ ರೂಮು.. ನಿಮ್ಮ ಬಾಸ್ ಹೆಸರು ಗೊತ್ತಿರುವ ನನಗೆ ನೀವು ಯಾರೆಂದು ತಿಳಿಯಲು ಆಗದೆ? ಈಗಲೂ ಕಾರ್ಯ ಮಿಂಚಿಲ್ಲ. ನಿಜ ಹೇಳಿ ಬಿಡಿ. ನಿಮ್ಮನ್ನು ಬಿಡುಗಡೆ ಮಾಡುತ್ತೇವೆ"

ಸುಷಮಾ ಹಗುರಾಗಿ ನಕ್ಕು ಕೇಳಿದಳು. "ಮಿಸ್ಟರ್ ನಾವು ಸ್ವತಂತ್ರ ಭಾರತದ ಸ್ವತಂತ್ರ ಪ್ರಜೆಗಳು. ಎಲ್ಲಿ ಬೇಕಾದರೂ ಅಡ್ಡಾಡುವ ಅಧಿಕಾರ ನಮಗಿದೆ. ಹೀಗಿರುವಾಗ ನೀವು ನಮ್ಮನ್ನು ಬಂಧಿಸಿ ವಿಚಾರಣೆ ಮಾಡುತ್ತಿರುವುದು ಕಾಯ್ದೆ ಬಾಹಿರವಾದದ್ದು. ಇದರ ಬಗ್ಗೆ ನಾವು ಹೊರಗೆ ಹೋಗಿ ಕಂಪ್ಲೆಂಟ್ ಮಾಡಿದರೆ ನಿಮ್ಮ ಪರಿಸ್ಥಿತಿ ಏನಾಗುತ್ತದೆ ಗೊತ್ತೆ?"

ಅಟ್ಟಹಾಸ ಮಾಡಿ ನಕ್ಕ ಆತ ನುಡಿದ.

"ಸುಷಮಾ.. ನಿಮ್ಮ ಬಗ್ಗೆ ಕನಿಕರವುಂಟಾಗುತ್ತಿದೆ. ಆದರೊಂದಿಗೆ ಮೇಜರ ಹೇಮಂತನ ಸಹಚಾರಿಣಿ ಇಷ್ಟು ಮೂಢಳೇ? ಎಂದು ಕೆಡುಕೆನಿಸುತ್ತದೆ"

ಅಶೋಕ ಕಣ್ಣುಗಳನ್ನು ತಿಕ್ಕಿಕೊಂಡ. ಕಣ್ಣೆವೆ ಭಾರವಾಗತೊಡಗಿದ್ದವು. ಆದರ ಗುಟ್ಟು ತಿಳಿದಿತ್ತು ಅವರಿಗೆ. ಕಾಫಿಯನ್ನು ಬೆರೆತ ಮದ್ದಿನ ಪರಿಣಾಮ. ಸುಷಮಾಳಿಗೂ ಅದೇ ಅನುಭವ. ಆತ ನಗುತ್ತ ನಿಂತಿದ್ದ. ಇಬ್ಬರೂ ಅಲ್ಲಿಂದ ಎದ್ದು ಮೆಲ್ಲಮೆಲ್ಲನೆ ಅಡಿ ಇಡುತ್ತ ಸೋಫಾದ ಬಳಿ ಬಂದರು. ಅಷ್ಟೇ ಕಾಲಲ್ಲಿಯ ಶಕ್ತಿ ಕೈಕೊಟ್ಟಿತು. ಹಾಗೇ ಉರುಳಿದರು ಸೋಫಾದ ಮೇಲೆ.

ಅವಸರದಿಂದ ಬೀಗ ತೆರೆದ ಹೇಮಂತ, ಓಡುತ್ತಲೇ ಬಂದ ಟೆಲಿಫೋನ್ ಬಳಿಗೆ. ರಿಸೀವರ ಎತ್ತಿ "ಹರಿವಂಶರಾಯ್ ಸ್ಪೀಕಿಂಗ್" ಎನ್ನುತ್ತಾ ಸೋಫಾದಲ್ಲಿ ಕುಳಿತ. ಆ ಕಡೆಯಿಂದ ವಿಚಿತ್ರ ಉಚ್ಚಾರಣೆಯ ಧ್ವನಿ ಕೇಳಿಸಿತು.

"ಮೇಜರ ಹೇಮಂತ.. ನಿಮ್ಮ ಸಂಗಡಿಗರಿಬ್ಬರೂ ನನ್ನ ಕೈದಿಗಳಾಗಿದ್ದಾರೆ. ನಾನು ಹೇಳಿದಂತೆ ನೀನು ಕೇಳದಿದ್ದರೆ ಪರಿಸ್ಥಿತಿ ಸರಿಯಾಗದು"

"ನೀವ್ಯಾರೋ ನನಗೆ ತಿಳಿಯದು. ನನ್ನ ಹೆಸರು ಹರಿವಂಶರಾಯ್. ಮೇಜರ ಹೇಮಂತನಲ್ಲ. ನನ್ನ ಸಂಗಡಿಗರ್‍ಯಾರೂ ಇಲ್ಲ. ಈ ರೀತಿ ಅಸಭ್ಯತೆ ತೋರಿಸಬೇಡಿ"

"ಮೇಜರ ಹೇಮಂತ ನೀವು ಯಾರು? ನಿಮ್ಮ ಯೋಗ್ಯತೆ ಏನೆಂಬುದನ್ನು ನಾನು ಚೆನ್ನಾಗಿ ತಿಳಿದುಕೊಂಡಿರುವೆ. ಹೆಚ್ಚು ಮಾತನಾಡಿ ನನ್ನ ಸಮಯವನ್ನು ಹಾಳು ಮಾಡಿಕೊಳ್ಳಲಾರೆ. ನಾಳೆ ಸಾಯಂಕಾಲದೊಳಗಾಗಿ ನೀವು ರೂಮು ಖಾಲಿ ಮಾಡಿ ಊರ ಕಡೆ ಪ್ರಯಾಣ ಮಾಡಬೇಕು. ನಿಮಗಾಗಿ, ನಿಮ್ಮ ಮೂರೂ ಜನರಿಗಾಗಿ ನಾನು ಟಿಕೆಟ್ ರಿಜರ್ವ್ ಮಾಡಿಸಿದ್ದೇನೆ. ಚಾಮುಂಡಿ ಎಕ್ಸ್‌ಪ್ರೆಸ್‌ನಲ್ಲಿ. ನೀವು ತಯಾರಿ ಶುರುಮಾಡಿ. ಸರಿಯಾದ ಸಮಯಕ್ಕೆ ನಿಮ್ಮಿಬ್ಬರೂ ಸಂಗಡಿಗರನ್ನು ಅಲ್ಲಿಗೆ ತಲುಪಿಸುತ್ತೇವೆ. ತಪ್ಪಿದಿರೋ ಅವರ ಹೆಣ ನೋಡಬೇಕಾಗುತ್ತದೆ"

ಸಂಬಂಧ ಕಡಿದು ಹೋಗಿತ್ತು. ರಿಸೀವರ ಕೆಳಗಿಟ್ಟ ಹೇಮಂತ ಯೋಚನಾಮಗ್ನನಾದ. ಅಶೋಕ ಮತ್ತು ಸುಷಮಾ ಇಬ್ಬರೂ ಶತ್ರು ಬಲೆಯಲ್ಲಿ ಸಿಲುಕಿದ್ದು ಚಿಂತೆಗೀಡು ಮಾಡಿತ್ತು. ಅವರೇಕೆ ಈ ರೀತಿ ಮೈಮರೆತರು ಎಂದು ಯೋಚಿಸಿದ. ಇನ್‌ಸ್ಪೆಕ್ಟರ ಗಿರೀಶನ ಜೊತೆ ಸ್ವಲ್ಪ ಮಾತಾಡಿ ಒಂದು ತೀರ್ಮಾನಕ್ಕೆ ಬರುವದೆಂದಾತ ನಿರ್ಧರಿಸಿ ಫೋನು ಎತ್ತಿಕೊಂಡ. ಗಿರೀಶ ಆಫೀಸಿನಲ್ಲೇ ಇದ್ದ. ಕೂಡಲೇ ಹೊರಟು ಬರುವದಾಗಿ ತಿಳಿಸಿದ ಮೇಲೆ ರಿಸೀವರ ಕೆಳಗಿಟ್ಟು ಮೇಲೆದ್ದ.

ಹೇಳಿದಂತೆ ಗಿರೀಶ ಹದಿನೈದು ನಿಮಿಷಗಳಲ್ಲಿ ಹಾಜರಾದ. ಹೇಮಂತನಿಂದ ವಿಷಯ ತಿಳಿದು ದಂಗಾಗಿ ಕುಳಿತುಬಿಟ್ಟ.

"ಏನು ಗಿರೀಶ್ ಈ ರೀತಿ ಕುಳಿತು ಬಿಟ್ಟಿರಿ?"

"ಮತ್ತೇನು? ಎದ್ದು ಡಿಸ್ಕೋ ಡ್ಯಾನ್ಸ್ ಮಾಡಲಿ? ನನಗೆ ಸುಷಮಾ ಅಶೋಕರ ಚಿಂತೆ"

''ಅವರ ಚಿಂತೆ ಬಿಟ್ಟು ಬಿಡಿ. ನನಗರ ಮೇಲೆ ಭರವಸೆ ಇದೆ. ಮೊದಲು ನಿಮ್ಮ ಬಾಸ್‌ನನ್ನು ಕಾಣಬೇಕು. ಅವರು ಗ್ರೀನ್‌ಸಿಗ್ನಲ್ ಕೊಟ್ಟರೆ ನಾನು ಅಜಿತಪ್ರಸಾದನನ್ನು ವಿಚಾರಿಸುತ್ತೇನೆ''

''ಅಜಿತಪ್ರಸಾದನ ಬಗ್ಗೆ ನೀವು ತೆಗೆದುಕೊಂಡ ನಿರ್ಧಾರ ಸತ್ಯವೆ?''

''ಸಂಪೂರ್ಣ ಸತ್ಯ. ಆತ ಸಮಾಜದ್ರೋಹಿಗಳೊಂದಿಗೆ ಬೆರೆತಿದ್ದಾನೆ. ಅವರ ಕೈಗೊಂಬೆಯಾಗಿ ವರ್ತಿಸುತ್ತಿದ್ದಾನೆ. ವಿನಾಯಕನನ್ನು ಆತ ಎಲ್ಲೋ ಬಚ್ಚಿಟ್ಟಿದ್ದಾನೆ. ಅವನಿಂದ ನಮಗೆ ಸಾಕಷ್ಟು ಸಹಾಯ ದೊರೆಯಬಹುದು. ಅಲ್ಲವೆ. ಅಶೋಕ ಮತ್ತು ಸುಷಮಾ ಬಂಧನಕ್ಕೂ ಅವನೇ ಕಾರಣ''

''ಸರಿ ಹಾಗಾದರೆ ಬನ್ನಿ ನನ್ನ ಜೊತೆ''

ಇಬ್ಬರೂ ಮೇಲೆದ್ದರು. ಎಸ್.ಪಿ.ಸಾಹೇಬರು ಮನೆಯಲ್ಲೇ ಇದ್ದರು. ಗಿರೀಶ್‌ನಿಂದ ಹೇಮಂತ ಬಂದ ಸುದ್ದಿ ಕೇಳಿ ಭರದಿಂದ ಹೊರಬಂದ ಅವರು ಸಂಭ್ರಮದಿಂದ ಸ್ವಾಗತಿಸಿ ಒಳಗೆ ಕರೆದೊಯ್ದರು. ಕುಶಲ ಸಮಾಚಾರದ ನಂತರ ಹೇಮಂತ ಎಲ್ಲ ವಿಷಯ ತಿಳಿಸಿ ಹೇಳಿ ತನ್ನ ಅಭಿಪ್ರಾಯ ತಿಳಿಸಿದ.

''ನನ್ನ ಅನುಭವದ ಪ್ರಕಾರ ಅಜಿತಪ್ರಸಾದ ಕರ್ತವ್ಯನಿಷ್ಠ ಅಧಿಕಾರಿ ಅಲ್ಲ. ಅವನಿಂದ ಪೊಲೀಸ್ ಇಲಾಖೆಗೆ ಕಳಂಕ. ಶತ್ರುಗಳೊಂದಿಗೆ ಕೂಡಿಕೊಂಡು ಸಮಾಜಕಂಟಕ ಕಾರ್ಯದಲ್ಲಿ ತೊಡಗಿದ್ದಾನೆ. ವಿನಾಯಕ, ಗಂಗಾಧರ, ಬಸವರಾಜ, ಚಂದ್ರಕಾಂತನಂತಹ ಮಕ್ಕಳನ್ನು ಪುಸಲಾಯಿಸಿ ಚಿನ್ನದ ಕಳ್ಳಸಾಗಾಣಿಕೆಯಲ್ಲಿ ಸಿಕ್ಕಿಸುತ್ತಾನೆ. ವಿನಾಯಕ ಅವರ ರಹಸ್ಯ ತಿಳಿದವನಾಗಿರುವುದರಿಂದ ಅಪಹರಿಸಿ ಎಲ್ಲೋ ಬಚ್ಚಿಟ್ಟಿದ್ದಾನೆ. ಕಾಶೀಬಾಯಿ ಹೇಳಿಕೆ ಪ್ರಕಾರ ಆತ ಠಾಣೆಯ ಬಂದೀಗೃಹದಲ್ಲಿರಬೇಕು. ಆತ ಅಲ್ಲಿಲ್ಲ. ಅವನ ಮೇಲೆ ಯಾವುದೇ ಚಾರ್ಜುಶೀಟ ಇಲ್ಲ. ಇದನ್ನೆಲ್ಲ ಗಮನಿಸಿದರೆ ಅಜಿತ ಗೈರಕಾನೂನಿ ಕೆಲಸ ತೆಗೆದುಕೊಂಡಿದ್ದಾನೆ. ಆಮಿಷಕ್ಕೆ ಒಳಗಾಗಿ ವಿನಾಯಕನನ್ನು ತಂದು ಎಲ್ಲೋ ಬಚ್ಚಿಟ್ಟಿದ್ದಾನೆ ಅಥವಾ ಅವನ ಕಥೆ ಮುಗಿಸಿದ್ದಾನೆ. ನನಗೆ ಮೊದಲಿಸಿಂದಲೂ ಇದರ ಹಿಂದೆ ಯಾವುದೋ ಪೊಲೀಸ್ ಅಧಿಕಾರಿ ತಲೆ ಕೆಲಸ ಮಾಡುತ್ತಿದೆಯೆಂದು ಸಂಶಯ. ಈಗದು ಸಿದ್ಧವಾಗಿದೆ''

''ನೀವು ಹೇಳಿದ್ದು ನಿಜ ಮೇಜರ. ಒಂದು ಸಂಶಯ ನನಗೆ''

''ದಯವಿಟ್ಟು ಹೇಳಿ.. ಅದೇನೆಂದು''

''ಕಳ್ಳಸಾಗಾಣಿಕೆಯಲ್ಲಿ ಸಿಕ್ಕ ಮಕ್ಕಳನ್ನು ಹಿಡಿದು ಆತ ಶಿಕ್ಷೆ ಸಿಗುವಂತೆ

ಮಾಡಿದ್ದಾನೆ. ರಿಮಾಂಡ್‌ಹೋಂಗೆ ಸೇರಿಸಿದ್ದಾನೆ. ಇದರಲ್ಲಿ ಆತ ಶತ್ರುಗಳ ಜೊತೆ ಸೇರಿ ಸಮಾಜದ್ರೋಹಿ ಕೆಲಸವೇನು ಮಾಡಿದಂತಾಯ್ತು?''

''ಇದೂ ಒಂದು ಮೋಸ ಎಸ್.ಪಿ.ಸಾಹೇಬರೇ.. ಅಜಿತಪ್ರಸಾದನೇ ಆಗಿರಲಿ ಅಥವಾ ಅವರ ಜೊತೆಗಾರರೇ ಆಗಿರಲಿ ಅವರು ತುಂಬಾ ಚಾಣಾಕ್ಷರು. ದೊಡ್ಡಮೀನು ಹಿಡಿಯಲು ಚಿಕ್ಕ ಮೀನು ಎಸೆಯಬೇಕೆಂಬ ಮಾತನ್ನವರು ಚೆನ್ನಾಗಿ ಅರಿತಿದ್ದಾರೆ''

''ನನಗೆ ಅರ್ಥವಾಗಲಿಲ್ಲ. ದಯವಿಟ್ಟು ಬಿಡಿಸಿ ಹೇಳಿ''

''ಒಂದೆಡೆ ದೊಡ್ಡ ಪ್ರಮಾಣದಲ್ಲಿ ಚಿನ್ನ ಸಾಗಿಸಲಾಗುತ್ತದೆ. ಒಂದು ವೇಳೆ ಅದರ ಬಗ್ಗೆ ಪೊಲೀಸ್ ಇಲಾಖೆಗೆ ತಿಳಿದರೆ ಗತಿ ಏನು? ಅದಕ್ಕಾಗಿ ಇನ್ನೊಂದೆಡೆ ಚಿಕ್ಕ ಪ್ರಮಾಣದಲ್ಲಿ ಚಿನ್ನವನ್ನು ಚಂದ್ರಕಾಂತ, ವಿನಾಯಕನಂತಹ ಅಮಾಯಕ ಮಕ್ಕಳ ಕೈಯಿಂದ ಸಾಗಿಸಿ ತಾವೇ ಪೊಲೀಸರಿಗೆ ಇದರ ಬಗ್ಗೆ ಸುಳಿವು ನೀಡುತ್ತಾರೆ. ಆಗ ಪೊಲೀಸ್ ಇಲಾಖೆ ಈ ಮಕ್ಕಳ ಹಿಂದೆ ಬೀಳುತ್ತದೆ. ಅದೇ ಸಂದರ್ಭದಲ್ಲಿ ದೊಡ್ಡ ಪ್ರಮಾಣದ ಚಿನ್ನ ಯಾವ ತೊಂದರೆಯೂ ಇಲ್ಲದೇ ಸಾಗಿ ಹೋಗುತ್ತದೆ''

''ಓಹ್ ಓಹ್ ಎಂಥ ಮೋಸ?''

''ಇದರಲ್ಲಿ ಅಜಿತಪ್ರಸಾದರಂಥ ಪೊಲೀಸ್ ಅಧಿಕಾರಿಗಳೂ ಸೇರಿಕೊಂಡಿದ್ದು ದುರ್ದೈವ. ಅಂಥವರನ್ನೆಂದಿಗೂ ಕ್ಷಮಿಸಬಾರದು''

''ನನಗೆಲ್ಲಾ ಅರ್ಥವಾಯಿತು ಮೇಜರ್. ಇಂದಿನಿಂದ ಈ ಕೇಸನ್ನು ನಾನು ನಿಮಗೆ ಒಪ್ಪಿಸುತ್ತೇನೆ. ನಿಮ್ಮ ನಿರ್ದೇಶನದಂತೆ ನಮ್ಮ ಇಲಾಖೆ ಕೆಲಸ ಮಾಡುತ್ತದೆ. ಈಗ ಹೇಳಿ ನನ್ನಿಂದೇನಾಗಬೇಕು?''

''ಮೊದಲು ನೀವು ಮಾರ್ಕೆಟ್ ಠಾಣೆಗೆ 'ಸರ್ಪ್ರೈಜ್ ವಿಜಿಟ್' ಕೊಡಿ. ವಿನಾಯಕನ ಬಗ್ಗೆ ಅವನ ತಾಯಿ ದೂರು ನೀಡಿದ್ದಾಳೆಂದು ಹೇಳಿ ಚಾರ್ಜ್‌ಶೀಟ್ ಕೇಳಿ. ಎಫ್.ಐ.ಆರ್.ನಲ್ಲಿ ನಮೂದಿಸಿದ್ದೀಯಾ ಎಂದು ಕೇಳಿ. ಆತ ಸಿಕ್ಕಿ ಹಾಕಿಕೊಳ್ಳುತ್ತಾನೆ. ಕೂಡಲೇ ಸಸ್ಪೆಂಡ್ ಮಾಡಿ. ಮುಂದಿನ ಕೆಲಸ ನಾನು ನೋಡಿಕೊಳ್ಳುತ್ತೇನೆ''

''ಸರಿ ಹಾಗಾದರೆ ನಾನೀಗಲೇ ಹೊರಟೆ. ಆದ್ರೆ ವಿನಾಯಕನ ತಾಯಿ ಎಲ್ಲಿದ್ದಾಳೆ?''

''ಅದರ ಚಿಂತೆ ನನಗೆ ಬಿಡಿ. ನೀವು ಠಾಣೆ ಸೇರುವದರೊಳಗೆ ಆಕೆ

ಅಲ್ಲಿಗೆ ಬರುತ್ತಾಳೆ. ಅವಳ ಜೊತೆ ನಾನೂ ಸಹ... ಗಿರೀಶ್ ನಿಮ್ಮ ಜೊತೆ ಇರಲಿ''

''ಗುಡ್''

ಎಸ್.ಪಿ.ಯವರು ಹದಿನೈದು ನಿಮಿಷಗಳಲ್ಲಿ ಸಿದ್ಧರಾಗಿ ಬಂದರು. ಗಿರೀಶ ಠಾಣೆಗೆ ಫೋನು ಮಾಡಿದ್ದರಿಂದ ನಾಲ್ಕು ಜನ ಕಾನ್‌ಸ್ಟೇಬಲ್ ಸಹ ಬಂದಿದ್ದರು. ಎಸ್.ಪಿ.ಸಾಹೇಬರು ಕುಳಿತುಕೊಳ್ಳುತ್ತಿದ್ದಂತೆ ಗಿರೀಶನೇ ಜೀಪ್ ನಡೆಸಿದ.

ಅಜಿತಪ್ರಸಾದ ಠಾಣೆಯಲ್ಲಿರಲಿಲ್ಲ. ಅವನನ್ನು ಕರೆಯಲು ತಿಳಿಸಿದ ಎಸ್.ಪಿ. ಅವರು ಎಲ್ಲಾ ಕಾಗದ ಪತ್ರ ತೆಗೆದು ನೋಡಿ ಸಹಿ ಹಾಕಿದರು. ಸಂದರ್ಶನ ಪುಸ್ತಕದಲ್ಲಿ ತಾವು ಬಂದುದನ್ನು ನಮೂದಿಸಿದರು. ಎಫ್.ಐ.ಆರ್. ಕೋರ್ಟ್ ಬುಕ್ ಎಲ್ಲಾ ಪರಿಶೀಲಿಸಿ ಸಹಿ ಮಾಡಿ ಅಜಿತನ ದಾರಿ ಕಾಯುತ್ತ ಕುಳಿತರು.

ಅಜಿತ್ ಬಂದಾಗ ಹತ್ತೂವರೆ. ಕ್ಲಬ್‌ನಲ್ಲಿ ಇಸ್ಪೀಟ್ ಆಡುತ್ತಾ ಕುಳಿತಿದ್ದಾಗ ಗಿರೀಶ ಅವನನ್ನು ಹಿಡಿದಿದ್ದ. ಎಸ್.ಪಿ. ಅವರ ಆಕಸ್ಮಿಕ ಸಂದರ್ಶನಕ್ಕೆ ಆತ ಭೂಮಿಗಿಳಿದು ಹೋಗಿದ್ದ. ಆತ ಅತ್ತಿತ್ತ ಅಲ್ಲಾಡದಂತೆ, ಯಾರಿಗೂ ಫೋನು ಮಾಡದಂತೆ ಜಾಗ್ರತೆ ವಹಿಸಿ ಗಿರೀಶ ನೇರವಾಗಿ ಠಾಣೆಗೇ ಕರೆತಂದಿದ್ದ.

''ಅಜಿತ್‌ಪ್ರಸಾದ್, ವಿನಾಯಕ ಎಂಬ ಹುಡುಗನನ್ನು ನೀವು ಏಳೆಂಟು ತಿಂಗಳ ಹಿಂದೆ ಬಂಧಿಸಿ ತಂದಿದ್ದೀರಿ ಎಂದು ಅವನ ತಾಯಿ ಕಂಪ್ಲೆಂಟ್ ಮಾಡಿದ್ದಾಳೆ. ಅವನ ಅಪರಾಧವೇನು? ಅವನ ಬಗ್ಗೆ ಎಫ್.ಐ.ಆರ್.ದಲ್ಲಿ ನಮೂದಿಸಿದ್ದೀರಾ? ಚಾರ್ಜ್‌ಶೀಟ್ ಹಾಕಿ ಅವನನ್ನು ಕೋರ್ಟಿಗೆ ಹಾಜರ ಮಾಡಿದಿರಾ? ಎಲ್ಲದಕ್ಕೂ ಕೂಡಲೇ ಉತ್ತರಿಸಿರಿ''

''ಇದೆಲ್ಲಾ ಸುಳ್ಳು ಸರ್. ನಾನು ಯಾವ ಹುಡುಗನನ್ನು ಬಂಧಿಸಿಲ್ಲ. ಕಾಶೀಬಾಯಿ ಎಂಬುವವರ ಬಗ್ಗೆ ನನಗೇನೂ ತಿಳಿದಿಲ್ಲ''

''ಕಾಶೀಬಾಯಿ ಎಂದರೆ ಯಾರು?''

''ವಿನಾಯಕನ ತಾಯಿ ಸರ್''

''ವಿನಾಯಕನ ಬಗ್ಗೆ ಏನೂ ತಿಳಿದಿಲ್ಲ ಎಂದಿರಿ. ಈಗ ನೀವಾಗಿಯೇ ಕಾಶೀಬಾಯಿ ಹೆಸರು ತೆಗೆದಿರಿ. ಈ ಹೆಸರು ನನಗೂ ಸಹ ತಿಳಿದಿರಲಿಲ್ಲ. ಇದರಿಂದ ನಿಮಗೆಲ್ಲಾ ಗೊತ್ತಿದೆ ಎಂದಂತಾಯಿತು. ಹೇಳಿ.. ಹೇಳಲು ಏನಾದರೂ ದಾರಿ ಇದ್ದರೆ ತಾನೇ?'' ಆತ ತಲೆ ತಗ್ಗಿಸಿದ. ಆದೇ ಸಮಯಕ್ಕೆ ಸರಿಯಾಗಿ ಕಾಶೀಬಾಯಿ ಓಡುತ್ತ ಬಂದು ಅವನ ಕಾಲು ಹಿಡಿದುಕೊಂಡು ಕೇಳಿದಳು.

"ಸಾಹೇಬ್ ಹೇಳಿ ನನ್ನ ಮಗ ವಿನಾಯಕ ಎಲ್ಲಿ? ನಿಮ್ಮ ಕಾಲು ಬೀಳ್ತೀನೆ. ನನ್ನ ಮಗನ್ನ ನನಗೆ ಒಪ್ಪಿಸಿಕೊಡಿ ಅವನ್ನ ಕರೆದುಕೊಂಡು ಎಲ್ಲಾದರೂ ದೂರ ಹೋಗಿಬಿಡ್ತೇನೆ"

67902 KR

ಅಜಿತ ಭೂಮಿಗಿಳಿದು ಹೋದ. ಸಾಹೇಬರ ಮುಂದೆ ಇದಾಗಬೇಕೆ? ಎಸ್.ಪಿ. ಸಾಹೇಬರು ಕಾಶೀಬಾಯಿಯನ್ನು ಹತ್ತಿರ ಕರೆದು ಎಲ್ಲ ವಿಚಾರಿಸಿ ಹೇಳಿಕೆ ಬರೆದುಕೊಡುವಂತೆ ಹೇಳಿದರು. ಗಿರೀಶ ಅವಳಿಂದ ಹೇಳಿಕೆ ಪಡೆದು ಸಹಿ ಮಾಡಿಸಿಕೊಂಡು ಅದನ್ನು ಸಾಹೇಬರ ಕೈಗೆ ಕೊಟ್ಟ. ಅದರ ಮೇಲೆ ತಮ್ಮ ರುಜು ಹಾಕಿದ ಎಸ್.ಪಿ. ಅವರು ಅಜಿತ್‌ಗೆ ಹೇಳಿದರು.

"ನಿನ್ನನ್ನು ಈ ಕ್ಷಣದಿಂದ ಸಸ್ಪೆಂಡ್ ಮಾಡಿದ್ದೇನೆ. ನಿನ್ನ ಮೇಲೆ ಇಲಾಖೆಯು ವಿಚಾರಣೆ ನಡೆಸುತ್ತದೆ. ಅಲ್ಲಿಯವರೆಗೂ ನೀನು ಈ ಊರನ್ನು ಬಿಟ್ಟು ಎಲ್ಲಿಗೂ ಹೋಗಕೂಡದು. ಪ್ರತಿದಿನ ನನ್ನನ್ನು ಭೆಟ್ಟಿಯಾಗಬೇಕು"

ಅಜಿತ್ ಬೆಲ್ಟ ಬಿಚ್ಚಿ ಅವರ ಮುಂದಿಟ್ಟ. ರಿವಾಲ್ವರ ಸಹ ಅವರಿಗೆ ಒಪ್ಪಿಸಿದ. ಮಾರ್ಕೆಟ್ ಠಾಣೆಯ ಚಾರ್ಜೂ ಸಹ ಗಿರೀಶನ ಕೈಗೆ ಬಂದಿತು. ಎಸ್.ಪಿ.ಸಾಹೇಬರು ಮೇಲೆದ್ದರು. ಅಜಿತ್‌ಪ್ರಸಾದ ನಿಂತೇ ಇದ್ದ.

"ಅಜಿತ್.. ಇನ್ನೂ ಕಾರ್ಯ ಮಿಂಚಿಲ್ಲ. ನೀನು ಮಾಡಿದ ತಪ್ಪಿಗೆ ಕ್ಷಮೆ ಕೇಳಿ ಬರೆದುಕೊಡು.. ವಿನಾಯಕನನ್ನು ತಂದು ಒಪ್ಪಿಸು. ನಿನಗೇ ಒಳ್ಳೆಯದಾಗುತ್ತದೆ"

ಅಜಿತ್ ತಲೆ ತಗ್ಗಿಸಿ ನಿಂತವ ಅವರತ್ತ ನೋಡಲೂ ಇಲ್ಲ.

"ಸರಿ ನಿನ್ನ ಪ್ರಾರಬ್ಧಕ್ಕೆ ನಾನೇನು ಮಾಡಲಿಕ್ಕೆ ಆಗುತ್ತೆ. ಅನುಭವಿಸು?"

ಗಿರೀಶ ಜೀಪಿನಲ್ಲಿ ಸಿದ್ಧವಾಗಿ ಕುಳಿತಿದ್ದ. ಎಸ್.ಪಿ. ಸಾಹೇಬರು ಬಂದು ಕುಳಿತುಕೊಳ್ಳುತ್ತಿದ್ದಂತೆ ಜೀಪ್ ಓಡಿಸಿದ. ಜೀಪು ಹೋದ ಐದು ನಿಮಿಷಗಳ ನಂತರ ಅಜಿತಪ್ರಸಾದ ಹೊರಗೆ ಬಂದ. ಅವನ ಜೊತೆ ಒಬ್ಬ ಕಾನ್‌ಸ್ಟೇಬಲ್. ಅಜಿತ ಅವನ ಜೊತೆ ಕೆಲಹೊತ್ತು ಮಾತನಾಡಿ ಕೈಗೆ ನೂರಾರು ರೂಪಾಯಿ ಕೊಟ್ಟು ಕಳಿಸಿದ. ಹೋಗುತ್ತಿರುವಾಗಲೇ ಪಕ್ಕದಲ್ಲೊಂದು ಟ್ಯಾಕ್ಸಿ ಬರುವುದನ್ನು ಕಂಡು ಕೈ ಮಾಡಿದ. ಟ್ಯಾಕ್ಸಿ ನಿಲ್ಲುತ್ತಲೂ ಹಿಂದಿನ ಸೀಟಿನಲ್ಲಿ ಕುಳಿತು 'ಜಂಟಲಮೆನ್ ಕ್ಲಬ್'ಗೆ ನಡೆ ಎಂದ. ಟ್ಯಾಕ್ಸಿ ಡ್ರೈವರ್ ಮೀಟರ್ ಹಾಕಿ ಟ್ಯಾಕ್ಸಿ ಓಡಿಸತೊಡಗಿದ. ಅಜಿತ್ ಹಿಂದೆ ತಲೆ ಆನಿಸಿದ. ಕಣ್ಣು ಮುಚ್ಚಿ ಯೋಚಿಸತೊಡಗಿದ.

DES N 95

ಐದು ನಿಮಿಷಗಳು ಕಳೆದವು. ಹತ್ತು ನಿಮಿಷ ಸರಿದು ಹೋದವು. ಟ್ಯಾಕ್ಸಿ ನಿಲ್ಲದಾಗ ಕಣ್ತೆರೆದು ಕೇಳಿದ.

''ಡ್ರೈವರ್... ಕ್ಲಬ್ ಇನ್ನೂ ಬರಲಿಲ್ಲವೇ? ಎತ್ತೆತ್ತ ಸುತ್ತುತ್ತಿರುವೆ?''

''ಸಾಹೇಬ ಅಲ್ಲಿ ಆಕ್ಸಿಡೆಂಟ್ ಆಗಿ ಟ್ರಾಫಿಕ್ ಜಾಮ್ ಆಗಿದೆ. ಇನ್ನೊಂದ್ಯೆದು ನಿಮಿಷ. ಬಂದೇ ಬಿಡ್ತು''

ಸಮಾಧಾನದಿಂದ ಮತ್ತೆ ಕಣ್ಣು ಮುಚ್ಚಿದ. ಆತ ಕಣ್ಣು ತೆರೆದದ್ದು ಟ್ಯಾಕ್ಸಿ ನಿಂತಾಗಲೇ. ಬಾಗಿಲು ತೆಗೆದು ಕೆಳಗಿಳಿದು ಜೇಬಿಗೆ ಕೈಹಾಕುತ್ತ 'ಎಷ್ಟಾಯಿತು?' ಎಂದು ಕೇಳುತ್ತಲೂ ಸುತ್ತಲೂ ದೃಷ್ಟಿ ಹರಿಸಿ ಗಾಬರಿಯಿಂದ ಕೇಳಿದ. ''ಎಲ್ಲಿಗೆ ಕರೆತಂದೆ?''

ಟ್ಯಾಕ್ಸಿ ಸ್ಮಶಾನದೆದುರು ನಿಂತಿತ್ತು.

''ಎಲ್ಲಿಗೆ ಕರೆತರಬೇಕಾಗಿತ್ತೋ ಅಲ್ಲಿಗೆ..''

ಕೋಪದಿಂದ ಹಲ್ಲು ಕಡಿಯುತ್ತ ಟ್ಯಾಕ್ಸಿ ಡ್ರೈವರ್ ಕಡೆ ನುಗ್ಗಿದ. ಹಾಗೇ ಕಲ್ಲಿನಂತೆ ನಿಂತುಬಿಟ್ಟ. ಎದುರಿಗೆ ನಿಂತವ ಟ್ಯಾಕ್ಸಿ ಡ್ರೈವರ್ ವೇಷದಲ್ಲಿದ್ದ ಮೇಜರ ಹೇಮಂತ. ಆತ ನಗುತ್ತಿದ್ದ. ''ಅಜಿತ್‌ಪ್ರಸಾದ್... ಇಲ್ಲಿಯವರೆಗೂ ನಿನ್ನಾಟ ನಡೆಯಿತು. ಇನ್ನು ಮೇಲೆ ನನ್ನಾಟ ಆರಂಭ..''

ಆದರರ್ಥ ತಿಳಿದ ಅಜಿತ ಗಡಗಡ ನಡುಗಿದ.

ಸುಮಾರು ಮೂರು ಗಂಟೆಗಳ ನಂತರ ಸುಷಮಾ ಮತ್ತು ಅಶೋಕನಿಗೆ ಎಚ್ಚರವಾಯಿತು. ಮೊದಲು ಎಚ್ಚರವಾದದ್ದು ಅಶೋಕನಿಗೆ. ಕಣ್ತೆರೆದಾಗ ಆತ ಒಂದು ಸಾದಾ ರೂಮಿನಲ್ಲಿ ಕಾಟ್ ಮೇಲಿದ್ದ. ಪಕ್ಕದ ಕಾಟ್ ಮೇಲೆ ಸುಷ್ಮ ಮಲಗಿದ್ದು ಕಂಡು ಮನಸ್ಸಿಗೆ ಹಾಯೆನಿಸಿತು. ಯಾವ ಅನಿಷ್ಟ ನಡೆದಿಲ್ಲ. ನಮ್ಮನ್ನು ಎಚ್ಚರ ತಪ್ಪಿಸಿ ಪಾಪಕಾರ್ಯಕ್ಕಿಳಿದಿಲ್ಲವೆಂದುಕೊಂಡು ಮೇಲೆದ್ದ. ಬಾತ್‌ರೂಮು ಕಣ್ಣಿಗೆ ಬಿದ್ದಿತು. ಎದ್ದು ಮುಖ ತೊಳೆದು ಬಂದ. ಒಂದು ಬಾರಿ ಕೋಣೆಯನ್ನೆಲ್ಲ ಜಾಲಾಡಿಸಿದ. ಸೂಕ್ಷ್ಮವಾಗಿ ನಿರೀಕ್ಷಿಸಿದ. ಮೂರು ನಾಲ್ಕು ಕಡೆ ಗುಪ್ತ ಮೈಕ್ ಇರಿಸಿದ್ದು ದೃಷ್ಟಿಗೆ ಬಿದ್ದಿತು. ಎಚ್ಚರವಾದ ಮೇಲೆ ನಾವು ಏನು ಮಾಡುತ್ತೇವೆ ಎಂಬುದನ್ನು ತಿಳಿದುಕೊಳ್ಳಲು ಈ ಉಪಾಯವೆಂದು

ಅರಿತ.

ನಾಲ್ಕಾರು ನಿಮಿಷಗಳಲ್ಲಿ ಸುಷಮಾಳಿಗೆ ಎಚ್ಚರ ಬರುವ ಲಕ್ಷಣಗಳು ಕಂಡುಬಂದವು. ಸಾವಕಾಶವಾಗಿ ಕಣ್ಣು ತೆರೆದ ಆಕೆ ಕ್ಷೀಣವಾಗಿ ನರಳಿದಳು. ಎದುರಿಗೆ ಕಂಡದ್ದು ಅಶೋಕನನ್ನು. ಅಶೋಕ ತನ್ನ ತುಟಿಗಳ ಮೇಲೆ ಬೆರಳಿಟ್ಟು ಸನ್ನೆಯಿಂದಲೇ ಗುಪ್ತವಾಗಿ ಮೈಕ್ ಇರಿಸಿದ್ದು ತಿಳಿಸಿ ತನ್ನ ಕಾಟಿನತ್ತ ಸರಿದ. ಆ..ಊಹ್.. ಎಂದು ಆಕಳಿಸಿದಂತೆ ನಟನೆ ಮಾಡಿದ ಸುಷಮಾ ಒಮ್ಮೆಲೆ ಬೆಚ್ಚಿ "ಅಂ.. ನಾನೆಲ್ಲಿದ್ದೇನೆ. ಇಲ್ಲಿಗೆ ಹೇಗೆ ಬಂದೆ? ಅಯ್ಯೋ ದೇವರೆ" ಎಂದು ಉದ್ಗರಿಸಿದಳು.

"ನನಗೊಂದೂ ಗೊತ್ತಿಲ್ಲ ಮೇಡಂ. ನಾನು ಸಹ ಕಣ್ಣು ತೆರೆದಾಗ ಇಲ್ಲಿದ್ದೆ"

"ಇಲ್ಲ ನೀನು ಸುಳ್ಳು ಹೇಳ್ತಿದೀಯಾ... ಇದರಲ್ಲಿ ನಿನ್ನದೇ ಮೋಸವಡಗಿದೆ. ನಾ ನಿನ್ನ ಜೀವಂತ ಬಿಡುವುದಿಲ್ಲ"

"ಬೇಡಿ ಬೇಡಿ. ನನ್ನ ಮಾತು ಕೇಳಿ. ನಿಜವಾಗಿಯೂ ನನ್ನ ಹೆಂಡತಿ ಆಣೆಯಾಗಿಯೂ ನನಗೇನೂ ಗೊತ್ತಿಲ್ಲ. ನನ್ನ ಹೆಂಡತಿ ಮೇಲೆ ದಯೆ ತೋರಿ. ಆಕೆಗೆ ನಾನೊಬ್ಬನೇ ಗಂಡ ಪ್ಲೀಜ್"

"ನೀನು ನಿನ್ನ ಹೆಂಡತಿ ಆಣೆ ಮಾಡ್ತಿ ಅಂದ್ಮೇಲೆ ನೀನು ಖಂಡಿತವಾಗಿಯೂ ಪತಿವ್ರತಾ ಪತಿ ಇರುವೆ. ಅದಕ್ಕಾಗಿ ನಿನ್ನ ಬಿಡ್ತಾ ಇದೇನೆ. ಸ್ವಲ್ಪ ಇರು. ಇದೀಗ ಬಂದೆ"

"ಉಶ್ ಬದುಕಿದೆ" ಎಂದ ಜೋರಾಗಿ ಅಶೋಕ. ಅವನೆಡೆ ನೋಡಿ ಕಣ್ಣು ಮಿಟುಕಿಸಿ ನಕ್ಕ ಸುಷಮಾ ಬಾತ್‌ರೂಮ ಸೇರಿ ಜೋರಾಗಿ ಬಾಗಿಲು ಹಾಕಿಕೊಂಡಳು. ಎರಡು ಮೂರು ನಿಮಿಷ ಮೌನ. ಮತ್ತೆ ಬಾಗಿಲು ತೆರೆದು ಮುಖ ಒರೆಸಿಕೊಳ್ಳುತ್ತ ಬಂದ ಆಕೆ ಮಾತು ಮುಂದುವರಿಸಿದಳು. ಅಷ್ಟರಲ್ಲಿ ಅಶೋಕ ಜೇಬಿನಲ್ಲಿದ್ದ ಚಿಕ್ಕ ಸೀಸೆಯಿಂದ ಮಾತ್ರೆಗಳನ್ನು ತೆಗೆದು ಹೊರಗಿಟ್ಟಿದ್ದ. ಕೆಂಪು, ನೀಲಿ, ಹಸಿರು ಬಣ್ಣದ ಮಾತ್ರೆಗಳು. ಮಾತ್ರೆಗಳನ್ನು ಕಂಡು ಸುಷಮಾಳ ಮುಖ ಹೂವಿನಂತೆ ಅರಳಿತು. ಹಸಿರು ಹಾಗೂ ನೀಲಿ ಬಣ್ಣದ ಮಾತ್ರೆಗಳನ್ನು ತೆಗೆದು ಭದ್ರವಾಗಿ ತನ್ನ ಬಳಿ ಇಟ್ಟುಕೊಂಡಳು. ಮತ್ತೆ ಮಾತಿಗೆ ಆರಂಭವಾಯಿತು.

"ಮಿಸ್ಟರ್ ನಿನ್ನ ಹೆಸರೇನು?"

"ಮೋಹನಚಂದ ಕರಮಚಂದ ಭೀಖಮಜಿ... ಆಲೂಗಡ್ಡೆ ವ್ಯಾಪಾರಿ"

''ಮತ್ತೆ ನಿನ್ನೇಕೆ ಅವರು ಅಶೋಕ ಅಂತಾ ಇದ್ರು''

''ನನಗೆ ತಿಳಿಯದು. ನಿನಗೆ ಸುಷಮಾ ಅಂತಿದ್ರಲ್ಲ. ನೀನು ಸುಷಮಾನ?''

''ಅಲ್ಲ. ನಾನು ರಜನಿ. ಟೈಪಿಸ್ಟ್. ಹೇಮಂತ ಅಂತೆ, ಮೇಜರ ಅಂತೆ, ಅವರ ಹೆಸರೇ ನಾನು ಕೇಳಿಲ್ಲ. ಅಂದ್ಮೇಲೆ...''

ಟಕ್..ಟಕ್.. ಬಾಗಿಲ ಮೇಲೆ ಬಾರಿಸಿದ ಸದ್ದು. ಅದರ ಜೊತೆ ತಾನೇ ಬಾಗಿಲು ತೆಗೆದುಕೊಂಡು ಒಳಗೆ ಬಂದ ಭೋಟಾಬಾಸ್. ಅವನ ಮುಖ ಉಗ್ರವಾಗಿತ್ತು. ಕೆಂಪಗೆ ಕಾದಿತ್ತು. ಅವರಿಬ್ಬರ ಕಡೆ ಕೆಕ್ಕರಿಸಿ ನೋಡಿ ಕೆಟ್ಟಧ್ವನಿಯಲ್ಲಿ ಚೀರಿಚೀರಿ ಮಾತನಾಡಿದ.

''ಸಾಕು ಮಾಡಿ ನಿಮ್ಮ ಹಾಳು ಹರಟೇನಾ... ನನ್ನನ್ನು ಬುದ್ದು ಎಂದು ತಿಳಿದಿರೇನು? ನೀವಿಬ್ರು ಯಾರು ಏನು ಅಂತ ಎಲ್ಲಾ ನನಗೆ ಗೊತ್ತಿದೆ. ನನ್ನ ಮುಂದೆ ನಿಮ್ಮ ಬಾಲ ಬಿಚ್ಚಲು ಪ್ರಯತ್ನಿಸಬೇಡಿ. ಪರಿಣಾಮ ನೆಟ್ಟಗಾಗದು''

ಸಿಟ್ಟಿನ ಭರದಲ್ಲಿ ಆತ ಚೀರಾಡಿದಾಗ ಸುಷಮಾಳಿಗೆ ನಗೆಯುಕ್ಕಿ ಬಂದಿತ್ತು. ಅವನಿಗಿಂತ ಚೆನ್ನಾಗಿ ಕನ್ನಡ ಬ್ರಿಟಿಶರು ಮಾತನಾಡುತ್ತಿದ್ದರು. ಈತ ಕಷ್ಟಪಟ್ಟು ಉಚ್ಚರಿಸಿದ್ದು ನಗೆಗೆ ಕಾರಣವಾಗಿತ್ತು.

ಗಾಬರಿಯಿಂದ ಅಶೋಕ ಕಕ್ಕಾವಿಕ್ಕಿಯಾಗಿ ತಾಯಿಯಿಂದ ತಪ್ಪಿಸಿಕೊಂಡು ಬಂದ ಕಪಿಯಂತೆ ಭೋಟಾಬಾಸ್‌ನನ್ನು ನೋಡುತ್ತಿದ್ದ.

''ಅಶೋಕ ಹೀಗೇಕೆ ನನ್ನ ನೋಡುತ್ತಿರುವೆ'' ಮುಜುಗರದಿಂದ ಆತ ಕೇಳಿದ.

''ನನ್ನ ಹೆಸರು ಮೋಹನಚಂದ ಕರಮಚಂದ ಭೀಖಮಜಿ..ಅಶೋಕ ಅಲ್ಲ''

''ಏನಂದೆ? ನೀನು ಅಶೋಕ ಅಲ್ಲವೆ?''

''ಅಲ್ಲ. ನಾನು ಮೋಹನಚಂದ.. ಆಲೂಗಡ್ಡೆ ವ್ಯಾಪಾರಿ'' ಅಮಾಯಕನಂತೆ ನುಡಿದ.

ಭೋಟಾಬಾಸ್‌ಗೆ ಮಿತಿಮೀರಿದ ಕೋಪ ಬಂದಿತು. ಅಶೋಕನ ಮೇಲೆ ಬಿದ್ದು ಫಟ್....ಫಟ್... ಎಂದು ಎರಡು ಗುದ್ದು ಕೊಟ್ಟ. ಆ ಗುದ್ದಿಗೆ ನೋವಿನಿಂದ ಚೀರುತ್ತ ನೆಲಕಚ್ಚಿದ ಅಶೋಕ ಸುಷಮಾ ಕಡೆ ನೋಡಿ ಕಣ್ಣು ಮಿಟುಕಿಸಿದ. ಅವಳೂ ಸಹ ಸನ್ನೆ ಮಾಡಿ ''ತುಂಬಾ ಚೆನ್ನಾಗಿದೆ ಆಕ್ಟಿಂಗ್'' ಎಂದಳು. ಕಣ್ತೆರೆದು ಮುಚ್ಚುವದರೊಳಗೆ ಅಶೋಕ ಬಲಗೈ ಮುಷ್ಠಿಯಲ್ಲಿ ಭದ್ರವಾಗಿ ಹಿಡಿದಿದ್ದ ಎರಡು ಕೆಂಪು ಮಾತ್ರೆ ಬಾಯಿಗಿಳಿಸಿದ್ದ.

ನೆಲಕ್ಕೆ ಬಿದ್ದಿದ್ದ ಅಶೋಕನನ್ನು ಕ್ಷಣಕಾಲ ದಿಟ್ಟಿಸಿದ ಭೋಟಾಬಾಸ್ ಆತ

ಮಿಸುಕದಾಗಲು ಸುಷಮಾ ಕಡೆ ಹೊರಳಿದ.

"ಈಗ ನಿನ್ನ ಸರದಿ. ಸರಿಯಾಗಿ ಯೋಚಿಸಿ ಹೇಳು. ನೀನು ಸುಷಮಾ ತಾನೆ?"

"ಅಲ್ಲ ನಾನು ರಜನಿ. ಟೈಪಿಸ್ಟ್"

ಛೋಟಾಬಾಸ್‌ನ ಕೈ ಮೇಲೆದ್ದಿತು. ಅದರ ಗುರಿ ಅವಳ ಎಡಕೆನ್ನೆ. ಅದು ಕೆನ್ನೆ ಸೋಂಕುವ ಮುನ್ನವೇ ಮಧ್ಯದಲ್ಲೇ ಜೀವ ಹಾರಿ ಹೋಗುವಂತೆ ಚೀರಿಕೊಂಡಳು ಸುಷಮಾ.

"ನೋ.. ನೀ ನನಗೆ ಹೊಡೆಯಬೇಡ. ಹೊಡೆದರೆ ನಾ ಸತ್ತೇ ಹೋಗ್ತೇನೆ"

"ನೀ ಸತ್ತರೂ ಅಷ್ಟೆ. ಬದುಕಿದರೂ ಅಷ್ಟೇ. ನನ್ನ ಕೆಲಸಕ್ಕೆ ನೀವು ಬರದಿದ್ದ ನೀವು ಏನಾದರೂ ನನಗೆ ಅಷ್ಟೇ.."

"ಹಾಗಾದ್ರೆ ಬಿಟ್ಟುಬಿಡು. ನನ್ನ ಕೊಲ್ಲಬೇಡ. ನನ್ನ ಗಂಡನಿಗೆ ನಾನೊಬ್ಬೆ ಹೆಂಡತಿ. ನಾ ಸತ್ರೆ ಆತ..."

"ಸ್ಟಾಪ್..ಸ್ಟಾಪ್. ನನ್ನ ತಲೆ ತಿನ್ನಬೇಡ. ನಿನಗೆ ಕೊನೆ ಅವಕಾಶ ಸರಿಯಾಗಿ ಉತ್ತರಕೊಡು. ಇಲ್ಲದಿದ್ರೆ ಅಶೋಕನಿಗಾದ ಗತಿಯೇ ನಿನಗೆ ಆಗುತ್ತೆ. ಹುಷಾರ್"

ಅಶೋಕನೆಡೆ ನೋಡಿ ಕಿಟಾರನೆ ಕಿರುಚಿಕೊಂಡಳು ಸುಷಮಾ. ಅವನ ಬಾಯಿಯಿಂದ ಕೆಂಪಾದ ರಕ್ತ ಬುಗ್ಗೆ ಬುಗ್ಗೆಯಾಗಿ ಹರಿದು ಬರುತ್ತಿತ್ತು. ಅವನ ಕಣ್ಣುಗಳು ಬೆಳ್ಳಗಾಗಿದ್ದವು.

ಛೋಟಾಬಾಸ್ ಗಾಬರಿಯಾಗಿ ಇದೇನಾಯಿತು ಎಂದು ಯೋಚಿಸುತ್ತಿದ್ದಂತೆ ಅವನನ್ನಪ್ಪಿದ್ದಳು ಸುಷಮಾ ಥರಥರ ಕಂಪಿಸುತ್ತ.

"ನನಗೆ ಭಯವಾಗುತ್ತದೆ. ನನ್ನ ಬಿಟ್ಟು ಹೋಗಬೇಡ"

"ಏಯ್ ಬಿಡು ನನ್ನ. ದೂರಸರಿ"

ಸುಂದರ ಹೆಣ್ಣು ತಾನೇ ತಾನಾಗಿ ಬಂದು ಅಪ್ಪಿದ್ದರೂ ಅವಳನ್ನು ಓಲೈಸುವಷ್ಟು ಸಮಾಧಾನವಿರಲಿಲ್ಲ ಛೋಟಾಬಾಸ್‌ಗೆ. ಅಶೋಕ ಮಹತ್ವದ ವ್ಯಕ್ತಿಯಾಗಿದ್ದ. ಹೇಮಂತನ ಸಹಕಾರಿ ಆತ. ಸುಷಮಾಳ ಎದುರೇ ಅವನನ್ನು ಹೊಡೆದಿದ್ದ. ಈ ವಿಷಯ "ಬಡೇಸಾಬ್"ಗೆ ತಿಳಿದರೆ ತನ್ನ ಗತಿ ಏನು?

ಇದನ್ನೆಲ್ಲ ತೆಗೆದುಕೊಂಡು ಸುಷಮಾ ಮಾಡುವದೇನು? ಆಕೆ ಮತ್ತೆ ಮತ್ತೆ ಅವನ ಮೇಲೆ ಬೀಳುತ್ತಿದ್ದಳು. ಆತ ದೂರ ಸರಿಯುತ್ತಿದ್ದ. ಈ

ಕೊಸರಾಟದಲ್ಲಿ ನೀಲಿ ಬಣ್ಣದ 'ಕ್ಯಾಪ್ಸೂಲ್ ಮಾತ್ರೆ' ಅವನ ಜೇಬಿಗಿಳಿದಿತ್ತು. ಆವಳು ಮಾತ್ರೆಯನ್ನು ಜಿಗುಟಿ ಅದರಲ್ಲಿ ಛಿದ್ರ ಮಾಡಿಯೇ ಅವನ ಜೇಬಿಗಿಳಿಸಿದ್ದಳು. ಬಾಗಿಲಿಗೆ ಬಂದ ಛೋಟಾಬಾಸ್ ಹೊರಗಿದ್ದ ಇಬ್ಬರನ್ನು ಒಳಗೆ ಕರೆದ. ಅಶೋಕ್‌ನನ್ನು ಎತ್ತಿ ಮಂಚದ ಮೇಲೆ ಮಲಗಿಸಲು ಹೇಳಿದ. ಅವರಿಗೆ ಸಹಾಯ ಮಾಡುವ ನೆಪದಲ್ಲಿ ಸುಷಮಾ ಮೈ ಕೈ ತಿಕ್ಕಿ ಅವರ ಜೇಬಿಗೂ ಮಾತ್ರೆ ಇಳಿಸಿದ್ದಳು. ಈ ಬಾರಿ ಹಸಿರು ಕ್ಯಾಪ್ಸೂಲ್ ಮಾತ್ರೆಗಳು.

ಛೋಟಾಬಾಸ್‌ಗೆ ತಲೆ ಸುತ್ತಿ ಬಂದಂತಾಯಿತು. ಹೊರಗೆ ಬಂದು ತನ್ನ ರೂಮಿನತ್ತ ನಡೆದ. ಅವನನ್ನು ಹಿಂಬಾಲಿಸಿದಳು ಸುಷಮಾ. ರೂಮಿಗೆ ಬಂದು ಕುರ್ಚಿಯಲ್ಲಿ ಕುಳಿತುಕೊಳ್ಳುತ್ತ ಆತ ತನ್ನಷ್ಟಕ್ಕೆ ತಾನೇ ಬಡಬಡಿಸತೊಡಗಿದ. ನನಗೇನಾಗಿದೆ? ಏನಾಗಿದೆ ನನಗೇ...!

''ನಿನಗೆ ಮೂರ್ಛೆ ಬರತಾ ಇದೆ'' ಹಿಂದಿನಿಂದ ಬಂದ ಸುಷಮಾ ಉತ್ತರಿಸಿದಾಗ ಭಯಾಶ್ಚರ್ಯಗಳಿಂದ ಭಾರವಾದ ಕಣ್ಣುಗಳನ್ನೆತ್ತಿ ಅವಳೆಡೆ ನೋಡಿದ ಛೋಟಾಬಾಸ್.

''ನಿನ್ನ ಜೇಬಿಗೆ ನಾನೊಂದು ಮಾತ್ರೆ ಚೆಲ್ಲಿರುವೆ. ಅದರಿಂದ ಹೊರಟ ಗ್ಯಾಸ್ ನಿನ್ನ ಉಸಿರಿನೊಂದಿಗೆ ಸೇರಿ ಮೂರ್ಛೆ ಬರತಾ ಇದೆ. ಇನ್ನೊಂದು ಮಾತು. ಅಶೋಕನಿಗೆ ಏನೂ ಆಗಿಲ್ಲ. ನಿಮಗೆಲ್ಲರಿಗೂ ಚಕ್ಮಾ ಕೊಡಲು ನಾನು ಅವನು ಸೇರಿ ಆಟ ಹೂಡಿದ್ದೆವು''

''ಹಾಗಾದರೆ ನೀನು... ನೀನು....''

''ನಾನು ಸುಷಮಾ ಆತ ಅಶೋಕ: ನಾವು ಮೇಜರ ಹೇಮಂತರ ಸಂಗಾತಿಗಳು''

''ಶಹಬ್ಬಾಶ್. ಆದ್ರ ನೀವಿಲ್ಲಿಂದ ಪಾರಾಗಲಾರಿರಿ. ಅವರಿಬ್ಬರು ನನ್ನ ಬಹಾದ್ದೂರ ಸಿಪಾಯಿಗಳು ನಿಮ್ಮನ್ನು ಜೀವಂತ ಸುಟ್ಟು ಬಿಡ್ತಾರೆ''

''ಸುಳ್ಳು. ಅವರು ನಮ್ಮನ್ನೆಂದೂ ಸುಡಲಾರರು. ಈಗಾಗಲೇ ಅವರು ಜೀವ ಬಿಟ್ಟಿರಲು ಸಾಕು. ನಾನವರ ಜೇಬಿಗೆ ವಿಷದ ಗ್ಯಾಸ್ ತುಂಬಿದ ಮಾತ್ರೆ ಎಸೆದಿದ್ದೆ''

''ನನ್ನನ್ನೇಕೆ ಕೊಲ್ಲಲಿಲ್ಲ?''

''ನಿನ್ನ ಜೀವ ಅಮೂಲ್ಯವಾದದ್ದು. ನಿನ್ನಿಂದ ಬೇಕಾದಷ್ಟು ವಿಷಯ ತಿಳಿದುಕೊಳ್ಳಬೇಕಾಗಿದೆ. ಅದಕ್ಕಾಗಿ ನಿನ್ನನ್ನು ಕೊಲ್ಲುವ ಮೂರ್ಖತನ ನಾನು

ಮಾಡಲಾರೆ. ನಮಗೆ ನೀನು ಜೀವಂತವಾಗಿ ಬೇಕು''

ಭೋಟಾಬಾಸ್ ಮೆಚ್ಚುಗೆಯ ದೃಷ್ಟಿಯಿಂದ ಅವಳೆಡೆ ನೋಡುತ್ತಿದ್ದಂತೆ ಕೆಳಗೆ ಉರುಳಿದ್ದ. ಹೊರಗೆ ಹೆಜ್ಜೆಯ ಸಪ್ಪಳವಾಯಿತು. ಅಶೋಕ ಬಂದಿದ್ದ. ಸಂತೋಷದಿಂದ ಅವಳೆಡೆ ನೋಡಿ ನುಡಿದ.

''ಅವರಿಬ್ಬರೂ ಖಲಾಸ್. ನಾವೀಗ ಸ್ವತಂತ್ರರು''

ಅಜಿತಪ್ರಸಾದ ಜರ್‍ರನೇ ಇಳಿದುಹೋದ. ಭೂತಗ್ರಸ್ತವಾದ ಮುಖ. ಕೈಕಾಲುಗಳಲ್ಲಿ ಕಂಪನ. ನಂಬಲಾಗದ ಕಣ್ಣುಗಳಿಂದ ಹೇಮಂತನನ್ನೇ ದಿಟ್ಟಿಸುತ್ತಿದ್ದ. ನಗುತ್ತ ಹೇಮಂತ ಮುಂದೆ ಬಂದು ಹೇಳಿದ.

''ಹೌದು. ನಾನೇ.. ಮೇಜರ ಹೇಮಂತ. ನಂಬಿಕೆ ಆಗ್ತಾ ಇಲ್ವೆ...''

''ನನ್ನನ್ನು ಇಲ್ಲಿಗೇಕೆ ತಂದೆ''

''ನಿನ್ನ ಜಾಗ ಇನ್ನು ಇಲ್ಲೇ ಎಂದು ತಿಳಿಸಲು.. ಅಜಿತ್. ನೀನು ನಿನ್ನ ಅಧಿಕಾರದ ಅವಧಿಯಲ್ಲಿ ಮಾಡಿದ ಪಾಪಕ್ಕೆ ಲೆಕ್ಕವಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಅದೇ ಬಾಲ್ಯದಲ್ಲಿ ಕಾಲಿಟ್ಟ ಮುಗ್ಧ ಮಕ್ಕಳನ್ನು ಪುಸಲಾಯಿಸಿ ಅಪರಾಧಿಗಳಾಗುವಂತೆ ಮಾಡಿದ್ದು. ಅವರ ಜೀವನ ಹಾಳು ಮಾಡಿದ್ದು. ಆ ಅಪರಾಧಕ್ಕೆ ನ್ಯಾಯಾಲಯ ಯಾವ ಶಿಕ್ಷೆ ನೀಡುವದೋ ಅದು ಆಮೇಲಿನ ಮಾತು. ಸದ್ಯ ನಾನಂತೂ ನನ್ನ ಮನಸ್ಸಿಗೆ ಬಂದ ಶಿಕ್ಷೆ ನೀಡಲಿರುವೆ. ಸಿದ್ಧವಾಗಿರು''

''ನೀನು ನನಗೆ ಶಿಕ್ಷೆ ನೀಡುವೆಯಾ? ನಾನೊಬ್ಬ ಪೊಲೀಸ್ ಅಧಿಕಾರಿ. ನೆನಪಿಡು''

''ನೀನೂ ನೆನಪಿಟ್ಟುಕೊ. ನೀನೀಗ ಪೊಲೀಸ್ ಅಧಿಕಾರಿಯಲ್ಲ. ಸಸ್ಪೆಂಡ್ ಆಗಿರುವ ಭ್ರಷ್ಟ ಅಧಿಕಾರಿ ನೀನು''

''ನಾನು ಸಸ್ಪೆಂಡ್ ಆದ ವಿಷಯ ನಿನಗೆ ಹೇಗೆ ಗೊತ್ತು?''

''ನಿನ್ನನ್ನು ಸಸ್ಪೆಂಡ್ ಮಾಡಿಸಿದವ ನಾನೇ. ನೀನು ಅಧಿಕಾರದಲ್ಲಿರುವವರೆಗೂ ನಿನ್ನ ಮೇಲೆ ಕೈ ಮಾಡುವಂತಿರಲಿಲ್ಲ. ಆದಕ್ಕಾಗಿ ಸಸ್ಪೆಂಡ್ ಮಾಡಿಸಿರುವೆ. ಈಗ ನನಗೆ ಎಲ್ಲ ಬಗೆಯ ಸ್ವಾತಂತ್ರ್ಯವಿದೆ. ನಿನ್ನ ದುರ್ಗತಿಗೆ ನೀನೇ

ಕಾರಣನಾಗುತ್ತೀಯಾ''

ಅಲ್ಲಿಯವರೆಗೂ ತೊಯ್ದು ಬೆಕ್ಕಿನಂತಿದ್ದ ಅಜಿತಪ್ರಸಾದ ಒಮ್ಮೆಲೆ ಹುಲಿಯಂತೆ ಗುಡುಗುತ್ತ ಹೇಮಂತನ ಮೇಲೆ ಆಕ್ರಮಣ ಮಾಡಿದ. ಇದು ಹೇಮಂತನಿಗೆ ಆಘಾತಕಾರಿಯಾಗಿ ಪರಿಣಮಿಸಿತು. ಎದುರಿಗೆ ನಿಂತು ಚೆನ್ನಾಗಿ ಮಾತನಾಡುತ್ತಿದ್ದವ ಒಮ್ಮೆಲೆ ಆಕ್ರಮಣ ಮಾಡಬಹುದೆಂಬುದನ್ನು ಆತ ನಿರೀಕ್ಷಿಸಿರಲಿಲ್ಲ. ಅಜಿತಪ್ರಸಾದ ಕಂಗಾಲಾಗಿದ್ದಾನೆ. ಬದುಕಿ ಉಳಿಯಲು ಅಥವಾ ಅಲ್ಲಿಂದ ತಪ್ಪಿಸಿಕೊಳ್ಳಲು ಕೊನೆಯ ಪ್ರಯತ್ನ ಮಾಡ್ತೀದ್ದಾನೆಂಬುದು ನಿರ್ಧಾರವಾದಂತಾಯಿತು. ಮಾನಸಿಕವಾಗಿ ಈ ರೀತಿ ಜರ್ಜರಿತವಾಗಿರುವಾಗಲೇ ಶತ್ರುವಿನ ಮೇಲೆ ಪ್ರತಿ ಆಕ್ರಮಣ ಮಾಡುವದು ಬುದ್ಧಿವಂತಿಕೆಯ ಲಕ್ಷಣವೆಂಬುದನ್ನರಿತಿದ್ದ ಹೇಮಂತ ಅದಕ್ಕಾಗಿ ಸಿದ್ಧವಾದ.

ಕೆದರಿದ ಕೂದಲು, ಕೆಂಡದುಂಡೆಯಂತಹ ಕಣ್ಣುಗಳು, ಸಿಟ್ಟಿನ ಆವೇಶದಲ್ಲಿ ವಿಕಾರವಾದ ಮುಖದೊಂದಿಗೆ ಅಜಿತ ಭಯಾನಕವಾಗಿ ಕಾಣುತ್ತಿದ್ದ. ಹೇಮಂತ ಮೇಲೆ ಹಾರಿ ಅವನನ್ನು ನೆಲಕ್ಕೆ ಕೆಡವಿ ಎದೆಯ ಮೇಲೆ ಕುಳಿತು ಎರಡೂ ಕೈಗಳಿಂದ ತನ್ನೆಲ್ಲ ಶಕ್ತಿಯನ್ನು ಒಟ್ಟುಗೂಡಿಸಿ ಅವನ ಕುತ್ತಿಗೆ ಹಿಚುಕತೊಡಗಿದ್ದ. ಅದರೊಂದಿಗೆ ಆತ ಬಡಬಡಿಸುತ್ತಿದ್ದ. ''ನಿನ್ನ ಜೀವಸಹಿತ ಬಿಡಲಾರೆ. ನನ್ನನ್ನು ಬೀದಿಗೆ ತಂದಿರುವ ನಿನ್ನ ನಾಶಮಾಡುವೆ''

ಹೇಮಂತ ಗಟ್ಟಿಯಾಗಿ ಉಸಿರು ಬಿಗಿಹಿಡಿದ. ಮೈಯಲ್ಲಿಯ ಎಲ್ಲ ನರಗಳನ್ನು ಒಳಗೆ ಎಳೆದುಕೊಂಡು ದೇಹವನ್ನು ಒಮ್ಮಿಂದೊಮ್ಮೆಲೇ ಕೃಷಗೊಳಿಸಿದ. ಬಿಗಿದ ಕುತ್ತಿಗೆ ಸಡಿಲಾಗುತ್ತಲೂ ಹಿಡಿತ ಸಡಿಲವಾಯಿತು. ಇಷ್ಟೇ ಅವಸರ ಮೇಜರನಿಗೆ ಸಾಕಾಗಿತ್ತು. ತನ್ನೆರಡೂ ಕೈಗಳ ಅಂಗೈಯನ್ನು ಬ್ಲೇಡಿನಾಕಾರದಲ್ಲಿ ತಂದು ಅವನೆರಡೂ ಪಕ್ಕೆಗಳ ಮೇಲೆ ಬಲವಾಗಿ ಪ್ರಹಾರ ಮಾಡಿದಾಗ ಕಾಡುಕೋಣದಂತೆ ಅಜಿತಪ್ರಸಾದ ಆಕ್ರಂದನ ಮಾಡಿದ. ಪಕ್ಕೆಗಳಲ್ಲಿಯ ಎಲುಬುಗಳು ಮುರಿದಿರಬೇಕು. ತನ್ನೆರಡೂ ಕಾಲುಗಳನ್ನು ಮೇಲೆ ತಂದು ಕತ್ತರಿಯಂತೆ ಮಾಡಿ ಅವನ ಕುತ್ತಿಗೆಗೆ ತಗಲಿಸಿ ಜೋರಾಗಿ ಎಳೆದು ಬೀಸಿ ಒಗೆದಾಗ ಅಜಿತ ದೂರ ಸಿಡಿದು ಬಿದ್ದಿದ್ದ. ಹೇಮಂತ ಮೇಲೆದ್ದು ಮೈಧೂಳು ಕೊಡವಿಕೊಂಡು ನರಳುತ್ತ ಬಿದ್ದಿದ್ದ ಅಜಿತನತ್ತ ಹೆಜ್ಜೆ ಹಾಕಿದಾಗ ಆತ ದೀನನಾಗಿ ಬೇಡಿಕೊಂಡ.

''ಬೇಡ. ನನ್ನ ಬಿಟ್ಟುಬಿಡು. ಎಲ್ಲಾದರೂ ಬದುಕಿಕೊಳ್ತೇನೆ''

''ನಿನ್ನ ಬದುಕು ಸಾವಿರಾರು ಜನರಿಗೆ ಸಾವಿನ ದಾರಿಯಾಗುತ್ತದೆ. ನಿನ್ನ

ಸಾವು ನೂರಾರು ಜನರಿಗೆ ಜೀವದಾನವಾಗುತ್ತದೆ. ನೀನು ಬದುಕಿರಬಾರದು. ನಿನಗೆ ತಕ್ಕಶಿಕ್ಷೆ ಆಗಲೇಬೇಕು''

ಬಲಗಾಲಿನ ಬೂಟಿನ ಪ್ರಹಾರ ನೇರವಾಗಿ ಮುಖದ ಮೇಲೆ.

''ಅಯ್ಯೋ ಸತ್ತೆ'' ಎಂದು ಕಿರುಚಿದ ಆತ ನೆಲದ ಮೇಲೆ ಬಿದ್ದು ಉರುಳಾತೊಡಗಿದ. ಬಾಯಿ ಮೂಗುಗಳಿಂದ ಹರಿದ ರಕ್ತ ಬಾಯಿ ತೋಯಿಸಿ ಗದ್ದದ ಗುಂಟ ಇಳಿಯತೊಡಗಿತ್ತು.

''ನನ್ನ ಕ್ಷಮಿಸು.. ನಾನು ಪಾಪಿ. ಕ್ಷಮಿಸು'' ಬೇಡಿಕೊಂಡ.

''ಹೇಳು ಹಾಗಾದರೆ.. ವಿನಾಯಕ ಎಲ್ಲಿ? ಮಕ್ಕಳನ್ನು ಅಪರಾಧದ ಜಗತ್ತಿಗೆ ತರುವ ವ್ಯಕ್ತಿ ಯಾರು? ನೀನು ಯಾರು ಹೇಳಿದಂತೆ ಕುಣಿಯುತ್ತಿರುವೆ?''

''ನನಗೆ ಉತ್ತರ ಕೊಡಲಾಗದು. ನನ್ನ ಜೀವ ಗಂಡಾಂತರದಲ್ಲಿದೆ''

''ಸರಿ ಮೊದಲು ನಿನ್ನನ್ನು ಸುರಕ್ಷಿತ ಜಾಗಕ್ಕೆ ಸೇರಿಸುತ್ತೇನೆ. ನಂತರ ಮುಂದಿನ ಮಾತು''

''ನೀನು ನನ್ನನ್ನು ಎಲ್ಲಿ ಬಚ್ಚಿಟ್ಟರೂ ಅವರು ಹುಡುಕಿ ತೆರೆಯುವರು''

''ಅದರ ಚಿಂತೆ ನಿನಗೆ ಬೇಡ. ನಾನು ನಿನ್ನನ್ನು ಅವರಿಂದ ಕಾಪಾಡುವೆ. ಅದಕ್ಕೆ ಬದಲಾಗಿ ನೀನು ನಿನಗೆ ತಿಳಿದ ಎಲ್ಲ ವಿಷಯ ಹೇಳಬೇಕು. ನ್ಯಾಯದ ಮುಂದೆ ತಲೆ ಬಾಗಬೇಕು. ತಪ್ಪೊಪ್ಪಿಕೊಂಡು ಪ್ರಾಯಶ್ಚಿತ್ತಕ್ಕೆ ಸಿದ್ಧವಾಗಬೇಕು. ಹೇಳು ನಿನಗೆ ಒಪ್ಪಿಗೆಯೆ?''

''ನಿನ್ನೆಲ್ಲ ಮಾತೂ ನನಗೆ ಒಪ್ಪಿಗೆ. ಮೊದಲು... ನನಗೆ ಜೀವದಾನ..''

ಮಾತು ಅರ್ಧದಲ್ಲೇ ಉಳಿಯಿತು. ಆತ ಹಿಂದಕ್ಕೊರಗಿದ್ದ. ಅವನಿಗೆ ಮೂರ್ಛೆ ತಪ್ಪಿತ್ತು. ಎರಡೂ ಕೈಗಳಿಂದ ಅವನನ್ನು ಎತ್ತಿ ಟ್ಯಾಕ್ಸಿ ಬಳಿ ಬಂದ ಹೇಮಂತ ಹಿಂದಿನ ಸೀಟಿನಲ್ಲಿ ಚೆಲ್ಲಿ ತಾನು ಮುಂದೆ ಬಂದ.

ಕಾರು ಒಂದು ಟೆಲಿಫೋನ್ ಬೂತ್ ಬಳಿ ಬಂದು ನಿಂತಿತು. ಅಲ್ಲಿಂದ ಗಿರೀಶನಿಗೆ ಫೋನು ಮಾಡಿದ ಹೇಮಂತ ಒಬ್ಬ ವೈದ್ಯನೊಂದಿಗೆ ಕೂಡಲೇ ಬರುವಂತೆ ತಿಳಿಸಿದ.

ಹತ್ತು ನಿಮಿಷಗಳಲ್ಲಿ ಗಿರೀಶ ತನಗೆ ಪರಿಚಿತರಿದ್ದ ಖ್ಯಾತ ಡಾಕ್ಟರರೊಂದಿಗೆ ಬಂದ. ಅವನ ಕೈಗೆ ಅಜಿತಪ್ರಸಾದನನ್ನು ಒಪ್ಪಿಸಿ ನುಡಿದ.

''ನನಗೆ ಈತ ಜೀವಂತವಾಗಿ ಬೇಕು. ಇವನನ್ನು ಅತೀ ಶೂನ್ಯವಾದ

ಸ್ಥಳದಲ್ಲಿ ಕೆಲದಿನ ಬಚ್ಚಿಡಬೇಕು. ನಿಮ್ಮಿಂದ ಸಾಧ್ಯವೇ?''

''ನೀವು ಹೇಳಿದ್ದೆಲ್ಲಾ ನನ್ನಿಂದ ಸಾಧ್ಯ ಮೇಜರ್'' ಹೆಮ್ಮೆಯಿಂದ ಗಿರೀಶ ನುಡಿದಾಗ ಅವನನ್ನು ಮೇಜರ ಬಿಗಿದಪ್ಪಿದ.

ಹೇಮಂತ ಸುಸ್ತಾಗಿದ್ದ. ದಣಿವಿನ ಜೊತೆಗೆ ಸುಷಮಾ ಅಶೋಕರ ಅಪಹರಣ ಅವನನ್ನು ಅರ್ಧ ಹಣ್ಣು ಮಾಡಿತ್ತು. ಚತುರರಾದ ತನ್ನ ಸಂಗಡಿಗರು ಈ ರೀತಿ ಒಮ್ಮೆಲೆ ಹೇಗೆ ಶತ್ರುಗಳ ಕೈಗೆ ಸಿಲುಕಿ ಬಿದ್ದರು ಎಂಬುದು ಒಗಟಾಗಿತ್ತು. ಇಬ್ಬರಲ್ಲಿ ಒಬ್ಬರಾದರೂ ವಾಯರಲೆಸ್ ಜೋಡಿಸಿದ್ದ ವಾಚು ಒಯ್ಯದಿರುವುದು ಚಿಂತೆಗೆ ಕಾರಣವಾಗಿತ್ತು. ಅವರನ್ನು ತುಂಬಾ ದಿನಗಳವರೆಗೆ ಬಂಧಿಸಿಡುವ ಅಪರಾಧಿ ಜಗತ್ತಿನಲ್ಲಿ ಇನ್ನು ಹುಟ್ಟದಿದ್ದರೂ ಅಪರಾಧಿಯ ತಲೆ ತಿರುಗಿದರೆ ಆತ ಏನು ಬೇಕಾದ್ದೂ ಮಾಡಬಹುದಲ್ಲ ಎಂಬ ಆಂತರಿಕ ಭಯ. ಅವರೆಲ್ಲಿದ್ದಾರೆಂಬುದು ತಿಳಿದಿರಲಿಲ್ಲ. ಅವರನ್ನು ಹುಡುಕುವುದು ಹೇಗೆ? ಯಾವ ತಂತ್ರ ಬಳಸಬೇಕು? ಎಂಬೀ ಮುಂತಾದ ಸಮಸ್ಯೆಗಳಲ್ಲಿ ಮುಳುಗಿದ್ದ ಆತ ಹೊಟೆಲಿಗೆ ಬಂದು ಚಾವಿ ತೆಗೆದುಕೊಂಡ. ಯಾವದೋ ಗುಂಗಿನಲ್ಲಿ ನಡೆಯುತ್ತ ರೂಮಿನ ಬಳಿ ಬಂದು ಗಕ್‌ನೆ ನಿಂತುಬಿಟ್ಟ.

ರೂಮಿನೊಳಗಿದ್ದ ದೀಪ ತಟಕ್‌ನೆ ಆರಿತು. ಬಾಗಿಲ ಹಿಂದಿದ್ದ ನೆರಳೊಂದು ಸರಕ್‌ನೆ ಸರಿದು ಮರೆಯಾದದ್ದು ಬಾಗಿಲ ಕೆಳಗಿರುವ ಕಿಂಡಿಯಿಂದ ಕಾಣಿಸಿತು. ಅಪಾಯ ಅಪಾಯ ತನಗಾಗಿ ಒಳಗೆ ಕಾದು ಕುಳಿತಿದೆ. ಹೇಮಂತ ಮೈತುಂಬ ಕಣ್ಣು ಮಾಡಿಕೊಂಡು ಸಪ್ಪಳವಾಗದಂತೆ ಬಾಗಿಲು ದೂಡಿ ಪಕ್ಕಕ್ಕೆ ಜಿಗಿದ. ಅವನಿಗೆ ನಗೆ ಬಂದಿತು. ಒಳಗಿನಿಂದ ಗುಂಡಾಗಲೀ ಚೂರಿಯಾಗಲೀ ಹಾರಿಬರಲಿಲ್ಲ. ಯಾರೂ ಬರಲಿಲ್ಲ. ಮೆಲ್ಲಗೆ ನೆಲದ ಮೇಲೆ ಕುಳಿತು ಆತ ಅಂಬೆಗಾಲಿಕ್ಕುತ್ತ ಬಾಗಿಲ ಬಳಿ ಬಂದು ಒಳಗೆ ಇಣುಕಿನೋಡಿದ. ಯಾರೂ ಇಲ್ಲ. ಕಾಲಲ್ಲಿಯ ಶೂ ಬಿಚ್ಚಿ ಒಂದನ್ನು ಒಳಗೆಸೆದು ಕೈಲಿದ್ದ ರಿವಾಲ್ವರ್ ಕುದುರೆ ಮೇಲೆ ಬೆರಳಿರಿಸಿದ. ಊಹೂಂ.. ಶೂ ಅನಾಥವಾಗಿ ಬಿದ್ದಿತ್ತು. ಮತ್ತೊಂದು ಶೂ ಬಿಚ್ಚಿ ಒಗೆದ. ಅದಕ್ಕೂ ಅದೇ ಗತಿಯಾಯಿತು. ಬೇರೆ ದಾರಿಯಿಲ್ಲದೇ ಒಳಗೆ ಕಾಲಿಟ್ಟ. ಸಿಟೌಟನಲ್ಲಿ ಯಾರೂ ಇಲ್ಲ. ಒಳಗೆ ನಡೆದ. ಡ್ರಾಯಿಂಗ್‌ರೂಮು. ಅಲ್ಲಿಯೂ ಯಾರೂ ಇಲ್ಲ. ಇದ್ದರಿಲ್ಲೇ ಇರಬೇಕು ಎಂದುಕೊಳ್ಳುತ್ತ ಅತಿ ಜಾಗ್ರತೆಯಿಂದ ಬೆಡ್‌ರೂಮಿನೊಳಗೆ ಅಡಿಯಿಟ್ಟ. ಬೆಡ್ ಪಕ್ಕದಲ್ಲಿರುವ ಸೋಫಾದ ಮೇಲೆ ದೃಷ್ಟಿ ಬೀಳುತ್ತಲೂ

ಆತ ಅಲ್ಲೇ ಜಡವಾಗಿ ನಿಂತ.

ಆರಾಮವಾಗಿ ಒರಗಿಕೊಂಡಿರುವ ಅಪರಿಚಿತ ವ್ಯಕ್ತಿ.. ಬಾಯಿಯಲ್ಲಿ ಹೊಗೆ ಕಾರುತ್ತಿರುವ ಸಿಗರೇಟ್.. ಒಂದು ಕ್ಷಣ ಆ ವ್ಯಕ್ತಿಯನ್ನು ನಿರೀಕ್ಷಿಸಿದ. ಪರಿಚಿತನಲ್ಲ. ಆತ ಭಾರತೀಯನೂ ಅಲ್ಲ. ಕೆಂಪಗಿದ್ದರೂ ಬ್ರಿಟಿಷ್ ಅಲ್ಲ. ಹಾಗಾದರೆ ಏನೇ ಆಗಲಿ ಎಂದುಕೊಳ್ಳುತ್ತ ರಿವಾಲ್ವರ್ ಅವನೆಡೆ ಗುರಿಹಿಡಿದ. ಹಿಂದೆ ಬಟ್ಟೆ ಸರಿದ ಸಪ್ಪಳ ಅನುಭವ. ಆತ ಹೊರಳುವ ಮುನ್ನವೇ ತಲೆಯ ಹಿಂಭಾಗಕ್ಕೆ ಕಬ್ಬಿಣದ ನಳಿಕೆ ತಾಗಿತು. ಅವನ ತುಟಿಗಳ ಮೇಲೆ ನಗೆ ಮಿಂಚಿತು.

"ಓ ನನ್ನ ಪ್ರೀತಿಯ ಶತ್ರುವೇ. ನನ್ನನ್ನು ಶೂಟ್ ಮಾಡಿ ಪುಣ್ಯ ಕಟ್ಟಿಕೊ. ನಾನು ನನ್ನ ಪ್ರೀತಿಯ ಸಂಗಾತಿ ಸುಷಮಾಳನ್ನು ಕಳೆದುಕೊಂಡು, ಮೆಚ್ಚುಗೆಯ ಸ್ನೇಹಿತ ಅಶೋಕನನ್ನು ದೂರಮಾಡಿಕೊಂಡು ಹುಚ್ಚನಾಗಿದ್ದೇನೆ. ಮೃತ್ಯುವಿನ ಹೊರತು ನನ್ನ ಮೇಲೆ ಯಾರೂ ದಯೆ ತೋರಲಾರರು. ಯಾರೂ ನನ್ನನ್ನು ಈ ವಿರಹದಿಂದ ಮುಕ್ತ ಮಾಡಲಾರರು. ನಿನಗೆ ಕೈ ಮುಗಿದು ಕೇಳಿಕೊಳ್ಳುತ್ತೇನೆ. ನನ್ನನ್ನು ಶೂಟ್ ಮಾಡಿ ಕೊಂದು ಬಿಡು. ಹಾಯ್ ಮೃತ್ಯು ಎಷ್ಟು ಸುಖ ಎಂತಹ ಆನಂದ ಆಹಾ.."

ಪಿಂಗಾಣಿ ಪಾತ್ರೆಯೊಂದು ಕಲ್ಲಿನ ಮೇಲೆ ಬಿದ್ದು ಒಡೆದಂಥ ಮಧುರ ಧ್ವನಿಯ ನಗೆ ಚಿಮ್ಮಿತು ಹಿಂದಿನಿಂದ. ಕಬ್ಬಿಣದ ನಳಿಕೆ ಪಕ್ಕಕ್ಕೆ ಸರಿಯಿತು. ಅದೇ ಸುಖ. ಅವಸರ.. ಪಕ್ಕಕ್ಕೆ ಬಾಗಿ ಹಿಂದೆ ಬಲಗೈ ಚಾಚಿದ ಹೇಮಂತ ಪಿಸ್ತೂಲು ಹಿಡಿದ ಕೈ ತನ್ನತ್ತ ಎಳೆದುಕೊಂಡು ಒಮ್ಮೆಲೆ ಬೆಡ್ ಮೇಲೆ ಜಂಪ್ ಮಾಡಿದ. ಹಿಂದಿದ್ದ ವ್ಯಕ್ತಿ ಅವನೊಂದಿಗೆ ಬೆಡ್ ಮೇಲೆ ಬಿದ್ದು ಚೀತ್ಕಾರ ಮಾಡಿ ನರಳಿ ಅವನ ತುಟಿಗಳ ಮೇಲೆ ತುಟಿ ಇಟ್ಟಾಗ ಸಂಪೂರ್ಣ ಶಾಂತಿ ಹೊಂದಿತು.

"ಛಿ..ಛಿ.. ನಾ ನೋಡಲಾರೆ. ಇಂಥ ಲಜ್ಜೆಗೇಡಿಗಳನ್ನು ನಾನೆಲ್ಲಿಯೂ ನೋಡಲಿಲ್ಲ. ಎದುರಿಗೆ ಸಾಕ್ಷಾತ್ ಗಂಡಸು ನಿಂತಿದ್ದರೂ ಅವನೆದುರೇ ಈ ದೃಷ್ಟಿ ಛಿ.."

ತುಟಿಗಳಿಂದ ಮತ್ತೊಮ್ಮೆ ಬಲವಾಗಿ ಚುಂಬಿಸಿ ಹೇಮಂತ ಧ್ವನಿ ಬಂದ ಕಡೆ ನೋಡಿದ. ಎರಡೂ ಕೈಗಳಿಂದ ಕಣ್ಣು ಮುಚ್ಚಿಕೊಂಡು ನಿಂತಿದ್ದ ಅಶೋಕ.

"ಓಹ್ ನೀನೂ ಒಬ್ಬ ಗಂಡಸೋ?"

ಹೇಮಂತನಡಿಯಿಂದ ನುಸುಳಿ ಹೊರ ಬಂದ ಸುಷಮಾ ವ್ಯಂಗ್ಯವಾಡಿದಾಗ

ಅಶೋಕ ಕೆರಳಿ ಆವಳತ್ತ ಹಕ್ಕರು ನೋಟ ಬೀರಿ ಕೇಳಿದ.

"ಆಹಾ! ಮಹರಾಣಿಯವರ ದೃಷ್ಟಿಯಲ್ಲಿ ಹೇಮಂತ ಒಬ್ಬನೇ ಗಂಡಸು ಅಂತ ಕಾಣುತ್ತೆ. ಒಂದೆರಡು ಗಂಟೆಗಳ ಹಿಂದಿದ್ದ ಅನುಭವ ನೆನಪು ಮಾಡಿಕೊಳ್ಳಿ. ನಿಮ್ಮನ್ನು ಆ ಬಂದೀಗೃಹದಿಂದ ಪಾರು ಮಾಡಿಕೊಂಡು ಬಂದವನೇ ಈ ಗಂಡಸು"

"ಆಹಾಹಾ.." ಕೈ ಕೊಂಕು ಮಾಡುತ್ತಾ ಮುಂದೆ ಬಂದಳು ಸುಷಮಾ. ಆ ದೈತ್ಯರ ಜೇಬಿಗೆ ಮ್ಯಾಜಿಕ್ ಮಾತ್ರೆ ಚೆಲ್ಲಿದವರು ಯಾರೋ..."

"ಆಹಾಹಾ.." ಅಶೋಕ ಅವಳಂತೆಯೇ ಹಾಸ್ಯ ಮಾಡಿ ಉತ್ತರಿಸಿದ. "ಆ ಮಾತ್ರೆ ಕೊಟ್ಟವನು ಯಾರೋ.. ಮಾತ್ರೆ ಕೊಡದಿದ್ದರೆ ತಿಳಿಯುತ್ತಿತ್ತು ಬಣ್ಣ"

ತನ್ನ ಇಬ್ಬರು 'ಬಹಾದ್ದೂರ' ಸಂಗಡಿಗರು ಪ್ರೀತಿಯಿಂದ ಏರಾಡುತ್ತಿರುವುದನ್ನು ನೋಡಿ ಹೊಟ್ಟೆ ಬಿರಿಯುವಂತೆ ನಕ್ಕ ಮೇಜರ ಮಧ್ಯೆ ಪ್ರವೇಶಿಸಿದ. "ಬಸ್.. ಬಸ್.. ಈ ಕೋಳೀಕಾಳಗ ಇಲ್ಲಿಗೆ ಸಾಕು. ಪಾರಾಗಿ ಬಂದುದಕ್ಕೆ ನಾನು ನಿಮ್ಮಿಬ್ಬರನ್ನು ಅಭಿವಂದಿಸುತ್ತೇನೆ. ಬನ್ನಿ ವಿಜಯೋತ್ಸವ ಆಚರಿಸೋಣ"

"ವಿಜಯೋತ್ಸವ? ಅಂದ್ರೆ..ಅಂದ್ರೆ.. ಈ ಕೇಸು..."

ಅಶೋಕ ಹೇಮಂತನೆಡೆ ನೋಡಿ ಅರ್ಧಕ್ಕೇ ನಿಲ್ಲಿಸಿದ ಮಾತನ್ನು.

"ಹಾಂ. ಒಂದು ದೃಷ್ಟಿಯಿಂದ ಮುಗಿದಂತೆ. ನಿಮ್ಮ ರಿಪೋರ್ಟು ಒಂದು ಸಿಕ್ಕರೆ ನಾಳೆ ತಪ್ಪಿದರೆ ನಾಡಿದ್ದು ಶುಭ ಮಂಗಳಂ"

"ಹುರ್ರೇ...!" ಕೂಗುತ್ತ ಅಶೋಕ ಮುಂದೆ ಹೆಜ್ಜೆ ಇಟ್ಟವನು ಗಕ್‌ನೆ ನಿಂತ.

"ಏಕೆ? ಏನಾಯ್ತು?"

"ನಮ್ಮ ಕರೆಯಿದೇ ಅಂತ ಕರೆದುಕೊಂಡು ಬಂದ ಅತಿಥಿಯ ಗತಿ ಏನು?"

ಸೋಫಾದ ಮೇಲೆ ಒರಗಿದ್ದ ವ್ಯಕ್ತಿ ಎಡೆ ನೋಡಿದ ಹೇಮಂತ.

"ಈತ ಭೋಟಾಬಾಸ್. ನಮ್ಮನ್ನು ಬಂಧನದಲ್ಲಿಟ್ಟವ. ಈತನನ್ನು ನಮ್ಮ ಮ್ಯಾಜಿಕ್ ಮಾತ್ರೆಗಳ ಪ್ರಭಾವದಿಂದ ಎಚ್ಚರ ತಪ್ಪಿಸಿ ತಂದಿದ್ದೇನೆ. ಇನ್ನು ಎರಡು ಗಂಟೆ ಆತ ಮಲಗಿಯೇ ಇರುತ್ತಾನೆ"

"ಗುಡ್. ನಮ್ಮ ಕೆಲಸಕ್ಕೆ ಎರಡು ಗಂಟೆ ಬೇಕಾದಷ್ಟಾಯಿತು"

"ಯಾವ ಕೆಲಸಕ್ಕೆ?" ಇಂಥ ಅವಸರಕ್ಕೆ ಕಾದಿದ್ದ ಅಶೋಕ ಬಾಯಿ ಹಾಕಿದ. ಸುಷಮಾಳ ಕೆನ್ನೆಗಳು ಕೆಂಗುಲಾಬಿಯಂತಾದರೆ ಹೇಮಂತ ಹುಸಿಗೋಪ ತೋರಿಸಿದ.

"ಸಾರಿ ಅಶೋಕ. ನನಗಿಂಥ ಮಾತುಗಳು ಇಷ್ಟವಾಗುವುದಿಲ್ಲ"

"ಸಾರಿ ಬಾಸ್. ನಾನೇನು ಮಾಡಲಿ. ನನಗಿಂಥ ಮಾತುಗಳೇ ಇಷ್ಟವಾಗುತ್ತವೆ"

ಖೊಳ್ ಎಂದು ನಕ್ಕರು ಮೂವರೂ.

ಹತ್ತೇ ನಿಮಿಷಗಳಲ್ಲಿ ಪಾರ್ಟಿ ಆರಂಭವಾಯಿತು.

ಅಶೋಕ.. ಹೇಮಂತರ ಗ್ಲಾಸುಗಳಲ್ಲಿ ಜಾನಿವಾಕರ್.. ಸುಷಮಾಳ ಗ್ಲಾಸಿನಲ್ಲಿ ತಂಪು ಪಾನೀಯ.. ಛೋಟಾಬಾಸ್‌ನೆಡೆ ಮೂರೂ ಗ್ಲಾಸು ಹಿಡಿದು ಚಿಯರ್ಸ್ ನೀನು ನಮಗೆ ನೀಡಲಿರುವ ಸಮಾಚಾರಕ್ಕೆ ಎಂದು ಹೇಳಿ ಗ್ಲಾಸಿಗೆ ತುಟಿ ತಗಲಿಸಿದರು.

ಚಿಪ್ಸನ್ನು ಬಾಯಿಗಿಟ್ಟುಕೊಂಡು ಸುಷಮಾ ಒಂದೊಂದಾಗಿ ತನ್ನ ಹಾಗೂ ಅಶೋಕನ ಸುತ್ತ ನಡೆದ ಬಂಧನದ ನಾಟಕ ಹೇಳುತ್ತಾ ಹೋದಳು. ಗಾಢವಾಗಿ ಆಲೋಚಿಸಿದ ಹೇಮಂತ ಗಡಿಯಾರದ ಕಡೆ ನೋಡಿದ. ರಾತ್ರಿ ಒಂದೂವರೆ.

"ಸಮಯ ಬಹಳವಾಗಿದೆ. ಇವನನ್ನು ನಾಳೆ ವಿಚಾರಿಸಿದರಾಯ್ತು. ಈತ ಮಿಸುಕದಂತೆ ಕೈಕಾಲು ಕಟ್ಟಿ ಸೋಫಾಕ್ಕೆ ಬಿಗಿಯಿರಿ" ಎಂದ.

* * * * * *

ಅಜಿತಪ್ರಸಾದನಿಗೀಗ ಯಾವ ತೊಂದರೆಯೂ ಇರಲಿಲ್ಲ. ವೈದ್ಯರು ನೀಡಿದ ಚಿಕಿತ್ಸೆಯಿಂದಾಗಿ ಆತ ಚೇತರಿಸಿಕೊಂಡಿದ್ದ. ನೋವು ಮರೆತು ತನಗೆ ಒದಗಿದ ಪರಿಸ್ಥಿತಿ ಜೊತೆಗೆ ಹೊಂದಾಣಿಕೆ ಮಾಡಿಕೊಳ್ಳಲು ಮಾನಸಿಕವಾಗಿ ಸಿದ್ದತೆ ಮಾಡಿಕೊಳ್ಳತೊಡಗಿದ್ದ. ರಾತ್ರಿ ಬಿದ್ದ ಬಿಗ್ ಡೋಜ್‌ನಿಂದಾಗಿ ಸುಖಕರವಾದ ನಿದ್ದೆಯೂ ಸಹ ಬಂದಿತ್ತು. ಮುಂಜಾನೆ ಎಂಟುಗಂಟೆಯವರೆಗೂ ಆತ ಎದ್ದಿರಲಿಲ್ಲ. ಗಿರೀಶನೇ ಬಂದು ಬಾಗಿಲ ತೆರೆದು ಅವನನ್ನು ಎಚ್ಚರಿಸಿದ್ದ. ಆತ ಮುಖ ತೊಳೆದು ಬರುವಷ್ಟರಲ್ಲಿ ಕಾಫಿ ಕಪ್ ಅವನ ಮುಂದೆ ಹಿಡಿದ. ಅಜಿತನ ಕಣ್ಣಲ್ಲಿ ನೀರಾಡಿತು.

"ಗಿರೀಶ ನಿಮ್ಮ ಉಪಕಾರ ಯಾವ ಜನ್ಮದಲ್ಲಿ ತೀರಿಸಬೇಕು ಅನ್ನೋದು ತಿಳಿಯದಾಗಿದೆ"

"ಅಜಿತ್.. ನಾನೇನೂ ಅಂಥ ಕೆಲಸ ಮಾಡಿಲ್ಲ. ಸುಮ್ನೆ ಹೊಗಳಬೇಡಿ"

"ನೀನು ನನ್ನನ್ನು ಈ ಸುರಕ್ಷಿತ ಜಾಗಕ್ಕೆ ತರದಿದ್ದರೆ, ವೈದ್ಯರಿಂದ ಚಿಕಿತ್ಸೆ ಮಾಡಿಸದಿದ್ದರೆ ನಾನು ಎಂದೋ ಸತ್ತು ಹೋಗುತ್ತಿದ್ದೆ"

"ಇದಕ್ಕೆ ಕಾರಣ ಮೇಜರ ಹೇಮಂತ.. ನಾನಲ್ಲ. ಅವರಿಗೆ ವಂದನೆ ಸಲ್ಲಿಸಿ"

"ನಿಜ. ನನ್ನ ಪಾಲಿಗೆ ಅವರು ದೇವರಾದರು. ಒಂದು ಹುಚ್ಚುತನಕ್ಕೆ ಬಲಿಯಾಗಿ ನನ್ನ ಆಶೆ ಆಮಿಷ ತೀರಿಸಿಕೊಳ್ಳಲು ದುಷ್ಟ ಜನರ ಕೈಗೊಂಬೆಯಾಗಿ ಸಮಾಜಕ್ಕೆ ದ್ರೋಹಿಯಾದೆ. ಅಮಾಯಕರನ್ನು ಶಿಕ್ಷಿಸಿದೆ. ಅಪರಾಧಿಗಳಿಗೆ ಆಶ್ರಯ ಕೊಟ್ಟೆ. ಅಂಥ ನನ್ನನ್ನವರು ಕ್ಷಮಿಸಿ ಹೊಸ ಜೀವನ ನಡೆಸಲು ಆಸ್ಪದ ನೀಡಿದ್ದಾರೆ"

"ಖಂಡಿತವಾಗಿ ಅದಕ್ಕಾಗಿ ನೀವು ಪಶ್ಚಾತ್ತಾಪದ ಅಗ್ನಿಯಲ್ಲಿ ಬೇಯಬೇಕು. ಇಲ್ಲಿಯವರೆಗೂ ನೀವು ಮಾಡಿದ ಕುಕರ್ಮಗಳನ್ನು ನೀವಾಗಿಯೇ ಒಪ್ಪಿಕೊಂಡು ಶಿಕ್ಷೆ ಅನುಭವಿಸಲು ಸಿದ್ಧರಾಗಿರಬೇಕು. ಆಗ ನಿಮಗೂ ಸಮಾಧಾನ ಸಂತೃಪ್ತಿ ಸಿಗಬಹುದು"

ಕರೆಗಂಟೆ ಬಾರಿಸಿತು. ಮಾತು ಅಲ್ಲಿಗೆ ನಿಂತಿತು.

ಗಿರೀಶ ಬಾಗಿಲತ್ತ ನೋಡಿದ. ಅಜಿತನ ಮುಖ ಒಮ್ಮೆಲೆ ಬಿಳಿಚಿಕೊಂಡಿತು. ಕಾಫಿ ಕಪ್ ಕೆಳಗಿರಿಸಿ ಅವನೆಡೆ ಧೈರ್ಯ ನೀಡುವ ನೋಟ ಬೀರಿ ಹೇಳಿದ ಗಿರೀಶ್.

"ಹೆದರಬೇಡಿ. ಇದು ಅತ್ಯಂತ ಗುಪ್ತಸ್ಥಾನ. ಮೇಜರ ಹಾಗೂ ಡಾಕ್ಟರ್‌ನನ್ನು ಬಿಟ್ಟರೆ ಬೇರೆ ಯಾರೂ ಇಲ್ಲಿಗೆ ಬರಲಾರರು. ಡಾಕ್ಟರ ಬರುವ ಸಮಯ ಇದಲ್ಲ. ಇವರು ಮೇಜರ ಇರಬೇಕು. ಯಾವುದಕ್ಕೂ ನೀವು ಅವಿತುಕೊಳ್ಳುವದು ಯೋಗ್ಯ. ಪ್ಲೀಸ್"

ಮತ್ತೊಮ್ಮೆ ಕರೆಗಂಟೆ ಬಾರಿಸಿತು.

ಅದರೆಡೆ ಲಕ್ಷ ಕೊಡಲಿಲ್ಲ ಗಿರೀಶ. ಅಜಿತ್ ಚೆನ್ನಾಗಿ ಅವಿತುಕೊಂಡ ಮೇಲೆ ಬಾಗಿಲಿಗೆ ಬಂದು ಕೇಳಿದ.

"ಯಾರು? ಯಾರು ಹೊರಗೆ?"

"ಗಿರೀಶ ನಾನು ಮೇಜರ್"

ಗಿರೀಶನಿಗೆ ಸಮಾಧಾನವಾಯಿತು. ಬಾಗಿಲು ತೆರೆದ. ಮೇಜರರ ಹಿಂದೆ ಸುಷಮಾ ಅಶೋಕ ಬಂದುದನ್ನು ಗಮನಿಸಿ ಅವನಿಗೆ ಹಿಡಿಸಲಾರದಷ್ಟು ಆನಂದವಾಯಿತು.

"ಅರೆ.. ನೀವು.. ನೀವು ಯಾವಾಗ ಬಂದಿರಿ?"

"ನಿನ್ನೆ ರಾತ್ರಿಯೇ ಅವರು ಶತ್ರುವಿಗೆ ಚಳ್ಳೆಹಣ್ಣು ತಿನ್ನಿಸಿ ಅವನನ್ನೇ ಹಾರಿಸಿಕೊಂಡು ಬಂದಿದ್ದಾರೆ. ಗಿರೀಶ ಇಂಥವರು ನನ್ನ ಸಂಗಡಿಗರು ಎಂದು ಹೇಳಿಕೊಳ್ಳಲು ಸಂತೋಷವಾಗುತ್ತಿದೆ" ಮೇಜರ ಉತ್ತರಿಸಿದ.

"ನನಗೂ ಅಷ್ಟೆ. ಇಂಥವರು ನನ್ನ ಸ್ನೇಹಿತರಾದದ್ದು ನನ್ನ ಮಹಾಭಾಗ್ಯ"

ಗಿರೀಶ ಹೃದಯ ತುಂಬಿ ನುಡಿದ. ಬಾಗಿಲು ಮುಚ್ಚಿ ಬೋಲ್ಟ್ ಏರಿಸಿ ಹೊರಳಿದ. ಮಂಚದಡಿಯಿಂದ ಎಲ್ಲವನ್ನೂ ಗಮನಿಸುತ್ತಿದ್ದ ಅಜಿತ್ ಎದ್ದು ಹೊರಗೆ ಬಂದ.

"ಹಲೋ ಅಜಿತ್. ಹೇಗಿದ್ದೀರಿ ?" ಆತ್ಮೀಯತೆಯಿಂದ ಕೇಳಿದ ಮೇಜರ.

"ನಿಮ್ಮಿಂದಾಗಿ ಆರಾಮಾಗಿದ್ದೇನೆ. ಚೆನ್ನಾಗಿ ನಿದ್ದೆ ತೆಗೆದೆ"

ಎಲ್ಲರೂ ಬಂದು ಡ್ರಾಯಿಂಗ್ ರೂಮಿನಲ್ಲಿ ಕುಳಿತರು.

ಗಿರೀಶ ಎಲ್ಲರಿಗೂ ಕಾಫಿ ತಂದು ಕೊಟ್ಟ. ಕಾಫಿ ಕುಡಿಯುತ್ತ ಮೇಜರ್ ಅಜಿತ್‌ನಿಗೆ ಹೇಳಿದ.

"ಅಜಿತ್.. ನಿಮಗೊಂದು ಸಂತಸದ ವಾರ್ತೆ"

ಅಜಿತ ತಲೆ ಎತ್ತಿ ಅವನೆಡೆ ನೋಡಿದ.

"ನೀವು ಯಾರಿಗೆ ಹೆದರುತ್ತಿದ್ದಿರೋ ಯಾರು ನಿಮ್ಮನ್ನು ಕೈಗೊಂಬೆಯಾಗಿ ಕುಣಿಸುತ್ತಿದ್ದರೋ ಅವರೀಗ ನನ್ನ ಬಂದಿಯಾಗಿದ್ದಾರೆ"

"ಏನೆಂದಿರಿ.. ಇನ್ನೊಮ್ಮೆ ಹೇಳಿ"

"ನಿಮ್ಮ ಭೋಟಾಬಾಸ್‌ನನ್ನು ನನ್ನ ಬಹದ್ದೂರ್ ಸಂಗಡಿಗರಾದ ಅಶೋಕ ಮತ್ತು ಸುಷಮಾ ಬಂಧಿಸಿ ತಂದಿದ್ದಾರೆ. ಅವನೀಗ ನನ್ನ ಬಂದಿಯಾಗಿದ್ದಾನೆ"

"ಹಾಗಾದರೆ ನಾನು ನಿರ್ಭಯವಾಗಿ ನಿಮಗೆ ಸಹಕಾರ ನೀಡುವೆ"

"ಈಗಾಗಲೇ ನನಗೆ ಐವತ್ತಕ್ಕೂ ಹೆಚ್ಚು ಅಂಶ ತಿಳಿದಿದೆ. ಮಿಕ್ಕಿದ್ದು ನಿಮ್ಮ ಹೇಳಿಕೆ ಅವಲಂಬಿಸಿದೆ"

"ಸರಿ. ಏನೆಲ್ಲ ಹೇಳಲು ಸಿದ್ಧ. ಅಜಿತ ಹೇಳಿಕೆ ಕೊಡಲೂ ತಯಾರು"

ಗಿರೀಶ ಅಲ್ಲೇ ಇದ್ದ ಟೇಪ್ ರಿಕಾರ್ಡರ ತಂದು ಮಧ್ಯದಲ್ಲಿರಿಸಿದ.

ಅಜಿತ್ ಒಂದೊಂದಾಗಿ ಎಲ್ಲ ಹೇಳುತ್ತ ನಡೆದ. ಭೋಟಾಬಾಸ್‌ನ ಪರಿಚಯವಾದದ್ದು. ಆತ ಅವನನ್ನು ಪತನದ ದಾರಿ ಹಿಡಿಸಿದ್ದು. ಹಣದ ಆಶೆ ತೋರಿಸಿ ಸಮಾಜ ವಿರೋಧಿ ಕೆಲಸ ಮಾಡಿಸಿದ್ದು. ಇದಲ್ಲದೇ ಬೇರೆ ಬೇರೆ ಹೆಣ್ಣುಗಳೊಂದಿಗೆ ಆತನಿದ್ದ ವಿಡಿಯೋ ಕ್ಯಾಸೆಟ್ ತೋರಿಸಿ ಬ್ಲಾಕ್‌ಮೇಲ್

ಮಾಡಲು ತೊಡಗಿದ್ದು. ಇದರಿಂದಾಗಿ ಸಂಪೂರ್ಣ ಶರಣಾದ ಅಜಿತ್ ಅವನ ಕೈಗೊಂಬೆಯಾದದ್ದು. ದೊಡ್ಡ ಪ್ರಮಾಣದಲ್ಲಿ ಚಿನ್ನ ಸಾಗಿಸುವ ಸಂದರ್ಭ ಬಂದಲ್ಲಿ ತಾನೇ ಸೂಚನೆ ನೀಡಿ ಪೊಲೀಸರಿಂದ ಏನೂ ಅರಿಯದ ಮಕ್ಕಳ ಕೈಯಲ್ಲಿ ಚಿನ್ನ ಕೊಟ್ಟು ಹಿಡಿಸುವದು. ಅದೇ ಸಮಯಕ್ಕೆ ಬೇರೆ ದಾರಿಯಿಂದ ದೊಡ್ಡ ಪ್ರಮಾಣದ ಚಿನ್ನ ಸಾಗಿಸುವದು ಎಲ್ಲಾ ಹೇಳಿದ. ಈಗ ಸಧ್ಯ ವಿನಾಯಕ, ಚಂದ್ರಕಾಂತ, ಬಸವರ್ರಾಜ, ಗಂಗಾಧರ ಎಲ್ಲಿ ಇದ್ದಾರೆ ಮುಂತಾದವನ್ನೆಲ್ಲಾ ಹೇಳಿ ಮುಗಿಸಿದ. ಕೊನೆಗೆ ಆತ ಹೇಳಿದ ಮಾತು ತುಂಬಾ ಅಚ್ಚರಿಯುಂಟು ಮಾಡಿತು.

"ಮೇಜರ್, ದೊಡ್ಡ ಪ್ರಮಾಣದಲ್ಲಿ ಚಿನ್ನ ಸಾಗಿಸುವಾಗ ಅದಕ್ಕಾಗಿ ಉಪಯೋಗಿಸುವ ವಾಹನವನ್ನು ನಾನು ಚೆನ್ನಾಗಿ ಪರೀಕ್ಷಿಸುತ್ತಿದ್ದೆ. ಎಲ್ಲಿಯೂ ನನಗೆ ಚಿನ್ನದ ಒಂದು ತುಂಡೂ ಸಿಗುತ್ತಿರಲಿಲ್ಲ. ಹೀಗಿದ್ದೂ ಅದೇ ವಾಹನದಲ್ಲಿ ಕೋಟಿ ಕೋಟಿ ಬೆಲೆ ಬಾಳುವ ಚಿನ್ನವಿದೆ ಎಂಬುದು ಅಷ್ಟೇ ಸತ್ಯಸಂಗತಿಯಾಗಿತ್ತು"

"ಗುಡ್. ಇದೊಂದು ಮಹತ್ವದ ವಿಷಯ. ಇನ್ನೊಂದು ಮಾತು. ಪ್ರತಿಸಾರಿ ನೀವು ಇಂಥ ವಾಹನ ತಲಪಿಸುವಾಗ ನಿಮ್ಮ ಜೊತೆ ಇರುತ್ತಿದ್ದ ನಿಮ್ಮ ಮೇಲಧಿಕಾರಿ ಯಾರು?"

"ನಾನು ಯಾವಾಗಲೂ ನನ್ನ ಜೊತೆ ಕರಿನಿಂಗಯ್ಯ ಅನ್ನುವ ಸಬ್‌ಇನ್‌ಸ್ಪೆಕ್ಟರ್‌ನನ್ನು ಕರೆದೊಯ್ಯುತ್ತಿದ್ದೆ. ಅವರಿಂದಲೇ ಮಕ್ಕಳ ಬಂಧನ ಮಾಡಿಸುತ್ತಿದ್ದೆ. ಇನ್ನು ಮೇಲಧಿಕಾರಿ ಅಂದ್ರೆ..."

ಒಂದು ಕ್ಷಣ ಅಜಿತ್ ಹಿಂದೆ ಮುಂದೆ ನೋಡಿದ. ಹೇಮಂತ ಜೇಬಿನಿಂದ ಡೈರಿ ತೆಗೆದು ಅದರಲ್ಲೊಂದು ಹೆಸರು ಬರೆದು ಅವನ ಮುಂದೆ ಹಿಡಿದು ಕೇಳಿದ.

"ನೀವು ಬಾಯಿಯಿಂದ ನುಡಿಯಬೇಕಾಗಿಲ್ಲ. ನಾನು ಬರೆದ ಹೆಸರು ನೋಡಿ ಹೇಳಿ. ಇವರೇ ಹೌದೋ ಅಲ್ಲವೋ ಅಂತ"

ಅಜಿತ್ ಡೈರಿಯನ್ನು ನೋಡಿ ಬೆಚ್ಚಿದ. ಅದರ ಹಿಂದೆಯೇ ಮೆಚ್ಚಿಗೆ ಸೂಸುತ್ತ ಹೇಳಿದ.. 'ಪರಫೆಕ್ಟ್ ಇವರೇ'.

"ಕೊನೆಯದಾಗಿ ಇನ್ನೊಂದು ಮಾತು. ಈಗ ಸೆರೆ ಸಿಕ್ಕಿರುವ ಛೋಟಾಬಾಸ್. ಅವನ ಮೇಲಿರುವ ಬಿಗ್‌ಬಾಸ್ ಯಾರು?"

"ನನಗೆ ಗೊತ್ತಿಲ್ಲ"

"ಏನು? ನಿಜ ಹೇಳುತ್ತಿದ್ದೀರಾ?"

"ನಿಮ್ಮಾಣೆಗೂ ಮೇಜರ್. ನಾನು ಬಿಗ್‌ಬಾಸ್‌ನ ಮುಖವನ್ನೇ ನೋಡಿಲ್ಲ. ನನ್ನ ಸಂಪರ್ಕ ಕೇವಲ ಛೋಟಾಬಾಸ್‌ವರೆಗೆ ಮಾತ್ರ ಇತ್ತು. ಬಿಗ್‌ಬಾಸ್‌ನ ಬಗ್ಗೆ ನಾನೆಂದೂ ತಲೆ ಕೆಡಿಸಿಕೊಳ್ಳಲೇ ಇಲ್ಲ"

"ಹೋಗಲಿ ಬಿಡಿ. ನಿಮ್ಮ ಮಾತಿನ ಮೇಲೆ ನನಗೆ ಪೂರ್ತಿ ವಿಶ್ವಾಸವಿದೆ. ಬಿಗ್‌ಬಾಸ್ ಪಾತಾಳದಲ್ಲಿ ಅಡಗಿದ್ದರೂ ಎಳೆದು ತಂದು ಕೈಗೆ ಕೋಳ ತೊಡಿಸುತ್ತೇನೆ"

"ಯಾವಾಗ?"

"ಎಷ್ಟು ಸಾಧ್ಯವೋ ಅಷ್ಟು ಬೇಗ. ಇನ್ನೊಂದು ವಿಷಯ ಮರೆತೆ. ಇಂದೋ ನಾಳೆಯೋ ಚಿನ್ನದ ಸಾಗಾಣಿಕೆ ದೊಡ್ಡ ಪ್ರಮಾಣದಲ್ಲಿ ನಡೆಯುವ ವಿಷಯವೇನಾದರೂ ತಿಳಿದಿದೆಯೇ ನಿಮಗೆ?"

"ಹಾಂ.. ನಾನು ಮರೆತಿದ್ದೆ. ನಾಳೆ ನಸುಕಿನ ಐದು ಗಂಟೆಗೆ ಲಾರಿ ನಂಬರ್ 4488ನಲ್ಲಿ ಚಿನ್ನ ಬರುತ್ತದೆ. ಅದಕ್ಕಾಗಿ 'ಬಕರಾ' ಸಿದ್ದ ಮಾಡಿ ಎಂದು ನಿನ್ನೆ ಸಾಯಂಕಾಲ ಮೆಸೇಜ್ ಬಂದಿತ್ತು"

ಹೇಮಂತ ಚಿಂತಾಮಗ್ನನಾದ. ಮುಂದೆ ಹೇಗೆ? ಮರುದಿನ ಅಜಿತನ ಹಾಜರಿ ಅತ್ಯಾವಶ್ಯಕವಾಗಿತ್ತು. ಹೇಗೆ ಮಾಡುವದು?

ಅದಕ್ಕೆ ಪರಿಹಾರ ಹುಡುಕಿದವ ಅಜಿತಪ್ರಸಾದ.

"ನೀವು ನನ್ನನ್ನು ನಂಬುವದಾದರೆ ಒಂದು ಮಾತು"

"ಹೇಳಿ ಅಜಿತ್. ನಮ್ಮ ನಿಮ್ಮ ಮಧ್ಯೆ ಅಪನಂಬಿಕೆ ಎಂಬುದು ಇಲ್ಲ"

"ಧನ್ಯವಾದಗಳು ಮೇಜರ. ನೀವು ನನ್ನ ಮೇಲೆ ವಿಶ್ವಾಸವಿಡುವುದಾದರೆ ನನ್ನನ್ನು ಬಿಟ್ಟುಬಿಡಿ. ನಾನು ಅವರಂತೆ ನಡೆದು ನಿಮಗೆ ಸಹಾಯ ಮಾಡುತ್ತೇನೆ. ಒಂದು ವೇಳೆ ಇಂದು ನಾನು ಠಾಣೆಯಲ್ಲಿ ಕಾಣದಿದ್ರೆ ಅವರಿಗೆ ಸಂಶಯ ಬರುತ್ತದೆ"

"ಅದು ನಿಜ. ಆದರೆ ನೀವು ಈಗಾಗಲೇ ಸಸ್ಪೆಂಡ್ ಆಗಿದ್ದೀರಿ. ಈ ವಾರ್ತೆ ಅವರಿಗೆ ತಿಳಿಯದೇ ಇರುತ್ತದೆಯೆ?"

"ನಾನು ಸಸ್ಪೆಂಡ್ ಆದದ್ದು ವಿನಾಯಕನ ಸಲುವಾಗಿ ಚಿನ್ನಕ್ಕಾಗಿ ಅಲ್ಲ. ನಾನು ಸಿವಿಲ್ ಡ್ರೆಸ್‌ನಲ್ಲಿದ್ದೇ ಅವರಿಗೆ ಸಹಾಯ ಮಾಡಬಲ್ಲೆ. ಯೋಚಿಸಿ. ನನ್ನ ಒತ್ತಾಯವಿಲ್ಲ"

''ಇದರಲ್ಲಿ ಯೋಚಿಸುವದೇನೂ ಇಲ್ಲ ಅಜಿತ್. ಹೇಗಿದ್ದರೂ ನಿಮಗೆ ಸಾವು ಶತಸಿದ್ಧವಾಗಿತ್ತು. ನಾನದನ್ನು ತಪ್ಪಿಸಿರುವೆ. ಒಂದು ವೇಳೆ ನಾಳೆ ನೀವು ನನಗೆ ಮೋಸ ಮಾಡಿದರೆ ಅವರ ಬದಲು ನೀವು ನನ್ನ ಗುಂಡಿಗೆ ಬಲಿ ಆಗುತ್ತೀರಿ ಅಷ್ಟೇ''

ಅತಿಸರಳವಾಗಿ ಸಮಾಧಾನದಿಂದಲೇ ಹೇಮಂತ ಕಠೋರಸತ್ಯದ ದರ್ಶನ ಮಾಡಿಸಿದ್ದ. ಗಂಭೀರವಾಗಿ ಎಚ್ಚರಿಸಿದ್ದ.

''ನಿಮ್ಮ ಗುಂಡಿಗೆ ಬಲಿಯಾಗುವುದಕ್ಕೆ ಪುಣ್ಯ ಬೇಕು ಮೇಜರ್. ಸದ್ಯ ನಾನು ಅದಕ್ಕೆ ಸಿದ್ದನಿಲ್ಲ. ಮೊದಲು ನಾನು ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕಾಗಿದೆ''

''ಸರಿ ಹಾಗಾದರೆ. ನೀವಿನ್ನು ಹೊರಡಬಹುದು. ಗಿರೀಶ ನಿಮಗೆ ನಿಮ್ಮ ಕೆಲಸದಲ್ಲಿ ಸಹಕಾರ ನೀಡುತ್ತಾನೆ. ಯಾಕೆಂದರೆ ನಿಮ್ಮ ಠಾಣೆಯ ಇನ್‌ಚಾರ್ಜ್ ಅವನೇ ಅಲ್ಲವೇ?''

ಅಜಿತ್‌ಪ್ರಸಾದ ಪ್ರಥಮ ಬಾರಿ ಮುಗುಳ್ನಗೆ ನಕ್ಕ.

''ನಿಮ್ಮನ್ನು ಅರಿಯುವದು ಅಷ್ಟು ಸುಲಭವಲ್ಲ ಮೇಜರ. ಕೊನೆಗೂ ನೀವು ನನ್ನ ಮೇಲೆ ಕಾವಲು ಹಾಕೇ ಬಿಟ್ಟಿರಿ''

''ನೋ ನೋ ಅಜಿತ್. ನೀವು ಮತ್ತೆ ನನ್ನ ತಪ್ಪು ತಿಳಿದಿರಿ. ನಾನು ಕಾವಲು ಹಾಕಿದ್ದು ನಿಜ. ನಿಮ್ಮ ಮೇಲಲ್ಲ, ನಿಮ್ಮನ್ನು ಕೊಲ್ಲಲು ಬರುವ ಅಜ್ಞಾತ ಶತ್ರುವಿಗಾಗಿ. ನನಗೆ ನಿಮ್ಮ ಜೀವ ಅಮೂಲ್ಯವಾದದ್ದು. ನೀವು ಜೀವಂತವಾಗಿ ಬರಬೇಕು ತಿಳಿಯಿತೇ?''

ಹೇಮಂತನ ಮಾತು ಮುಗಿಯುವದೇ ತಡ, ಅಜಿತ್‌ಪ್ರಸಾದ ಅವನ ಪಾದಗಳ ಮೇಲೆ ಬಿದ್ದು ಗಳಗಳನೆ ಅಳತೊಡಗಿದ.

''ನಾನು ಪಾಪಿ. ನನಗಾಗಿ ಕನಿಕರಿಸುವ ನಿಮ್ಮನ್ನು ತಪ್ಪು ತಿಳಿದೆ. ನನ್ನ ಕ್ಷಮಿಸಿ. ನನ್ನ ಕ್ಷಮಿಸಿ''

ಹೇಮಂತ ಮಗುವನ್ನೆತ್ತುವಂತೆ ಅವನನ್ನು ಎತ್ತಿ ಸಮಾಧಾನ ಮಾಡಿದ. ಅಜಿತ್ ಬಾತ್‌ರೂಮಿಗೆ ಹೋಗಿ ಮುಖ ತೊಳೆದು ಬಂದ.

''ಅಜಿತ್, ಅಶೋಕ ಹಾಗೂ ಸುಷಮಾ ಬಂಧನದಿಂದ ಪಾರಾದ ವಿಷಯ ನಿಮ್ಮ ಭೋಟಾಬಾಸ್‌ನ ಕೈಸೆರೆ ಇವನ್ನು ಗುಪ್ತವಾಗಿಡಿ. ಎಲ್ಲೂ ಉಸುರಬೇಡಿ''

''ಆಗಲಿ ನೀವು ಹೇಳಿದಂತೆ. ಬನ್ನಿ ಗಿರೀಶ್''

ಹೇಮಂತ ಗಿರೀಶನಿಗೆ ಕೆಲವೊಂದು ಮಹತ್ವದ ಸೂಚನೆ ನೀಡಿ ಕಳಿಸಿಕೊಟ್ಟ.

ಅನಂತರ ಅಲ್ಲೊಂದು ಪ್ರಸಾಧನ ಕೇಂದ್ರ ಧಿಡೀರನೆ ನಿರ್ಮಾಣವಾಯಿತು. ಹೇಮಂತನ ಕೈಯಲ್ಲಿ ಸುಷಮಾ ಮತ್ತು ಆಶೋಕ ಇಬ್ಬರೂ ಪೂರ್ತಿ ಬದಲಾಗಿ ನವನಾಗರಿಕರಾಗಿ ನಿರ್ಮಾಣಗೊಂಡರು. ಅವರನ್ನು ಮುಂಚೆ ನೋಡಿದ ಯಾರೂ ಗುರುತಿಸುವಂತಿರಲಿಲ್ಲ.

"ನೀವು ಏನು ಮಾಡಬೇಕು ಅನ್ನುವುದನ್ನೆಲ್ಲ ಚೆನ್ನಾಗಿ ತಿಳಿಸಿ ಹೇಳಿರುವೆ. ಏನಾದರೂ ಸಂಶಯವಿದ್ದರೆ ಕೇಳಿ"

"ಸಂಶಯ ಕೇಳುವಷ್ಟು ಬುದ್ದುಗಳೇ ನಾವು?" ಇಬ್ಬರೂ ಒಂದೇ ಬಾರಿ ಕೇಳಿ 'ಬೈ ಬೈ' ಅನ್ನುತ್ತ ಹೊರನಡೆದರು. ಸುಷಮಾಳತ್ತ ಒಂದು ಪ್ಲೈಯಿಂಗ್ ಕಿಸ್ ನೀಡಿದ ಮೇಜರ್.

ಅವರಿಬ್ಬರೂ ಹೋದ ಹದಿನೈದು ನಿಮಿಷಗಳ ನಂತರ ಮನೆಗೆ ಬೀಗ ಜಡಿದು ಹೊರಬಂದ ಮೇಜರ್. ಅವರ ಕಾರು ಹೊರಗೇ ಕಾಯುತ್ತಿತ್ತು. ಅತ್ತಿತ್ತ ಒಂದು ಬಾರಿ ಸೂಕ್ಷ್ಮದೃಷ್ಟಿ ಬೀರಿ ಕಾರಿನ ಬಳಿ ಬಂದು ಒಳಗೆ ಕುಳಿತುಕೊಂಡ. ಕಾರು ನೀರಮೇಲಿನ ನಾವೆಯಂತೆ ನಿಧಾನವಾಗಿ ಚಲಿಸಲಾರಂಭಿಸಿತು. ಅದರ ಗುರಿ ಮಕ್ಕಳ ನಿರೀಕ್ಷಣಾಲಯ. ಹೊರಗಡೆ ಕಾರು ನಿಲ್ಲಿಸಿ ಒಳಗಡೆ ನಡೆದ. ಎದುರು ಓಂದ್ಯೆದಾರು ಮಕ್ಕಳು ನಮಸ್ಕಾರ ಸರ್ ಎಂದು ಪ್ರೀತಿಯಿಂದ ನಮಸ್ಕರಿಸಿದರು. ಅವರೆಲ್ಲರ ಗಲ್ಲ ತಟ್ಟಿ ವಾತ್ಸಲ್ಯ ತೋರಿಸಿ ಆಫೀಸಿನತ್ತ ಹೆಜ್ಜೆ ಹಾಕಿದ. ಅಲ್ಲೇ ಅವನಿಗೆ ಕರ್ನಲ್‌ರ ಭೇಟಿಯಾಯ್ತಿತು. ಅವರು ಕೆಂಗಪ್ಪನವರೊಂದಿಗೆ ಮಕ್ಕಳ ಯೋಗಕ್ಷೇಮ ವಿಚಾರಿಸುತ್ತಿದ್ದರು. ಹೇಮಂತನನ್ನು ನೋಡುತ್ತಲೂ ಇಬ್ಬರೂ ಎದ್ದು ನಿಂತರು.

"ಹಲೋ ಕರ್ನಲ್ ಆಂಥೋನಿಯವರೆ, ನೀವು ಇಲ್ಲೇ ಸಿಕ್ಕಿದ್ದು ತುಂಬಾ ಅನುಕೂಲವಾಯ್ತು. ಇಲ್ಲದಿದ್ರೆ ನಿಮ್ಮನೆಗೆ ಬರಬೇಕಾಗುತ್ತಿತ್ತು"

"ಅದೇನಪ್ಪಾ ಅಂಥಾ ವಿಷಯ"

"ನಾನಿಂದು ಊರಿಗೆ ಹೋಗಬೇಕೆಂದು ನಿರ್ಧರಿಸುವೆ. ಹೇಳಿ ಹೋಗಲು ಬರಬೇಕೆಂದುಕೊಂಡಿದ್ದೆ"

"ಅರೆ ಹೀಗೆಂದರೆ ಹೇಗೆ? ನಿಮಗೆ ನಾನು ವಹಿಸಿಕೊಟ್ಟ ಕೆಲಸ ಪೂರ್ತಿ ಮಾಡದೇ ಹೇಗೆ ಹೋಗುತ್ತೀರಿ"

"ದಯವಿಟ್ಟು ಕ್ಷಮಿಸಿ ಕರ್ನಲ್. ಊರಿನಿಂದ ಫೋನ್ ಬಂದಿದೆ. ಐ.ಜಿ.ಪಿ.ಯವರು ಕೂಡಲೇ ಬರಲು ತಿಳಿಸಿದ್ದಾರೆ. ಹೊರಡಲೇ ಬೇಕು"

''ನಮಗೆ ಅದೃಷ್ಟವಿಲ್ಲ ಅನ್ನಿ''

''ಹಾಗೆಂದು ನೊಂದುಕೊಳ್ಳಬೇಡಿ. ನಾನು ಅರ್ಧ ಮಾಡಿದ ಕೆಲಸವಿದೆಯಲ್ಲ. ಅದನ್ನು ಪೂರ್ತಿ ಮಾಡಲು ಖಂಡಿತ ಬರುತ್ತೇನೆ''

''ಸರಿ. ನಿಮ್ಮಿಷ್ಟ. ನನಗಂತೂ ಮನಸ್ಸೇ ಇಲ್ಲ. ನಿಮ್ಮ ಸಂಗಡಿಗರೆಲ್ಲಿ ಕಾಣ್ತಾನೇ ಇಲ್ಲ''

''ಅವರನ್ನು ಇಂದು ಬೆಳಿಗ್ಗೆ ಮುಂಚೆಯೇ ಕಳಿಸಿಬಿಟ್ಟೆ. ಮುಂದಿನ ಸಿದ್ಧತೆ ಮಾಡಲು''

''ನೀವು ತುಂಬಾ ಚಾಣಾಕ್ಷರು. ನಾನಿನ್ನು ಬರಲೇ?'' ಕರ್ನಲ್ ಮೇಜಿನ ಮೇಲಿದ್ದ ಎರಡು ಮೂರು ಜೊತೆ ಹ್ಯಾಂಡ್‌ಗ್ಲೌಜ್ ಕೈಗೆ ತೆಗೆದುಕೊಂಡರು. ಹೇಮಂತ ಅತ್ತ ನೋಡಿದ. ಬಹಳ ಸುಂದರವಾದ ಕೈಚೀಲಗಳು. ಅವನ ದೃಷ್ಟಿ ಗಮನಿಸಿದರು ಕರ್ನಲ್.

''ಇದೀಗ ಇಲ್ಲೇ ಕೊಂಡೆ ಚೆನ್ನಾಗಿವೆ. ಮೂರು ಜೊತೆಗೆ ಕೇವಲ ನೂರು ರೂಪಾಯಿ. ಬೇಕೆಂದ್ರೆ ನೀವೊಂದು ಜೊತೆ ತೆಗೆದುಕೊಳ್ಳಿ''

''ನನಗೆ ನಿಮ್ಮ ಕೈಯಲ್ಲಿ ಈಗಾಗಲೇ ಧರಿಸಿರುವ ಹಳದಿ ಬಣ್ಣದ ಕೈಚೀಲಗಳ ಮೇಲೆ ಮನಸ್ಸಾಗಿದೆ. ನಿಮ್ಮ ನೆನಪಿಗಾಗಿ ಕೊಟ್ಟರೆ ನಾನು ಆಭಾರಿ''

''ಅರರೆ ಇದೆಂಥ ಮಾತು. ತೆಗೆದುಕೊಳ್ಳಿ'' ಅಂಥೋನಿ ಕೈಗೆ ಧರಿಸಿದ್ದ ಕೈಚೀಲ ಬಿಚ್ಚಿ ಮೇಜರಿಗೆ ನೀಡಿ ಹೊಸದಾಗಿ ಕೊಂಡವುಗಳಿಂದ ಒಂದು ಜೊತೆ ತೆಗೆದು ತಾವು ಧರಿಸಿದರು.

''ನನಗೆ ಕೋಲ್ಡ್ ಅಲರ್ಜಿ. ಕೈ ಚೀಲ ಧರಿಸದಿದ್ದರೆ ಬಾವು ಬಂದು ಬಿಡುತ್ತೆ. ನಾನಿನ್ನು ಬರಲಾ?''

ಅವನನ್ನು ಪ್ರೀತಿಯಿಂದ ಬೀಳ್ಕೊಟ್ಟ ಹೇಮಂತ. ಕೆಂಗಪ್ಪ ಕಂಗಾಲಾಗಿದ್ದರು. ಹೌಹಾರಿದ್ದರು. ಅಳುವದೊಂದೇ ಬಾಕಿ ಉಳಿದಿತ್ತು.

''ಏನು ಕೆಂಗಪ್ಪನವರೇ. ಅಳುತ್ತ ನನ್ನನ್ನು ಬೀಳ್ಕೊಡುವದೇ?!''

''ಹಾಗಲ್ಲ.. ನಮ್ಮನ್ನು ಪ್ರೀತಿಯಿಂದ ಕಂಡು ಧನ್ಯರನ್ನಾಗಿ ಮಾಡಿದ ನಿಮ್ಮನ್ನ ನಾನು ಏನೂ ಕೊಡದೇ ಹಾಗೇ ಬೀಳ್ಕೊಡಬೇಕಾಯಿತಲ್ಲಾ ಎಂಬ ದುಃಖ''

''ದುಃಖ ನಿಮಗಲ್ಲ ಕೆಂಗಪ್ಪನವರೆ ನನಗೆ. ನಾನು ನಿಮಗೆ ನೀಡಿದ ವಚನದಂತೆ ನಡೆಯಲಿಲ್ಲ. ನಿಮ್ಮ ಹುಡುಗರ ಪಾಲಿಗೆ ಕವಿದಿದ್ದ ಕತ್ತಲೆಯನ್ನು ದೂರ ಮಾಡಲಾರದೇ ನಾನು ಮರಳುತ್ತಿದ್ದೇನೆ. ಆದರೆ ಒಂದು ಮಾತು.

ಇಂದಿಲ್ಲ ನಾಳೆ ನಾನು ಮತ್ತೆ ಬರುತ್ತೇನೆ. ನಿಮ್ಮ ಕಷ್ಟ ದೂರ ಮಾಡುತ್ತೇನೆ''

ಕೆಂಗಪ್ಪನವರ ಬಾಯಿಯಿಂದ ಮಾತೇ ಹೊರಡಲಿಲ್ಲ.

''ನಮ್.. ನಮ್..ನಮ್‌ಸ್ಕಾರ್... ಸ್‌ರ್...'' ಗುಗ್ಗಪ್ಪ ಒಳಗೆ ಕಾಲಿಟ್ಟಾಗ ಭಾರವಾದ ವಾತಾವರಣ ತಿಳಿಯಾಯಿತು. ಮೇಜರ ಅವನನ್ನು ಎತ್ತಿಕೊಂಡು ಮುದ್ದು ಮಾಡುತ್ತ ಹೊರಗೆ ಬಂದ. ತೋಟದ ಮೂಲೆಯಲ್ಲಿ ಹಾಕಿದ್ದ ಕಲ್ಲು ಬೆಂಚಿನ ಮೇಲೆ ಕುಳಿತು ಮಾತಿಗೆ ಆರಂಭಿಸಿದ. ಗುಗ್ಗಪ್ಪನಿಗೆ ಉತ್ತರ ಕೊಡಲು ತೊಂದರೆಯಾದಾಗ ಅವನ ಮಾತನ್ನು ತಾನೇ ಪೂರ್ತಿ ಮಾಡಿ 'ಸರಿಯಾ?' ಎಂದು ಕೇಳುತ್ತಿದ್ದ.

''ಗುಗ್ಗಪ್ಪ.. ನಿನ್ನ ಕರೆದುಕೊಂಡು ಅವರು ದೊಡ್ಡ ಸಾಹೇಬರ ಕಡೆ ಹೋಗಿದ್ದರಾ?''

''ಇ..ಇ..ಇಲ್ಲ''

''ಸರಿ. ನಿನ್ನ ಕೈಗೆ ಚಿನ್ನ ಕೊಟ್ಟವರಾರು ಗೊತ್ತೇ?''

''ಇ...ಲ್ಲ..ಲ್ಲ.. ಮಾರಿ...ಮು...ಸು...ಕು..ಕರಿ..ಬಿ..ಟ್ಟೆ..''

''ಓಹೋ ಕರಿಬಟ್ಟೆ ಮುಸುಕು ಹಾಕಿದ್ದರಾ? ಅವರ ಗುರುತು ನಿನಗೆ ಮತ್ತೆ ಸಿಕ್ಕುತ್ತದಾ? ಅವರ ಕಿವಿ ಹರಿದಿತ್ತೇ? ಕಣ್ಣು ಕುರುಡಾಗಿತ್ತೆ? ಅವರು ಕುಂಟುತ್ತಿದ್ದರೆ?'' ಮುಂತಾದ ಪ್ರಶ್ನೆಗಳಿಗೆ ಒಂದೇ ಉತ್ತರ ಇಲ್ಲ.. ಇಲ್ಲ..

ನಿರಾಶೆ... ಸೋಲಲಿಲ್ಲ ಮೇಜರ.

''ನೀನು ಅವರ ಬಳಿ ನೋಡಿದ ವಿಶೇಷ.. ಹೊಸ ವಸ್ತು ಏನು?'' ಗುಗ್ಗಪ್ಪ ಯೋಚಿಸಿ ತಟ್ಟನೆ ಹೇಮಂತನ ಎಡಕೈ ಹಿಡಿದು ಅದರ ಕಿರುಬೆರಳು ಒತ್ತಿಒತ್ತಿ ತೋರಿಸಿದ.

''ಅವರಿಗೆ ಕಿರುಬೆರಳು ಇದ್ದಿಲ್ಲವಾ?''

ಅಲ್ಲವೆಂದು ಗೋಣು ಅಡಿಸಿದ ಗುಗ್ಗಪ್ಪ. ಮುಂದಿನ ಎಲ್ಲ ಪ್ರಶ್ನೆಗೆ ಇಲ್ಲ ಇಲ್ಲ ಎಂಬ ಉತ್ತರ. ಮತ್ತೆ ನಿರಾಶೆ.

ಗುಗ್ಗಪ್ಪ ಹೇಮಂತನ ಬಲಗೈಯಲ್ಲಿದ್ದ ಉಂಗುರ ತೋರಿಸಿ ಮತ್ತೊಮ್ಮೆ ಎಡಗೈ ಕಿರುಬೆರಳು ತೋರಿಸಿದ.

''ಏನು? ಅವರ ಕಿರುಬೆರಳಿಗೆ ಉಂಗುರವಿತ್ತಾ?''

ಇಲ್ಲ ಎಂಬ ಉತ್ತರ. ಉಂಗುರ ತೋರಿಸಿ ಬೆರಳಿನಾಕಾರದಲ್ಲಿ ಉದ್ದ ಮಾಡಿ ತೋರಿಸಿದ. ಆಗ ಹೊಳೆಯಿತು ಹೇಮಂತನಿಗೆ.

"ಓಹೋಹೋ ಅವರಿಗೆ ಚಿನ್ನದ ಬೆರಳಿತ್ತಾ?"

ಗುಗ್ಗಪ್ಪನ ಮುಖ ಹೂವಿನಂತೆ ಅರಳಿತು. ಈಗ ಹೇಮಂತನಿಗೆ ಹೊಳೆದದ್ದು ಗುಗ್ಗಪ್ಪನ ಅಪಹರಣಕ್ಕೆ ಕಾರಣವೇನು ಅಂತ. ಆತ ನೋಡುತ್ತಲೇ ಇದ್ದ ಗುಗ್ಗಪ್ಪನ ಮುಗ್ಧ ಮುಖವನ್ನು.

ಬಿಗ್‌ಬಾಸ್‌ನ ಗುರುತು ಹಿಡಿಯಲು ಬೇಕಾಗಿದ್ದ ಮಹತ್ವದ ಸುಳಿವು ದೊರೆತಿತ್ತು. ಅವನ ಎಡಗೈ ಕಿರುಬೆರಳು ಚಿನ್ನದ್ದೆಂದು. ಅದು ಗೊತ್ತಿದ್ದದ್ದು ಕೇವಲ ಗುಗ್ಗಪ್ಪನಿಗೆ. ಆತನಿಗೆ ಮಾತನಾಡಲು ತಿಳಿಯದು. ಯಾರಿಗೂ ಆತ ಹೇಳಲಾರ ಎಂದು ತಿಳಿದ ಬಾಸ್ ಮೈಮರೆತಿದ್ದು ಇಂದು ಹೇಮಂತನಿಗೆ ವರದಾನವಾಯಿತು.

ಗುಗ್ಗಪ್ಪನ ಡುಬ್ಬ ಚಪ್ಪರಿಸಿ 'ಶಹಬ್ಬಾಶ್ ನಡೆ ಒಳಗೆ' ಎಂದ. ಆತ ಜಿಗಿಯುತ್ತ ಓಡಿದ ರಿಮಾಂಡ್‌ಹೋಮಿನತ್ತ. ಹೇಮಂತ ಕೈಲಿದ್ದ ಕರ್ನಲ್ ಅಂಥೋನಿ ಕೊಟ್ಟ ಕೈಚೀಲ ಧರಿಸಿಕೊಂಡ. ಕೈಗೆ ಹಿತವೆನಿಸಿತು ಬಿಚ್ಚಿದ. ಮುದ್ದೆ ಮಾಡಿ ಮುಟ್ಟಿ ನೋಡಿದ. ಶುದ್ಧ ಉಣ್ಣೆಯಿಂದ ಮಾಡಿದ್ದು. ಬಿಚ್ಚಿ ಜೇಬಿಗೆ ಸೇರಿಸಿ ಆಫೀಸಿನತ್ತ ಬಂದ.

ಕೆಂಗಪ್ಪ ಅವರಿಗಾಗಿ ಕಾಯುತ್ತಿದ್ದರು.

"ಕೊನೆಗೆ ಒಂದು ಕಪ್ ಕಾಫಿಯಾದರೂ ಕುಡಿದು ಹೋಗಿ"

"ತರಿಸಿ. ಸಂತೋಷದಿಂದ ಕುಡಿಯುತ್ತೇನೆ. ಇನ್ನೊಮ್ಮೆ ಎಲ್ಲರೊಂದಿಗೆ ಊಟ ಮಾಡಲು ಮತ್ತೆ ಬರುತ್ತೇನೆ"

ಕಾಫಿ ಕುಡಿದು ಮತ್ತೊಮ್ಮೆ ಎಲ್ಲರಿಗೂ ವಂದನೆ ಹೇಳಿ ಹೊರಬಂದ.

ರೂಮಿಗೆ ಬಂದಾಗ ಹನ್ನೊಂದು ಗಂಟೆಗೆ ಸಮೀಪಿಸಿತ್ತು. ಬಟ್ಟೆ ಬದಲಿಸಿದ. ಆಗಲೇ ಕರೆಯಿತು ಟೆಲಿಫೋನು. ರಿಸೀವರ ಎತ್ತಿದ. "ಮೇಜರ ಹೇಮಂತ" ಮತ್ತೆ ಅದೇ ಹಿಂದಿನ ಧ್ವನಿ.

"ಹೇಳಿ ಮಿಸ್ಟರ್ ಏನಾಗಬೇಕು?"

"ಇನ್ನು ಸಮಯವಿದೆ. ನಿಮ್ಮ ಸಂಗಾತಿಗಳೊಂದಿಗೆ ಜೀವಸಹಿತ ಇಲ್ಲಿಂದ ಹೊರಡಿ. ಚಾಮುಂಡಿ ಎಕ್ಸ್‌ಪ್ರೆಸ್ ನಾಲ್ಕು ಮುಕ್ಕಾಲಿಗೆ ಬಿಡುತ್ತದೆ"

"ನನ್ನ ಬಳಿ ಕಾರಿದೆ"

"ಅದನ್ನೂ ಲಗೇಜ್ ಕ್ಯಾರೇಜಿನಲ್ಲಿ ಒಯ್ಯಬಹುದು"

"ಅದು ಸರಿ. ಇಲ್ಲಿಂದ ಹೊರಟರೆ ನನಗೇನೂ ಲಾಭವಿಲ್ಲವಲ್ಲ"

"ಲಾಭದ ಮಾತಾಗಿದ್ದರೆ ಸರಿ. ನಾನು ಕೊಡುತ್ತೇನೆ"

"ಎಷ್ಟು?"

"ಒಂದು ಲಕ್ಷ"

"ನಿಮಗೆಲ್ಲೋ ಹುಚ್ಚು. ಒಂದು ಲಾರಿಯಲ್ಲಿ ಬರುವ ಚಿನ್ನದ ಬೆ ಕೋಟಿಗೆ ಸಮ ಎಂದು ಯಾವ ಮೂರ್ಖನಾದರೂ ಹೇಳ್ತಾನೆ"

"ಐದು ಲಕ್ಷ"

"ಆಗದು"

"ಹತ್ತು"

ಸವಾಲು ಏರುತ್ತಾ ಹೊರಟಿತು.

"ಇಪ್ಪತ್ತೈದು ಲಕ್ಷ.. ಇದರ ಮೇಲೆ ಒಂದು ಚಿಕ್ಕಾಸೂ ಆಗದು"

"ಡನ್. ನಾನು ಸಿದ್ಧ"

"ಹಾಗಾದರೆ ಹೊರಡುವುದು ಯಾವಾಗ?"

"ನನಗೆ ಹಣ ಬಂದು ಸೇರಬೇಕು. ನನ್ನ ಸಂಗಡಿಗರು ಬರಬೇಕು"

"ಹಣ ಕೂಡಲೇ ದೊರೆಯುತ್ತದೆ. ಸಂಗಡಿಗರು ಟ್ರೇನಿನಲ್ಲಿ ಬಂದ ಮಧ್ಯೆ ಎಲ್ಲಾದರೂ ಬಂದು ಸೇರುತ್ತಾರೆ"

"ಪ್ರಾಮಿಸ್?"

"ಹೂಂ.. ಪ್ರಾಮಿಸ್"

"ಸರಿ ಹಾಗಾದರೆ.. ನಾನೀಗಲೇ ಸಿದ್ಧತೆ ಮಾಡಿಕೊಳ್ಳುತ್ತೇನೆ ಚಾಮುಂಡಿಯಲ್ಲಿ ಸೀಟ್ ರಿಸರ್ವ್ ಮಾಡಿಸ್ತೇನೆ"

"ಬೇಕಾಗಿಲ್ಲ. ಈಗಾಗಲೇ ಟುಟ್ಯೆರ್‌ನಲ್ಲಿ ಸೀಟ ಬುಕ್ ಆಗಿದೆ. 'ಬಿ ಹದಿನೇಳು ಹದಿನೆಂಟು ಹತ್ತೊಂಭತ್ತು. ನಿಮ್ಮ ರೂಮಿನ ಬಿಲ್ಲ ಸಹ ಪೇಮೆಂಟ ಆಗಿದೆ. ನೀವು ಹೊರಡುವುದೊಂದೇ ಬಾಕಿ"

"ಈಗಿನ್ನೂ ಹನ್ನೊಂದು ಮುಕ್ಕಾಲು. ನಾಲ್ಕಾದರೂ ಆಗಲಿ. ಕೈಗೆ ಹಣ ಬರಲಿ"

"ಹಣ ಸರಿಯಾಗಿ ಮೂರೂವರೆಗೆ ಬರುತ್ತದೆ"

"ಆಗಲಿ ನಾನು ಮೂರೂ ಮೂವತ್ತೈದಕ್ಕೆ ರೂಮು ಬಿಡುತ್ತೇನೆ"

"ಗುಡ್. ಒಂದ್ಮಾತು. ನೀವು ರೂಮು ಬಿಟ್ಟು ಎಲ್ಲಿಗೂ ಹೋಗಬಾರದು"

"ಇದು ನನಿಂದಾಗದು. ಟೇಲರ ಕಡೆ ಬಟ್ಟೆ ಕೊಟ್ಟಿರುವೆ. ತರಬೇಕು

ಸ್ವಲ್ಪ ಶಾಪಿಂಗ್ ಮಾಡ್ಬೇಕು. ನೀನು ಹೆದರಬೇಡ. ನಾನೇನೂ ಚಾಲಾಕಿತನ ತೋರಿಸುವದಿಲ್ಲ''

''ಜೀವ ಬೇಸರವಾಗಿದ್ದರೆ ತೋರಿಸಿ. ನನ್ನ ಅಭ್ಯಂತರವಿಲ್ಲ''

ಸಂಬಂಧ ಕಡಿಯಿತು.

ಬಟ್ಟೆ ಧರಿಸಿ ಹೇಮಂತ ಹೊರಗೆ ಬಂದ.

ಅಭಿನವ ಟೇಲರ ಬಳಿ ಹೋಗಿ ಹೊಸದಾಗಿ ಹೊಲಿಯಲು ಕೊಟ್ಟಿದ್ದ ಬಟ್ಟೆ ಕೇಳಿದ. ತಯಾರಾಗಿರಲಿಲ್ಲ. ತನ್ನ ವಿಳಾಸಕ್ಕೆ ಕಳಿಸಿಕೊಡುವಂತೆ ತಿಳಿಸಿ ವಿಳಾಸ ಬರೆದುಕೊಟ್ಟ. ಹಾಗೇ ಪೇಟೆಗೆ ಬಂದ. ಅವಶ್ಯಕ ಸಾಮಾನುಕೊಂಡ. ಒಂದು ಗಂಟೆ ಕಳೆದಿತ್ತು. ರೂಮಿಗೆ ಮರಳಿ ಬಂದ. ಎಲ್ಲಾ ಪ್ಯಾಕ್ ಮಾಡಿಟ್ಟ. ಅಶೋಕ ಹಾಗೂ ಸುಷಮಾರ ಬ್ಯಾಗು ಸಹ ರೆಡಿಯಾದವು. ರೂಮಿಗೇ ಊಟ ತರಿಸಿ ಊಟ ಮಾಡಿ ಹಾಯಾಗಿ ಮಲಗಿಕೊಂಡ.

ಕರೆಗಂಟೆ ಬಾರಿಸಿದಾಗಲೇ ಎಚ್ಚರ.

ಸಮಯ ನೋಡಿದ. ಮೂರೂ ಇಪ್ಪತ್ತು.

ಎದ್ದು ಬಾಗಿಲ ತೆರೆದ. ರೂಮ್‌ಬಾಯ್ ನಿಂತಿದ್ದ. ''ಸಾಹೆಬ್ ನಿಮಗಾಗಿ ನಿಮ್ಮ ಸ್ನೇಹಿತರು ಈ ಬ್ರೀಫ್‌ಕೇಸ್ ಕಳಿಸಿದ್ದಾರೆ''

ಇಸಿದುಕೊಂಡು ರೂಮಿನ ಬಾಗಿಲು ಹಾಕಿಕೊಂಡ.

ಮೊದಲು ಬ್ರೀಫ್‌ಕೇಸ್ ಪರೀಕ್ಷಿಸಿದ. ಅಪಾಯವಿಲ್ಲವೆನಿಸಿತು. ಬಾಯಿ ತೆರೆದ. ಅದರ ತುಂಬ ನೂರರ ಕಂತೆಗಳು.

ಹದಿನೈದು ನಿಮಿಷಗಳಲ್ಲಿ ಹೇಮಂತ ಕೆಳಗೆ ಬಂದಿದ್ದ. ಎದುರು ಬಂದವರಿಗೆಲ್ಲ ನೂರು ರೂಪಾಯಿ ನೋಟು ಟಿಪ್ಸ್ ನೀಡಿದ.

ಸಮಯಕ್ಕೆ ಸರಿಯಾಗಿ ಆತ ತನ್ನ ಬೋಗಿಗೆ ಬಂದು ಸೀಟು ಅಲಂಕರಿಸಿದ. ರೈಲು ಅಲ್ಲಿಂಧಲೇ ಹೊರಡುತ್ತಿತ್ತು. ಹೀಗಾಗಿ ತಡವಾಗಲಿಲ್ಲ. ಸರಿಯಾದ ಸಮಯಕ್ಕೆ ಗಾಡಿ ಹೊರಟಿತು. ಬೋಗಿಯ ಬಾಗಿಲಿಗೇ ನಿಂತಿದ್ದ ಹೇಮಂತ ರೈಲ್ವೆ ನಿಲ್ದಾಣ ದೂರ ಹೋದ ಮೇಲೆ ಒಳಗಡೆ ಬಂದು ಬಾಗಿಲು ಹಾಕಿಕೊಂಡ.

ರೈಲು ವೇಗ ಹಿಡಿಯಿತು. ಓಡತೊಡಗಿತು. ಅದಕ್ಕಿಂತ ವೇಗವಾಗಿ ಹೇಮಂತನ ಮೆದುಳು ಓಡತೊಡಗಿತು.

ಪೊಲೀಸ್ ಠಾಣೆಯ ಎಲ್ಲ ಕೆಲಸಗಳನ್ನು ಗಿರೀಶ ಮಾಡಿ ಮುಗಿಸಿದರು.

ಅಜಿತಪ್ರಸಾದ ಅವನ ಹಿಂದೆ ಕೇವಲ ನೆರಳಿನಂತೆ ಓಡಾಡುತ್ತಿದ್ದ ಅಷ್ಟೇ. ಅವನಿಗೆ 'ಬಾಸ್'ನಿಂದ ಬರಬೇಕಾಗಿದ್ದ ಫೋನಿನ ನಿರೀಕ್ಷೆ ಇತ್ತು. ಹನ್ನೊಂದು ಗಂಟೆಗೆ ಸರಿಯಾಗಿ ಅವನ ನಿರೀಕ್ಷೆಯಂತೆ ಫೋನು ಬಂತು ಬಾಸ್‌ನಿಂದ. ಅಜಿತನೇ ರಿಸೀವ್ ಮಾಡಿದ.

"ಎಸ್. ಅಜಿತಪ್ರಸಾದ ಸ್ಪೀಕಿಂಗ್"

"ನಿನ್ನ ಬಳಿ ಸದ್ಯ ಯಾರಿದ್ದಾರೆ?"

ಅದೇ ಪರಿಚಿತ ಧ್ವನಿ. ಅಜಿತ್ ಅತ್ತಿತ್ತ ನೋಡಿದ.

"ಯಾರೂ ಇಲ್ಲ. ಗಿರೀಶ ಪಕ್ಕದ ರೂಮಿನಲ್ಲಿದ್ದಾನೆ. ನನ್ನ ಜಾಗೆಯಲ್ಲಿ"

"ಇದೆಲ್ಲಾ ಹೇಗಾಯಿತು?"

"ಮೇಜರ ಹೇಮಂತನಿಂದಾಗಿ. ವಿನಾಯಕನ ಪ್ರಕರಣ ಎಸ್.ಪಿ.ಸಾಹೇಬರವರೆಗೂ ಆತ ಒಯ್ದ"

"ಚಿಂತಿಸಬೇಡ. ಹೇಮಂತ ಇಲ್ಲಿಂದ ಪಲಾಯನ ಮಾಡುವಂತೆ ಮಾಡುವೆ. ನಾಳೆ ತಪ್ಪಿದರೆ ನಾಡಿದ್ದು ನಿನ್ನ ಸಸ್ಪೆನ್ಷನ್ ಸಹ ರದ್ದು ಪಡಿಸುವಂತೆ ನೋಡಿಕೊಳ್ಳುವೆ. ಛೋಟಾಬಾಸ್ ಎಲ್ಲಿದ್ದಾನೆ?"

"ನನಗೂ ಗೊತ್ತಿಲ್ಲ. ಎರಡು ಮೂರು ಬಾರಿ ಫೋನು ಮಾಡಿದೆ. ಯಾರೂ ರಿಸೀವ್ ಮಾಡ್ತಾ ಇಲ್ಲ. ನಿಮಗೆ ತಿಳಿಸಬೇಕೆಂದರೆ ನನ್ನ ಬಳಿ ಫೋನ್ ನಂಬರ್ ಇಲ್ಲ. ಹೀಗಾಗಿ ಒಂದೇ ಸಮನೆ ಒದ್ದಾಡ್ತಾ ಇದ್ದೆ. ಈಗ ಸಮಾಧಾನವಾಯ್ತು"

"ಸರಿ ನಾಳಿನ ಕೆಲಸ ಮೊದಲಿನಂತೆ. ನಸುಕಿನಲ್ಲಿ ಅದಕ್ಕೂ ಮೊದಲು ಒಂದು ಬಕರಾ ತಯಾರು ಮಾಡಬೇಕಲ್ಲ"

"ಅದನ್ನಾಗಲೇ ಮಾಡಿರುವೆ. ಸ್ವಲ್ಪ ತಲೆ ಕೆಟ್ಟಿರುವ ಹುಡುಗನಿದ್ದಾನೆ"

"ಗುಡ್. ಅಂಥವರೇ ನಮಗೆ ಸರಿಯಾಗುವವರು. ಅತೀ ಅವಶ್ಯಕವೆನಿಸಿದರೆ ನಿನಗೊಂದು ನಂಬರ್ ಕೊಟ್ಟಿರುತ್ತೇನೆ. ಫೋನು ಮಾಡು. ಇದು ಮಾನಸಿಕ ರೋಗಿಗಳ ವೈದ್ಯರ ನಿವಾಸ. ನಮಗೆ ಡಾಕ್ಟರ ಬೇಕು. ಪೇಶಂಟು ಕರೆತಂದಿದ್ದೇನೆ ಎಂದು ಹೇಳಿದರೆ ನನಗೆ ಕನೆಕ್ಷನ್ ಕೊಡ್ತಾರೆ"

"ಆಗಲಿ. ಬಹುಶಃ ಫೋನು ಮಾಡುವ ಪ್ರಸಂಗ ಬರಲಾರದು. ಎಲ್ಲಾ 'ಫೂಲ್‌ಪ್ರೂಫ್' ಪ್ಲಾನ್ ಮಾಡಿರುವೆ"

"ಗುಡ್. ಇಂದು ರಾತ್ರಿ ನಿನಗೆ ನಿನ್ನ ಕಮೀಶನ್ ಬರುತ್ತೆ"

ಸಂಬಂಧ ಕಡಿದುಹೋಯಿತು. ಅಜಿತ ಫೋನಿನಲ್ಲಿ ಮಾತನಾಡಿದ ವಿಷಯ ಒಂದು ಕಾಗದದಲ್ಲಿ ಗುರುತು ಹಾಕಿ ಗಿರೀಶ್ ಬಳಿ ಬಂದ. ಅವನೆದುರು ಚೀಟಿ ಇರಿಸಿ ನಾನು ಹೊರಡಬೇಕಲ್ಲ ಎಂದ. ಬರೆದದ್ದನ್ನೆಲ್ಲಾ ಓದಿದ ಗಿರೀಶ.

''ನೀವಿನ್ನು ಹೋಗಬಹುದು. ಸಾಯಂಕಾಲ ಇಲ್ಲೇ ಭೇಟಿಯಾಗೋಣ. ನಾನು ನಿಮಗೆ ಒಂದು ಬಕರಾ ಒದಗಿಸುತ್ತೇನೆ''

''ನನ್ನ ಮೇಲೆ ವಿಶ್ವಾಸವಿದೆಯಲ್ಲ?''

''ಜಗತ್ತು ಬದುಕಿದ್ದೇ ವಿಶ್ವಾಸದ ಮೇಲೆ. ಅದಲ್ಲದೇ ನೀವು ಅವಿಶ್ವಾಸ ತೋರಿಸಿದರೆ.. ಅದೇ ನಿಮ್ಮ ಸಾವಿಗೆ ಕಾರಣವಾಗುತ್ತದೆ. ಆಯ್ಕೆ ನಿಮಗೆ ಸೇರಿದ್ದು''

''ಖಂಡಿತ ನನಗೆ ಸಾಯಲು ಇಚ್ಛೆಯಿಲ್ಲ ಗಿರೀಶ್''

''ಹಾಗಾದರೆ ನಿಮ್ಮ ಮೇಲೆ ನನಗೆ ಸಂಪೂರ್ಣ ವಿಶ್ವಾಸವಿದೆ''

ಕಣ್ಣಂಚಿಗೆ ಬಂದಿದ್ದ ನೀರನ್ನು ಅಲ್ಲೇ ತಡೆದು ಬಿಗಿದ ಕಂಠದಲ್ಲಿ ಆತ ಹೇಳಿದ.

''ಧನ್ಯವಾದಗಳು. ಅದಕ್ಕೆ ಯೋಗ್ಯನಾಗಲು ಯತ್ನಿಸುವೆ''

ಅಜಿತಪ್ರಸಾದ ಠಾಣೆಯಿಂದ ಹೊರ ಬಿದ್ದ. ಒಂದು ನಿಮಿಷವಿದ್ದು ಮೇಲೆದ್ದ ಗಿರೀಶ ಹೊರಗೆ ಬಂದು ಆತ ಹೋದತ್ತ ನೋಡಿದ. ಮೀನು ಮಾರುವ ಬಡ ಹುಡುಗಿಯೊಬ್ಬಳು ಅವನ ಹಿಂದಿರುವುದನ್ನು ಗಮನಿಸಿ ಮುಗುಳುನಕ್ಕು ಅತ್ತಿತ್ತ ನೋಡಿದ. ಮವಾಲಿಯಂತಿದ್ದವನೊಬ್ಬ ತನ್ನ ಬಾಯಿಯಲ್ಲಿದ್ದ ಕೊರೆ ಚುಟ್ಟಾ ಥೂ ಎಂದು ಉಗಿದು ''ಸಲಾಂ ಸಾಬ್'' ಎಂದ.

ಒಂದು ಗಂಟೆ ಠಾಣೆಯಲ್ಲಿ ಕೆಲಸ ನೋಡಿಕೊಂಡ ಗಿರೀಶ ಹೊರಗೆ ಬಂದು ಜೀಪು ಸ್ಟಾರ್ಟ್ ಮಾಡಿದ. ಜೀಪು ತಿರುವಿಗೆ ಬಂದಾಗ ಮರದ ಕೆಳಗೆ ನಿಂತಿದ್ದ ಅದೇ ಮವಾಲಿ ಓಡಿ ಬಂದು ಹಿಂದೆ ಕುಳಿತುಕೊಂಡ. ಊರ ಹೊರಗಿರುವ ಒಂದು 'ಪ್ರವಾಸಿ ಹೊಟೆಲ್' ಎದುರು ತಂದು ನಿಲ್ಲಿಸಿದ. ಇಬ್ಬರೂ ಒಳಗೆ ನಡೆದರು. ತಿಂಡಿಗೆ ಆರ್ಡರ್ ಮಾಡಿ ಮಾತಿಗೆ ಆರಂಭಿಸಿದರು. ''ಎಲ್ಲಾ ನಾವೆಣಿಸಿದಂತೆ ಆಗುತ್ತಿದೆ. ನನಗೆ ಅಜಿತನದೇ ಹೆದರಿಕೆ''

''ಹೆದರಬೇಡಿ. ನನ್ನ ಹುಡುಗಿ ಅವನ ಹಿಂದಿದ್ದಾಳೆ. ಆತ ಸ್ವಲ್ಪ ಮಿಸುಕಿದರೂ ಅವನೆದೆ ಅವಳ ಬಳಿಯಿರುವ ರಿವಾಲ್ವರ್ ಗುಂಡು ಸೇರುತ್ತದೆ. ಆತ ಹಾಗೆ ಮಾಡಲಾರ''

"ಅಷ್ಟು ವಿಶ್ವಾಸವೇ?"

"ಹೌದು. ಒಬ್ಬ ಅಪರಾಧಿ ಒಳ್ಳೆಯವನಾಗಲು ಮನಸ್ಸು ಮಾಡಿದನೆಂದರೆ ಆತ ಏನೆಲ್ಲವನ್ನು ಎದುರಿಸುತ್ತಾನೆ. ತನ್ನ ಜೀವದ ಹಂಗು ತೊರೆದು ಹೋರಾಡುತ್ತಾನೆ"

"ಹಾಗಾದರೆ ಚಿಂತೆಯಿಲ್ಲ"

ತಿಂಡಿ ಬಂದಿತು. ಮಾತು ನಿಂತಿತು. ಕೈ ಬಾಯಿಯ ಕೋಪ ಮುಗಿಯುವವರೆಗೂ ಇಬ್ಬರಲ್ಲಿ ಒಬ್ಬರೂ ಮಾತನಾಡಲಿಲ್ಲ. ಬಾಯಿ ಒರೆಸಿಕೊಳ್ಳುತ್ತ ತಾನು ಸಿದ್ಧಪಡಿಸಿದ್ದ ಕಾಗದ ಮವಾಲಿ ಮುಂದಿರಿಸಿದ. ಅದನ್ನೊಮ್ಮೆ ವಿವರವಾಗಿ ಓದಿ ಜೇಬಿಗಿಳಿಸಿದ ಮವಾಲಿ ಮೇಲೆ ಏಳುತ್ತಾ ಹೇಳಿದ.

"ನಾನು ಈ ಸಂದೇಶ ಕಳಿಸಿಕೊಡ್ತೇನೆ. ನನ್ನ ದಾರಿ ನೀವು ನೋಡಬೇಡಿ. ನಿಮಗೆ ಸಹಾಯ ನೀಡುವ ಸಂದರ್ಭ ಬಂದರೆ ನಾನೇ ಧಾವಿಸಿ ಬರುತ್ತೇನೆ. ತಿಳಿಯಿತಾ?"

"ಸರಿ. ನಿಮ್ಮನ್ನೆಲ್ಲಿಗೆ ಬಿಡಲಿ"

"ಎಲ್ಲಿಗೂ ಬೇಡ. ನೀವು ಹೊರಡಿ. ನಾನು ಆಟೊ ಹಿಡಿಯುತ್ತೇನೆ" ಮವಾಲಿ ಕೈಕುಲುಕಿ ಅವನಿಗೆ ವಂದಿಸಿ ಗಿರೀಶ ಹೊರಟು ಹೋದ. ಹೊಟೆಲ್‌ನಲ್ಲಿದ್ದವರಿಗೆ ಆಶ್ಚರ್ಯ. ಈ ಮವಾಲಿಯೊಂದಿಗೆ ಪೊಲೀಸ್ ಅಧಿಕಾರಿಯ ಕೆಲಸವೇನು? ಅವನೇ ಇವನಿಗೆ ವಂದಿಸಿದನಲ್ಲ?

ಮವಾಲಿ ಆಟೋ ಹಿಡಿದು ಅಭಿನವ ಟೇಲರ ಬಳಿ ಬಂದ. ಸ್ವಲ್ಪ ಹೊತ್ತು ಮಾತನಾಡಿದ. ತನ್ನ ಬಳಿ ಇದ್ದ ಚೀಟಿ ಅವನ ಕೈಗೆ ಕೊಟ್ಟು ಅವನಿಂದ ಚೀಟಿ ಪಡೆದು ಆತ ಹೊರಬಂದಾಗ 'ಸೀಟಿ' ಹೊಡೆಯುತ್ತಿದ್ದ. ಮೂರು ಗಂಟೆವರೆಗೂ ಸಮಯ ಕಳೆಯಬೇಕಾಗಿತ್ತು. ಎದುರಿಗಿರುವ ವಿಜಯ ಚಿತ್ರಮಂದಿರ ಪ್ರವೇಶಿಸಿದ. ಇಂಗ್ಲೀಷ್ ಚಿತ್ರ ನಡೆದಿತ್ತು. ಕುಳಿತುಕೊಂಡ. ಆತ ಚಿತ್ರ ನೋಡಿ ಹೊರಗೆ ಬಂದಾಗ ಮೂರೂಕಾಲು. ಅಲ್ಲಿಂದ ನಡೆದ ರೈಲು ನಿಲ್ದಾಣದತ್ತ.

* * * * * *

ನಸುಕು ಐದು ಗಂಟೆಗೆ ಸಮೀಪಿಸಿತ್ತು. ಕತ್ತಲೆ ನಿಧಾನವಾಗಿ ಸರಿಯುತ್ತಾ ಬೆಳಕು ಸಾವಕಾಶವಾಗಿ ಪಸರಿಸುವ ಸಮಯ. ಮೈ ಕೊರೆಯುವ ಚಳಿ.

ಚೆಕ್‌ಪೋಸ್ಟ್ ಬಳಿ ನಿಂತ ಪೋಲೀಸ್ ಜೀಪಿನಲ್ಲಿ ಗಿರೀಶ ತನ್ನ ಸಿಬ್ಬಂದಿಯೊಂದಿಗೆ ಕುಳಿತಿದ್ದ. ಅವನ ಕೈಯಲ್ಲಿ ದಿನಪತ್ರಿಕೆ. ಅದರಲ್ಲಿ ರಾತ್ರಿ ದೇವಸ್ಥಾನದ ಬಳಿ ಭಿಕ್ಷುಕರಂತಿದ್ದ ವಿಕ್ಷಿಪ್ತ ಯುವಕನನ್ನು ಬಂಧಿಸಿ ಅವನಿಂದ ಹತ್ತು ಚಿನ್ನದ ಬಿಸ್ಕೆಟ್ ವಶಪಡಿಸಿಕೊಂಡ ಸುದ್ದಿ ಗಿರೀಶನ ಫೋಟೋದೊಂದಿಗೆ ಪ್ರಕಟವಾಗಿತ್ತು. ಗಿರೀಶ ಅದನ್ನಾಗಲೇ ಹತ್ತು ಬಾರಿ ಓದಿ ಮುಗಿಸಿದ್ದ. ಈಗಾತ 4488 ನಂಬರಿನ ಲಾರಿ ದಾರಿ ನೋಡುತ್ತಿದ್ದ. ದಾರಿಗಡ್ಡವಾಗಿ 'ಪೋಲ್' ಇಳಿಬಿಡಲಾಗಿತ್ತು. ಅಂಥ ಚಳಿಯಲ್ಲೂ ರಸ್ತೆ ಬದಿಗೆ ಕುಳಿತಿದ್ದ ಮುದುಕಿಯೊಬ್ಬಳು ನಿಗಿನಿಗಿ ಕೆಂಡದಲ್ಲಿ ಗೋವಿನ ಜೋಳದ ತೆನೆ ಸುಡುತ್ತ ಕುಳಿತಿದ್ದಳು. ಎತ್ತುಗಾಡಿಯವನೊಬ್ಬ ಗಾಡಿ ಬಿಟ್ಟು ಎತ್ತಿಗೆ ನೀರು ಕುಡಿಸುತ್ತಿದ್ದ. ಇಷ್ಟು ಜನರನ್ನು ಬಿಟ್ಟರೆ ಅಲ್ಲಿ ಬೇರೆ ಯಾರೂ ಇರಲಿಲ್ಲ.

ಐದು ಹೊಡೆದು ಹತ್ತು ನಿಮಿಷಗಳಾಗಿರಲಿಲ್ಲ. ಲಾರಿಯೊಂದು ಬರುತ್ತಿರುವದು ಕಾಣಿಸಿತು. ಗಿರೀಶ ಕೆಳಗಿಳಿದು ತನ್ನ ಸಂಗಡಿಗರಿಗೆ ಸಿದ್ಧರಾಗಿ ಇರುವಂತೆ ಸೂಚನೆ ನೀಡಿದ. ಡ್ರೈವರ್ ಜೀಪ್ ಸ್ಟಾರ್ಟ್ ಮಾಡಿ ಇಟ್ಟ. ಮುದುಕಿ ನಡುಗುತ್ತ ಎದ್ದು ನಿಂತಳು. ಗಾಡಿಯವ ನೀರು ಕುಡಿಸಿ ಮುಗಿಸಿದ್ದು ನಿಧಾನವಾಗಿ ಗೇಟಿನ ಬಳಿ ಬರುತ್ತಿದ್ದ. ಅಜಿತ್ ಕೈಲಿದ್ದ ಬ್ಯಾಟರಿ ಅಲ್ಲಾಡಿಸುತ್ತ ಲಾರಿಗೆ ಸಿಗ್ನಲ್ ನೀಡಿದ. ಪ್ರತಿಯಾಗಿ ಲಾರಿಯ ದೀಪ ಆರಿಹತ್ತಿ ಮರುಸಿಗ್ನಲ್ ನೀಡಿದವು. ಆತ ಮುಗುಳ್ನಕ್ಕ.

ಲಾರಿ ಹತ್ತಿರ ಬಂದಿತು. ಅದೇ ನಂಬರು 4488.

ಗಿರೀಶ ಹತ್ತಿರವಾಗ ಹತ್ತಿದ. ಅದೇ ಸಮಯಕ್ಕೆ ಸರಿಯಾಗಿ ಆ ಅಪ್ರತ್ಯಕ್ಷ ಘಟನೆ ನಡೆದು ಹೋಯಿತು. ಲಾರಿ ಕಡೆಯಿಂದ ಹಾರಿ ಬಂದ ಎರಡು ಗುಂಡುಗಳು ಅಜಿತನಿಗೆ ತಗಲುತ್ತಿದ್ದಂತೆ ಆತ ವಿಕಾರವಾಗಿ ಚೀರಿಕೊಂಡು ರಸ್ತೆ ಬದಿಗೆ ಉರುಳಿದ. ಕೈಲಿದ್ದ ಬ್ಯಾಟರಿ ಸಿಡಿದು ದೂರಬಿತ್ತು. ಲಾರಿ ಸ್ಪೀಡ್ ಹೆಚ್ಚು ಮಾಡಿ ಗೇಟಿನೆಡೆ ಧಾವಿಸಿತು. ಅಡ್ಡವಾಗಿ ಇಳಿಬಿಟ್ಟ ಪೋಲ್‌ಗೆ ಹಾಯ್ದು ಅದನ್ನು ತುಂಡು ಮಾಡಿ ಹಾಗೇ ಧಾವಿಸಿ ಹೊರಟು ಹೋಯಿತು. ಗಿರೀಶನಿಗೆ ರಿವಾಲ್ವರ್ ಹೊರತೆಗೆಯುವ ಅವಕಾಶ ಸಿಗಲಿಲ್ಲ.

''ಗಿರೀಶ್ ಕಮಾನ್, ಹರಿಯಪ್'' ಎಂಬ ಕೂಗು ಕೇಳಿಸಿತು.

ಧನಿ ಬಂದ ಕಡೆ ನೋಡಿದ.

ಮೈಗೆ ಸುತ್ತಿಕೊಂಡಿದ್ದ ಹರಕು ಸೀರೆ ಕಿತ್ತೆಸೆದಳು ಮುದುಕಿ. ಒಳಗೆ

ಮ್ಯಾಕ್ಸಿಯಲ್ಲಿದ್ದ ಸುಷಮಾ.. ಎತ್ತಿನಗಾಡಿಯವ ಲುಂಗಿ ಬಿಚ್ಚಿದ. ಒಳಗಡೆ ಪ್ಯಾಂಟ್ ಶರ್ಟ್. ಆತ ಅಶೋಕ.

ಇಬ್ಬರೂ ಓಡಿ ಬಂದು ಜೀಪಿಗೆ ಕುಳಿತರು.

ಗಿರೀಶ ಸಹ ಬಂದು ಕೂಡುತ್ತಿದ್ದಂತೆ ಜೀಪು ಮುಂದಿದ್ದ ಲಾರಿ ಹಿಂಬಾಲಿಸಿತು. ಐದೇ ನಿಮಿಷಗಳಲ್ಲಿ ಮುಂದೆ ಓಡುತ್ತಿದ್ದ ಲಾರಿ ಸಮೀಪಿಸಿತು. ಅಶೋಕ ಸುಷಮಾ ರಿವಾಲ್ವರ್ ಗುರಿ ಹಿಡಿದರು.

ಮುಂದಿದ್ದ ಲಾರಿ ಅಡ್ಡಾದಿಡ್ಡಿಯಾಗಿ ಓಡುತ್ತಿತ್ತು. ಗುರಿ ಹಿಡಿಯುವುದು ಕಷ್ಟದ ಮಾತಾಗಿತ್ತು. ಆದರೂ ಇಬ್ಬರೂ ಕ್ಷಣ ಮಾತ್ರದಲ್ಲಿ ಸರಿಯಾದ ಗುರಿ ನೋಡಿ ಟ್ರಿಗರ್ ಎಳೆದಾಗ ಒಂದೇ ಬಾರಿಗೆ ಗುಂಡುಗಳು ಸಿಡಿದವು. ಇಬ್ಬರಿಗೂ ಆಚ್ಚರಿ. ತಮ್ಮೆರಡು ಗುಂಡುಗಳ ಸಪ್ಪಳದೊಂದಿಗೆ ಮತ್ತೊಂದು ಮೂರನೆಯ ಸಪ್ಪಳ ಕೇಳಿಸಿತಲ್ಲ. ಆದು ಯಾರು ಹಾರಿಸಿದ್ದು ?

ಗಿರೀಶನ ಕಡೆ ನೋಡಿ ಕೇಳಿದರು.

"ನೀವೇನಾದರೂ ಗುಂಡು ಹಾರಿಸಿದಿರಾ ?"

"ಇಲ್ಲವಲ್ಲ" ಎಂದಾತ. ಮೂವರೂ ಲಾರಿ ಕಡೆ ನೋಡಿದರು. ಮದಿರೆ ಸೇವಿಸಿದವರಂತೆ ಅತ್ತಿತ್ತ ಓಲಾಡಿ ಬಲಭಾಗದಲ್ಲಿದ್ದ ಭಾರಿ ಗಾತ್ರದ ಮರಕ್ಕೆ ಢಿಕ್ಕಿ ಕೊಟ್ಟಿತದು. ಅದೃಷ್ಟವಶಾತ್ ಪೆಟ್ರೋಲ್ ಟ್ಯಾಂಕಿಗೆ ಬೆಂಕಿ ತಗಲಿರಲಿಲ್ಲವಾದ್ದರಿಂದ ಬೆಂಕಿ ಹೊತ್ತಿ ಉರಿಯಲಿಲ್ಲ.. ಆಸ್ಫೋಟವಾಗಲಿಲ್ಲ.

ಜೀಪು ನಿಂತಿತು ಲಾರಿಯಿಂದ ತುಸು ದೂರದಲ್ಲಿ. ಎಲ್ಲರೂ ಇಳಿದು ಆದರತ್ತ ನಡೆದರು. ಆದರ ಹಿಂದಿನ ಎಡಬಲದ ಎರಡೂ ಟೈಯರ್‌ಗಳು ಸಿಡಿದಿದ್ದವು. ಆವರಿಟ್ಟ ಗುರಿ ನೇರವಾಗಿ ಟಯರ್‌ಗೆ ಬಡಿದಿದ್ದವು. ಸುತ್ತು ಹಾಕಿ ಮುಂದೆ ಬಂದರು. ಡ್ರೈವರ್ ಮರ ಮತ್ತು ಲಾರಿ ಮಧ್ಯೆ ಸಿಕ್ಕಿದ್ದ. ಆವನ ಹಣೆ ಮೇಲೆ ಮಧ್ಯಭಾಗದಲ್ಲೊಂದು ಛಿದ್ರ. ಆದರಿಂದ ಇಳಿದು ಬರುತ್ತಿರುವ ರಕ್ತಧಾರೆ. "ಅರೆ ಈ ಗಾಯ ರಿವಾಲ್ವರ್ ಗುಂಡಿನದು. ಎದುರಿನಿಂದ ನೇರವಾಗಿ ಇಷ್ಟು ಸರಿಯಾಗಿ ಗುರಿಯಿಟ್ಟು ಹೊಡೆದವರಾರು ?"

ಆತ್ಯಾಶ್ಚರ್ಯದಿಂದ ಕೇಳಿದ ಗಿರೀಶ್. ಅಶೋಕ ಮತ್ತು ಸುಷಮಾ ಇಬ್ಬರಿಗೂ ರಹಸ್ಯ ತಿಳಿದಿತ್ತು. ಅವರಿಬ್ಬರೂ ನಗುತ್ತಿದ್ದರು. ಲಾರಿ ಮೇಲಿದ್ದ ಮರದ ಕೊಂಬೆ ಅಲುಗಿತು. ಕೊಂಬೆಯಿಂದ ಕೆಳಗೆ ಜಿಗಿದ ವ್ಯಕ್ತಿಯನ್ನು ನೋಡಿದ ಗಿರೀಶ ಮುಖ ಅರಳಿತು.

"ಓಹೋ ಮೇಜರ್. ನೀವಾ. ಈಗರ್ಥವಾಯಿತು" ಮರುಕ್ಷಣ ನೆನಪಾಯ್ತು.

"ಅಜಿತ್ ಪ್ರಸಾದ್‌ಗೆ ಗುಂಡಿಕ್ಕಿ ಈತ ಓಡಿ ಬಂದ ಲಾರಿಯೊಂದಿಗೆ. ಹೀಗಾಗುತ್ತದೆ ಎಂದು ನನಗೆ ಮೊದಲೇ ಗೊತ್ತಿತ್ತು. ಅಜಿತ್ ಈಗ ಶತ್ರುವಿಗೆ ಹಣ್ಣು ತೆಗೆದ ಸಿಪ್ಪೆ. ಅವರಿಂದ ಉಪಯೋಗವಿಲ್ಲವೆಂದರಿತು ಮುಗಿಸಲು ಯತ್ನಿಸುತ್ತಾನೆಂದು ಗ್ರಹಿಸಿ ಅವನಿಗಾಗಿ ಇಲ್ಲಿ ಕಾದು ಕುಳಿತಿದ್ದೆ. ಬೇಗ ನಡೆಯಿರಿ. ಅಜಿತಪ್ರಸಾದನನ್ನು ವಿಚಾರಿಸುವಾ. ನೀವು ನಿಮ್ಮ ಸಿಬ್ಬಂದಿಗೆ ಹೇಳಿ ಈ ಲಾರಿಯನ್ನು ಠಾಣೆಗೆ ಎಳೆದು ತರಿಸಿ"

ಎಲ್ಲರೂ ಟೋಲ್‌ನಾಕಾದ ಬಳಿ ಬಂದರು. ಆಗಲೇ ಸುಮಾರು ಜನ ಅಲ್ಲಿ ಸೇರಿದ್ದರು. ಅಜಿತ್‌ಗೆ ಪ್ರಜ್ಞೆ ಇರಲಿಲ್ಲ. ಅವನನ್ನು ಜೀಪಿಗೆ ಹಾಕಿಕೊಂಡು ಆಸ್ಪತ್ರೆಯತ್ತ ಓಡಿಸಿದರು.

ಎರಡೂ ಗುಂಡುಗಳು ಅಪಾಯಕಾರಿ ಸ್ಥಳದಲ್ಲಿ ಬಡಿದಿರಲಿಲ್ಲ. ಹೀಗಾಗಿ ಪ್ರಾಣಕ್ಕೆ ಅಪಾಯವಿಲ್ಲವೆಂದು ಡಾಕ್ಟರ್ ತಿಳಿಸಿದರು. ಸಮಾಧಾನದ ಉಸಿರಿನೊಂದಿಗೆ ಎಲ್ಲರೂ ಠಾಣೆಯತ್ತ ಬಂದರು. ಕಾಫಿ ಕುಡಿಯುತ್ತಿದ್ದಂತೆ ಸುದ್ದಿ ತಿಳಿದು ಪೊಲೀಸ್ ವರಿಷ್ಠಾಧಿಕಾರಿಗಳು, ಗಣ್ಯರು, ಪತ್ರಿಕೆಯವರು ಠಾಣೆಗೆ ನುಗ್ಗಿದರು. ಅವರೆಲ್ಲರಿಗೂ ಸಮಾಧಾನದ ಉತ್ತರ ಕೊಡುತ್ತಿರುವಾಗಲೇ ಅಪಘಾತಕ್ಕೀಡಾದ ಲಾರಿಯನ್ನು ಎಳೆಸಿಕೊಂಡು ಬರಲಾಯಿತು. ಡ್ರೈವರ್ ಅಸು ನೀಗಿದ್ದ. ಅವನನ್ನು ಬಿಟ್ಟರೆ ಅದರಲ್ಲಿ ಬೇರೆ ಯಾರೂ ಇರಲಿಲ್ಲ.

ಎಲ್ಲರ ದೃಷ್ಟಿ ಲಾರಿ ಮೇಲೆ.

"ಈ ಲಾರಿಯಲ್ಲಿ ಕನಿಷ್ಠ ಒಂದು ಕೋಟಿ ರೂಪಾಯಿ ಬೆಲೆ ಚಿನ್ನವಿದೆ. ಇದನ್ನು ಮರೆಮಾಡಲೆಂದೇ ಅಪರಾಧಿ ನಿನ್ನೆ ರಾತ್ರಿ ಕೇವಲ ಹತ್ತು ಚಿನ್ನದ ಬಿಸ್ಕತ್ ಇದ್ದ ಓರ್ವ ಅಮಾಯಕ ವಿಕ್ಷಿಪ್ತ ಯುವಕನನ್ನು ಬಲಿಪಶು ಮಾಡಿದ"

ಮೇಜರ ಚಿನ್ನವನ್ನು ಕಳ್ಳತನದಿಂದ ಸಾಗಿಸುವ ವಿಧಾನ ವಿವರಿಸಿದಾಗ ಅವರೆಲ್ಲ ಆಚ್ಚರಿಯಿಂದ ಬೆರಗಾದರು. ಲಾರಿ ಶೋಧನೆಗೆ ಆರಂಭವಾಯಿತು. ಸಂಪೂರ್ಣವಾಗಿ ತೆಂಗಿನಕಾಯಿ ತುಂಬಿ ಮೇಲೆ ಟಾರ್ಪಾಲ್ ಹೊದಿಸಿ ಹಗ್ಗದಿಂದ ಚೆನ್ನಾಗಿ ಬಿಗಿದಿದ್ದರು. ಒಂದಿಂಚು ಬಿಡದೇ ಲಾರಿ ಶೋಧಿಸಿದರೂ ಒಂದು ಚೂರು ಚಿನ್ನ ಸಿಗಲಿಲ್ಲ. ಎಲ್ಲರೂ ಹೇಮಂತನೆಡೆ ಹೊರಳಿದರು. ಹೇಮಂತ ಮುಗುಳ್ನಕ್ಕ.

"ಖಂಡಿತವಾಗಿ ಚಿನ್ನ ಈ ಲಾರಿಯಲ್ಲಿದೆ"

ಮೇಜರ ಮುಂದೆ ಮಹಾ ಬುದ್ದಿವಂತ, ಪ್ರಚಂಡ ಮುತ್ಸದ್ದಿ ಎಂದು ಕೇಳಿದ್ದೆವು. ಆತನೇ ಈ ರೀತಿ ಮಾತನಾಡುತ್ತಿದ್ದಾನಲ್ಲ ಎಂದು ಮೂಗು ಮುರಿದರು ಕೆಲವರು.

ಹೇಮಂತ ಅಶೋಕ ಹಾಗೂ ಸುಷಮಾರನ್ನು ಕರೆದು ಅವರ ಕಿವಿಯಲ್ಲಿ ಏನೋ ಹೇಳಿದ. ಮೂವರೂ ಸೇರಿ ಎಲ್ಲಾ ತೆಂಗಿನಕಾಯಿಗಳನ್ನು ಬೇರೆ ಬೇರೆ ಮಾಡಿ ಚೆನ್ನಾಗಿ ಪರಿಶೀಲಿಸತೊಡಗಿದರು. ಐದಾರು ನಿಮಿಷಗಳಲ್ಲಿ ಅವರ ಕೈಗೆ ಏಳೆಂಟು ತೆಂಗು ದೊರೆತವು. ಅವನ್ನು ಎಲ್ಲರಿಗೂ ತೋರಿಸಿದ ಹೇಮಂತ.

"ಇವೆಲ್ಲ ತೆಂಗಿನಕಾಯಿಗಳು, ಈ ಲಾರಿ ಕೇರಳದ್ದು. ಕೇರಳದಿಂದ ಬಂದ ಈ ತೆಂಗಿನಕಾಯಿಗಳು ಮಧ್ಯೆ ಇರುವ ಈ ಏಳೆಂಟು ತೆಂಗುಗಳು ನಿಜವಾಗಿದ್ದವುಗಳಲ್ಲಿ ಕೃತಕವಾದವುಗಳು. ಇಂಥ ಇನ್ನೂ ಎಷ್ಟೋ ಕಾಯಿಗಳು ಇದರಲ್ಲಿ ಇವೆ. ಮೊದಲು ಇವನ್ನು ಪರೀಕ್ಷಿಸಿ. ತೆಂಗಿನ ಕಣ್ಣು ಇರುವ ಭಾಗದಲ್ಲಿ ಛಿದ್ರ ಇದೆ. ಈ ಛಿದ್ರದಿಂದ ಚಿನ್ನದ ರಸವನ್ನು ಒಳಗೆ ಇಳಿಸುತ್ತಾರೆ. ಸಾವಿರಾರು ತೆಂಗಿನಕಾಯಿಗಳಲ್ಲಿ ಇಂಥ ಐವತ್ತು ಅರವತ್ತು ಕಾಯಿಗಳು ಇವೆ. ನೀವೇ ಯೋಚಿಸಿ ಎಷ್ಟು ಚಿನ್ನವಾಯಿತು"

ಒಂದು ಕಾಯಿಯನ್ನು ಒಡೆದ ಆತ. ಒಳಗೆ ಎರಡು ಹೋಳುಗಳಲ್ಲಿ ಚಿನ್ನದ ಲೇಪನ.

"ಆಹಾಹಾ.. ಇದೆಂಥ ಚಾಣಾಕ್ಷ ಉಪಾಯ" ಎಲ್ಲರೂ ಬಾಯಿಬಿಟ್ಟರು.

"ಇನ್ನೂ ಇದೆ. ನೋಡಿ ತೋರಿಸುತ್ತೇನೆ" ಮತ್ತೆ ಎಲ್ಲರಿಗೂ ಹೇಮಂತನ ಮತ್ತೊಂದು ಚಮತ್ಕಾರ ನೋಡಲು ಸಿದ್ಧರಾದರು.

ಲಾರಿಗೆ ಬಿಗಿದ ಹಗ್ಗವನ್ನು ಎಲ್ಲರಿಗೂ ತೋರಿಸಿದ ಹೇಮಂತ. ಮೇಲೆ ತೆಂಗಿನ ನಾರಿನಿಂದ ಮಾಡಿದ ಎಳೆಗಳಿವೆ. ನೋಡಲು ಖಾಲಿ ಹಗ್ಗ. ಒಳಗಿದೆ ನೋಡಿ.. ಚಿನ್ನ ಎಳೆಗಳು.

ಹಗ್ಗವನ್ನು ಸೀಳಿದ. ಪಳಪಳ ಹೊಳೆಯುವ ಚಿನ್ನದ ಎಳೆಗಳು. ಚಿನ್ನದ ಎಳೆ ಸೇರಿಸಿ ಹಗ್ಗ ಹೊಸೆಯಲಾಗಿತ್ತು.

"ಈಗ ಅರ್ಥವಾಯಿತೆ? ಚಿನ್ನದ ಕಳ್ಳಸಾಗಾಣಿಕೆ ಹೇಗೆಂದು? ಇದೆಲ್ಲ ಚಿನ್ನ ಕೋಟಿ ರೂಪಾಯಿ ಬೆಲೆ ಬಾಳುತ್ತದೆ"

ಯಾರ ಬಾಯಿಯಿಂದಲೂ ಮಾತೇ ಹೊರಡಲಿಲ್ಲ. ಅವರೆಲ್ಲ ಮಂತ್ರ ಮುಗ್ಧರಾಗಿ ಹೇಮಂತನನ್ನೇ ನೋಡುತ್ತ ನಿಂತಿದ್ದರು. ಎಸ್.ಪಿ.ಅವರೇ ಕೇಳಿದರು.

''ಇದಕ್ಕೆ ಮುಖಂಡ ಯಾರು?''

''ಗೋಲ್ಡ್‌ಫಿಂಗರ್ ಅಂದರೆ ಚಿನ್ನದ ಬೆರಳು ಇದಕ್ಕೆ ಮುಖಂಡ. ಇಂದೇ ಅವನನ್ನು ಬಂಧಿಸಿ ನಿಮ್ಮೆಲ್ಲರ ಮುಂದೆ ನಿಲ್ಲಿಸ್ತೇನೆ. ಇದು ನನ್ನ ವಚನ ಮೇಜರ್ ಹೇಮಂತನ ಪಕ್ಕಾವಚನ''

ನಿರೀಕ್ಷಣಾಲಯದ ಎದುರು ಹಾಕಿದ ಪೆಂಡಾಲ್ ಜನರಿಂದ ಕಿಕ್ಕಿರಿದು ತುಂಬಿತ್ತು. ಕರ್ನಲ್ ಆಂಥೋನಿಯವರ ಹಿರಿತನದಲ್ಲಿ ಮೇಜರ ಹೇಮಂತ ಹಾಗೂ ಅವನ ಸಂಗಡಿಗರಿಗೆ ಸಂಭ್ರಮದಿಂದ ಸ್ವಾಗತಿಸಲಾಯಿತು. ಕರ್ನಲ್ ತಾವು ನುಡಿದಂತೆ ಖರ್ಚು ವೆಚ್ಚ ಮೇಲೆ ಪರಿಶ್ರಮ ಎಂದು ಸೇರಿಸಿ ಮೇಜರನಿಗೆ ಒಂದು ಲಕ್ಷ ರೂಪಾಯಿ ನೀಡಿದರು.

ಹೇಮಂತ ಮಾತನಾಡಲು ಎದ್ದು ನಿಂತ. ಎಡಕ್ಕೆ ಸಾಲಾಗಿ ಕುಳಿತಿದ್ದ ವಿನಾಯಕ, ಗಂಗಾಧರ, ಚಂದ್ರಕಾಂತ, ಬಸವರಾಜರನ್ನು ನೋಡಿ ನಕ್ಕ. ಎದುರು ಕುಳಿತ ಅನಾಥಾಲಯದ ಮಕ್ಕಳು.. ಅವರ ಪಕ್ಕದಲ್ಲಿದ್ದ ಪತ್ರಕರ್ತರು, ಅವರ ಹಿಂದೆ ಕುಳಿತ ಜನರನ್ನು ಒಂದು ಬಾರಿ ನೋಡಿ ಸಮಾಧಾನದಿಂದ ಮಾತು ಆರಂಭಿಸಿದ.

''ನಾನು ಬಂದದ್ದು ನಿರೀಕ್ಷಣಾಲಯದ ಅನಾಥ ಹಾಗೂ ಅಪರಾಧಕ್ಕೆ ತುತ್ತಾಗಿ ದಂಡರೂಪದಲ್ಲಿ ಶಿಕ್ಷೆ ಅನುಭವಿಸುತ್ತಿರುವ ಮಕ್ಕಳೊಂದಿಗೆ ಒಂದು ದಿನ ಕಳೆಯಲು. ಇಲ್ಲಿ ಬರುತ್ತಲೇ ಅಮಾಯಕ ನಿರಪರಾಧಿ ಮಕ್ಕಳು ಶಿಕ್ಷೆ ಅನುಭವಿಸುತ್ತಿದ್ದಾರೆ ಎಂಬುದು ತಿಳಿಯಿತು. ಅವರನ್ನು ಬಲಿಪಶು ಮಾಡಿ ಸಮಾಜದ್ರೋಹಿಗಳು ತಮ್ಮ ಕಾಯಕ ನಡೆಸುತ್ತಿದ್ದಾರೆ. ಅವರಿಗೆ ಕೆಲವೊಂದು ಭ್ರಷ್ಟ ಪೊಲೀಸ್ ಅಧಿಕಾರಿಗಳ ಸಹಾಯವೂ ಇದೆ ಎಂದು ತಿಳಿಯಿತು. ಮಕ್ಕಳ ಮೇಲಿನ ಕರುಣೆಯಿಂದ ನಾನು ಈ ಕೇಸು ವಿಚಾರಿಸಬೇಕೆಂದು ಮನಸ್ಸು ಮಾಡಿದೆ. ಅಂದೇ ನನ್ನ ಕಣ್ಣೆದುರೇ ನಿರೀಕ್ಷಣಾಲಯದ ಗುಗ್ಗಪ್ಪನನ್ನ ಅಪಹರಿಸಲು ಯತ್ನ ನಡೆಯಿತು. ಅಶೋಕನ ಜಾಣ್ಮೆಯಿಂದಾಗಿ ಕಾರ್ಯ ಕೈಗೂಡಲಿಲ್ಲ. ಮರುದಿನದಿಂದ ನಾನು ಸೀರಿಯಸ್ಸಾಗಿ ವಿಚಾರಣೆ ಆರಂಭಿಸಿದೆ. ಗುಗ್ಗಪ್ಪ ಸಹ ಅಪರಾಧಿಗೆ ಬಲಿಪಶು ಆದವ. ಚಿನ್ನ ಸಾಗಿಸುವಾಗ ಸಿಕ್ಕಿಬಿದ್ದವ. ವಿನಾಯಕ, ಬಸವರಾಜ, ಚಂದ್ರಕಾಂತ, ಗಂಗಾಧರ ಸಹ ಇವನಂತೆಯೇ. ಇವರೆಲ್ಲರನ್ನು ಒಬ್ಬನೇ ಪೊಲೀಸ್ ಅಧಿಕಾರಿ ಬಂಧಿಸಿದ್ದ. ಆತನೇ ಕರಿನಿಂಗಯ್ಯ. ಆತ

ಶತ್ರುಗಳಿಗೆ ಸಹಾಯಕನಾಗಿದ್ದ. ಹೀಗಾಗಿ ಒಂದೇ ತಿಂಗಳಿನಲ್ಲಿ ಆತನನ್ನು ಅವರು ಮುಗಿಸಿ ಅದಕ್ಕೆ ಅಪಘಾತದ ರೂಪಕೊಟ್ಟರು. ಇದರ ಮೇಲ್ವಿಚಾರಣೆಗೆ ಬಂದ ಪೊಲೀಸ್ ಅಧಿಕಾರಿ ಸಹ ಭ್ರಷ್ಟ ಅಧಿಕಾರಿ. ಆತ ಕಳ್ಳಸಾಗಾಣಿಕೆದಾರರ ಜೊತೆ ಹೊಂದಿಕೊಂಡ. ಕೇಸು ಅಲ್ಲಿಗೆ ಮುಗಿಯಿತು.

ನಾನು ಬಂದ ಮೇಲೆ ಅದನ್ನು ಪುನಃ ವಿಚಾರಣೆಗೆ ತೆಗೆದುಕೊಂಡೆ. ಆಗ ಮುಖ್ಯಸ್ಥ ಗೋಲ್ಡ್ ಫಿಂಗರ್ ಅಥವಾ ಚಿನ್ನದ ಬೆರಳು.. ಗಾಬರಿಯಾದ.. ಆತನ ಎಡಕ್ಕೆ ಕಿರುಬೆರಳು ಕತ್ತರಿಸಿ ಹೋಗಿತ್ತಾದ್ದರಿಂದ ಅಲ್ಲಿ ಆತ ಚಿನ್ನದ ಬೆರಳು ಧರಿಸುತ್ತಿದ್ದ. ಇದನ್ನು ನೋಡಿ ಗುರುತಿಸಿದವ ಗುಗ್ಗಪ್ಪ ಒಬ್ಬನೇ. ಅವನಿಗೆ ಸಹಾಯಕ ಭೋಟಾಬಾಸ್ ಪಾಕಿಸ್ತಾನದ ಗೂಡಾಚಾರಿ ದಾವೂದ್. ಇಲ್ಲಿಂದ ಹದಿನೆಂಟು ಕಿಲೋಮೀಟರ್ ದೂರದಲ್ಲಿ ತೋಟದ ಮಧ್ಯದಲ್ಲಿ ಫ್ಯಾಕ್ಟರಿ ಇದೆ. ಅಲ್ಲಿ ಈ ರೀತಿ ತಂದ ಚಿನ್ನವನ್ನು ಕರಗಿಸಿ ಮೆಟಲ್ ಬಿಸ್ಕೆಟ್ ಮಾಡುವ ಕೆಲಸ ನಡೆಯುತ್ತಿದೆ. ಅದರ ಮೇಲ್ವಿಚಾರಣೆ ಭೋಟಾಬಾಸ್‌ನದು.

ಗೋಲ್ಡ್‌ಫಿಂಗರ್ ನನ್ನ ನೋಡಿ ಗಾಬರಿಯಾದ. ನನ್ನನ್ನು ಇಲ್ಲಿಂದ ಓಡಿಸಲು ಯತ್ನಿಸಿದ. ಫೋನು ಮಾಡಿ ಹೆದರಿಸಿದ. ನಾನು ಒಪ್ಪಲಿಲ್ಲ. ಪರಿಣಾಮವಾಗಿ ಅಪರಾಧಿಗಳ ಹಿಂದೆ ಬಿಟ್ಟಿದ್ದ ಅಶೋಕ ಹಾಗೂ ಸುಷಮಾ ಇವರನ್ನು ಬಂಧಿಸಿ ನನ್ನ ಮೇಲೆ ಒತ್ತಾಯ ತಂದರು. ಅಷ್ಟರಲ್ಲಿ ನನ್ನಿಬ್ಬರು ಸಂಗಡಿಗರು ಭೋಟಾಬಾಸ್‌ನೊಂದಿಗೆ ಓಡಿಬಂದರು. ನಾನು ಅಜಿತ್‌ಪ್ರಸಾದನನ್ನು ಬಂಧಿಸಿ ಅವರ ಮುಖವಾಡ ಕಳಚಿದ್ದೆ. ಅವನಿಂದಲೇ ಚಿನ್ನ ಸಾಗಿಸಲಾಗುತ್ತಿತ್ತು. ಇದಾದ ಮೇಲೆ ಗೋಲ್ಡ್‌ಫಿಂಗರ್ ಫೋನು ಬಂತು. ನಾನವನಿಂದ ಇಪ್ಪತ್ತೈದು ಲಕ್ಷ ರೂಪಾಯಿ ಪಡೆದು ಊರು ಬಿಡುವ ನಾಟಕ ಮಾಡಿದೆ. ಆತ ಮೋಸ ಹೋದ.

ಅಜಿತಪ್ರಸಾದ ಪಶ್ಚಾತ್ತಾಪದಿಂದ ಸರಿದಾರಿಗೆ ಬಂದ. ನಮಗೆ ಸಹಾಯ ಮಾಡಲು ಮುಂದಾದ. ಅವನಿಂದಾಗಿಯೇ ವಿನಾಯಕ, ಗಂಗಾಧರ, ಬಸವರಾಜ, ಚಂದ್ರಕಾಂತ್ ಬಿಡುಗಡೆಯಾದರು. ಬಾಸ್‌ಗೆ ಅಜಿತ್‌ಪ್ರಸಾದನ ಉಪಯೋಗ ಮುಗಿದಿತ್ತು. ಆತ ನಿರುಪಯೋಗಿ ಎಂದು ತಿಳಿದು ಅವನನ್ನು ಕೊಲ್ಲಲು ಪ್ರಯತ್ನಿಸಿದರು. ನಾವು ಅವನನ್ನು ಉಳಿಸಿಕೊಂಡೆವು.

ಕೋಟಿ ಬೆಲೆಯ ಚಿನ್ನ ನಮ್ಮ ವಶವಾಯಿತು.

ಈ ರೀತಿ ಗೋಲ್ಡ್‌ಫಿಂಗರ್‌ನ ಗ್ಯಾಂಗ್ ನಾಶವಾಯಿತು''

ಎಲ್ಲರೂ ಚಪ್ಪಾಳೆ ತಟ್ಟಿ ಅಭಿನಂದಿಸಿದರು.

ಎಸ್.ಪಿ. ಎದ್ದು ನಿಂತು ಕೇಳಿದರು.

"ಇನ್ನೂ ಗೋಲ್ಡ್‌ಫಿಂಗರ್ ಸೆರೆಸಿಕ್ಕೇ ಇಲ್ಲವಲ್ಲ"

"ಅವನೆಲ್ಲಿ ಹೋಗ್ತಾನೆ. ನಿಮ್ಮ ಬಳಿಯೇ ಇದ್ದಾನೆ. ಇದೋ ಇವನೇ. ಚಿನ್ನದ ಬೆರಳು ಧರಿಸುವ ಗೋಲ್ಡ್‌ಫಿಂಗರ್ ಬೇರೆ ಯಾರೂ ಅಲ್ಲ ನಿವೃತ್ತ ಸೈನ್ಯಾಧಿಕಾರಿ. ಪೊಲೀಸ್ ಅಧಿಕಾರಿ ಹಾಗೂ ರಿಮಾಂಡ್‌ಹೋಂ ಚೇರ್‌ಮನ್ ಕರ್ನಲ್ ಆಂಥೋನಿ"

ಸಿದ್ದನಾಗಿಯೇ ಇದ್ದ ಗಿರೀಶ ಒಂದೇ ಹಾರಿಕೆಗೆ ಕರ್ನಲ್ ಬಳಿ ಸಾರಿ ಕೈಗೆ ಕೋಳ ತೊಡಿಸಿದ... ಹೇಮಂತ ಮುಂದುವರೆಸಿದ.


"ಕರ್ನಲ್ ಸೈನ್ಯದಲ್ಲಿರುವಾಗ ಎಡಗೈ ಕಿರುಬೆರಳು ಕತ್ತರಿಸಿಹೋಯಿತು. ನಿವೃತ್ತಿ ಹೊಂದಿ ಪೊಲೀಸ್ ಇಲಾಖೆಗೆ ಸೇರಿದ. ಈತ ಕೇರಳದವ. ಅಲ್ಲಿಗೆ ಬರುವ ಪರದೇಶದ ಚಿನ್ನವನ್ನು ಈ ರೀತಿ ಸಾಗಿಸುವ ಗ್ಯಾಂಗ್ ಕಟ್ಟಿ ತಾನೇ ಚೀಫ್ ಆದ. ಪೊಲೀಸ್ ಅಧಿಕಾರಿ ಭ್ರಷ್ಟಾಚಾರಿ ಕರಿನಿಂಗಯ್ಯ ಇವನ ಕೈಗೊಂಬೆ. ಅವನನ್ನು ಮುಗಿಸಿದ್ದು ಈತನೇ. ಮುಂದೆ ವಿಚಾರಣೆಗೆ ಬಂದಾಗ ಅದರ ಫೈಲು ಮುಚ್ಚಿ ನಿಶ್ಚಿಂತೆಯಿಂದ ಇದ್ದ ಗೋಲ್ಡ್‌ಫಿಂಗರ್ ಈತನೇ. ನನಗೆ ಫೋನ್ ಮಾಡಿದಾಗಲೇ ನಾನಾತನ ಧ್ವನಿ ಗುರುತಿಸಿದ್ದೆ. ಅಲ್ಲದೆ ಆತ ಯಾವಾಗಲೂ ಹ್ಯಾಂಡ್‌ಗ್ಲೌಜ್ ಧರಿಸುವುದರ ಬಗ್ಗೆ ನಾನು ಸಂಶಯಪಟ್ಟೆ. ಅದೆಲ್ಲ ಒಟ್ಟುಗೂಡಿ ನಾ ಬೀಸಿದ ಬಲೆಗೆ ಈ ಗೋಲ್ಡ್‌ಫಿಂಗರ್ ಬಿದ್ದ.. ಸೆರೆಯಾದ"

ಆಂಥೋನಿ ಕೈಯಿಂದ ಕೈಚೀಲ ಕಳಚಿದರು.

ನಿಜವಾಗಿಯೂ ಎಡಗೈನ ಕಿರುಬೆರಳಿರಲಿಲ್ಲ.

ಅಲ್ಲಿತ್ತು ಚಿನ್ನದ ಕಿರುಬೆರಳು!

ಮತ್ತೊಮ್ಮೆ ಕಿವಿಗಡಚಿಕ್ಕುವಂತೆ ಕರತಾಡನ. ಹೇಮಂತ ಒಟ್ಟು ಇಪ್ಪತ್ತಾರು ಲಕ್ಷ ರೂಪಾಯಿ ನಿರೀಕ್ಷಣಾಲಯದ ಅಭಿವೃದ್ಧಿಗೆ ಕಾಣಿಕೆ ನೀಡಿದ. ಅಲ್ಲಿ ಸೇರಿದ್ದ ಸಾವಿರಾರು ಜನರ ಪಾಲಿಗೆ ಆರಾಧ್ಯ ಪುರುಷನಾಗಿ ಸುಷಮಾ ಹಾಗೂ ಅಶೋಕರೊಂದಿಗೆ ವೇದಿಕೆ ಕೆಳಗಿಳಿದು ಹೊರಟು ನಿಂತಾಗ ಮಕ್ಕಳೊಂದಿಗೆ ಕೆಂಗಪ್ಪನವರೂ ಕಣ್ಣೀರು ಮಿಡಿಯದಿರಲಿಲ್ಲ.




ನಂ.32, 1ನೇ ಮಹಡಿ, 1ನೇ ಅಡ್ಡ ರಸ್ತೆ, 6ನೇ ಮುಖ್ಯರಸ್ತೆ
ಚಾಮರಾಜಪೇಟೆ, ಬೆಂಗಳೂರು-560 018.